ಬೋಧನೆ ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 19, 2012 ಪುಟ 20 ರೂ. 14/-




ಮಾನೇಸರ್‌ನಲ್ಲಿ ಮಾವೋವಾದಿಗಳು

ಉಗ್ರರ ಬಂಧನ

ಜಿತೇಂದ್ರನ ಸಾಹಸವೂ ಉತ್ತರವಿಲ್ಲದ ಪ್ರಶ್ನೆಗಳೂ



ಕಾರ್ಮಿಕರ ಪಾಲಿಗೆ ವಿಷವಾದ ಹಿಮಾಲಯ ಡ್ರಗ್ಸ್



ಅರಸು ಬಂಗಲೆ ಹರಾಜ್!



ಹೊಸಕೋಟೆ: ಭ್ರಷ್ಟ ಆಫೀಸರ್ ರಾಮಪ್ರಕಾಶ್



ಗೋಕರ್ಣ ಹುಂಡಿ ದೋಚಿದ್ದು ಯಾರು?

ಮಾಧ್ಯಮಗಳು-ಪೊಲೀಸರು ಉಗ್ರಗಾಮಿಗಳನ್ನು ಸೃಷ್ಟಿಸದಿರಲಿ...


ಅನ್ಯಾಯವಾಗಿ ಬಂಧನಕ್ಕೊಳಗಾಗಿದ ಡಾ. ಹನೀಫ್

ಚಾರ್ವಾಕ



• ಶಿವಸುಂದರ್

ಕೆಲವು ರಾಜಕಾರಣಿಗಳನ್ನು ಮತ್ತು ಪತ್ರಕರ್ತರನ್ನು ಕೊಲ್ಲಲು ಸಂಚು ನಡೆಸಿದ್ದರೆಂಬ ಹೆಸರಲ್ಲಿ 11 ಮುಸ್ಲಿಮ್ ಯುವಕರನ್ನು ಸಿಸಿಬಿ ಪೊಲೀಸರು ಅರೆಸ್ಟು ಮಾಡಿದ ಸುದ್ದಿ ಇದ್ದಕ್ಕಿದ್ದಂತೆ ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ವಾತಾವರಣದ ಅಜೆಂಡಾಗಳನ್ನೇ ಬದಲಿಸಿಬಿಟ್ಟಿದೆ. ಬಿಜೆಪಿ ಭ್ರಷ್ಟಾಚಾರ, ಬರ, ಬಿಜೆಪಿಯೊಳಗಿನ ಜಾತಿರಾಜಕಾರಣ, ಇನ್ನಿತ್ಯಾದಿ ವಿಷಯಗಳೆಲ್ಲಾ ಹಿಂದೆ ಸರಿದು ಇದ್ದಕ್ಕಿದ್ದಂತೆ ಭಯೋತ್ಪಾದನೆಯೇ ಎಲ್ಲಕ್ಕಿಂತ ಮುಖ್ಯ ವಿಷಯವಾಗಿಬಿಟ್ಟಿದೆ. ಕಂಡರಿಯದ ಬ್ರಹ್ಮಾಂಡ ಭ್ರಷ್ಟಾಚಾರ, ಸಾರ್ವಜನಿಕ ಅನೈತಿಕತೆಯಿಂದ ಈವರೆಗೆ ಸಾಮಾಜಿಕ ಜೀವನದಲ್ಲಿ ವಿಲನ್‌ಗಳಾಗಿದ್ದವರೇ ಈ ಘಟನೆಯಿಂದಾಗಿ ರಾತ್ರೋರಾತ್ರಿ ಜೀವಂತ ಹುತಾತ್ಮರಂತೆ ಕಣ್ಣೀರಿಡುತ್ತಿದ್ದಾರೆ.

ಈಗ ಬಂಧಿತರಾಗಿರುವ ಆರೋಪಿಗಳು ನಿಜಕ್ಕೂ ಪೊಲೀಸರು ಹೇಳುವಂಥ ಸಂಚಿನಲ್ಲಿ ಭಾಗಿಯಾಗಿದ್ದರೆ ನಿಷ್ಪಕ್ಷಪಾತ ವಿಚಾರಣೆ ನಡೆದು ಶಿಕ್ಷೆಯಾಗಲೇ ಬೇಕು. ಆದರೆ ನಾಟಕೀಯ ಎನ್ನಿಸುವಂತ ಈ ಎಲ್ಲಾ ಬೆಳವಣಿಗೆಗಳು 2007-08ರ ಚುನಾವಣಾ ಸಂದರ್ಭದಲ್ಲಿ ನಡೆದ ಬೆಳವಣಿಗೆಗಳನ್ನು ಬೇಡವೆಂದರೂ ನೆನಪಿಗೆ ತರುತ್ತಿವೆ. ಆಗಲೂ ಇದ್ದಕ್ಕಿದ್ದಂತೆ ಕರ್ನಾಟಕದ ರಾಜಕಾರಣದಲ್ಲಿ ಭಯೋತ್ಪಾದನೆಯ ಭೂತ ಆವಾಹನೆಯಾಗಿತ್ತು. ಆದರೆ ಅವೆಲ್ಲವೂ ಹಿಂದೂತ್ವವಾದಿ ರಾಜಕಾರಣದ ಮತ್ತೊಂದು ಕ್ರೂರ ಕುತಂತ್ರವೆಂದು ಸಾಬೀತಾಯಿತು. ಆದರೆ ಆ ವೇಳೆಗಾಗಲೇ ಸಾಕಷ್ಟು ಹಾನಿಯಾಗಿತ್ತು. ಹೀಗಾಗಿಯೇ


ಸಿಂಧಗಿಯಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿದ ಹಿಂದೂತ್ವವಾದಿಗಳು

ಹಿಂದಿನ ನೆನಪುಗಳ ಹಸಿರಾಗಿರುವ ಮತ್ತು ಸಾಮೂಹಿಕ ಮರೆವು ಮತ್ತು ಸಾಮೂಹಿಕ ಸನ್ನಿಗೆ ಬಲಿಬೀಳದ ಯಾವುದೇ ಕಾಳಜಿಯುಳ್ಳ ನಾಗರಿಕರಿಗೆ ಇದೂ ಕೂಡಾ ಕಳೆದ ಚುನಾವಣೆಗೆ ಮುನ್ನ ದೊಡ್ಡ ರೀತಿಯಲ್ಲಿ ಹುಯಿಲೆದ್ದು ಹುಸಿಯೆಂದು ಸಾಬೀತಾದ "ಭಯೋತ್ಪಾದನಾ ರಾಜಕಾರಣದ" ಮತ್ತೊಂದು ಆವೃತ್ತಿಯೋ? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

ಪ್ರಸ್ತುತ ಭಯೋತ್ಪಾದನೆಯ ಪ್ರಕರಣದ ರೀತಿಯಲ್ಲೇ 2007-08ರಲ್ಲಿ ಬಿತ್ತರಿಸಲ್ಪಟ್ಟ ಆ ಪ್ರಕರಣಗಳನ್ನು ಒಮ್ಮೆ ನೆನಪಿಗೆ ತಂದುಕೊಳ್ಳೋಣ:

1. 2007ರ ಜುಲೈ 2ರಂದು ಬೆಂಗಳೂರು ಮೂಲದ ಡಾ. ಹನೀಫ್ ಎಂಬುವವರನ್ನು ಆಸ್ಟ್ರೇಲಿಯಾ ಸರ್ಕಾರ ಬಂಧಿಸಿ ಅವರ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಂಡಿತು. ಏಕೆಂದರೆ 2007ರ ಜೂನ್ 30ರಂದು ಲಂಡನ್ನಿನ ಗ್ಲಾಸ್ಗೋ ಏರ್‌ಪೋರ್ಟ್ ಮೇಲೆ ಬಾಂಬ್ ದಾಳಿ ಮಾಡಿ ಮೃತನಾದ ಕಫೀಲ್ ಎಂಬುವವರಿಗೆ ಈತ ಸಂಬಂಧಿಯಾಗಿದ್ದ ಅಷ್ಟು ಸಾಕೆಂಬಂತೆ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಮಾಧ್ಯಮಗಳು ಪೊಲೀಸರಿಗಿಂತ ಎರಡು ಹೆಜ್ಜೆ ಮುಂದೆ ಹೋಗಿ ಹನೀಫ್ ಸಾಕ್ಷಾತ್ ಭಯೋತ್ಪಾದಕನೇ ಎಂಬ ರೀತಿ ದಿನನಿತ್ಯ 'ಸ್ಟೋರಿ'ಗಳನ್ನು ಕೊಡಲಾರಂಭಿಸಿದವು. ಆ ವೇಳೆಗಾಗಲೇ ಕರ್ನಾಟಕದಲ್ಲಿ ದಳ-ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಪ್ರಥಮ ಬಾರಿಗೆ ಬಿಜೆಪಿ ಅಧಿಕಾರದಲ್ಲಿ ಪಾಲು ಪಡೆದಿತ್ತು. ಪೊಲೀಸರಲ್ಲಿ ಬಲವಾದ ಪುರಾವೆ, ಅನುಮಾನಗಳಿಲ್ಲದಿದ್ದರೂ ನೂರಾರು ಅಮಾಯಕ ಮುಸ್ಲಿಮರನ್ನು ಬಂಧಿಸಲಾರಂಭಿಸಿದರು. ಮುಸ್ಲಿಮನಾಗಿರುವುದು, ಮನೆಯಲ್ಲಿ ಕುರಾನ್ ಸಿಕ್ಕಿದ್ದು ಮತ್ತು ದಿನಕ್ಕೆ ನಾಲ್ಕು ಬಾರಿ ನಮಾಜು ಮಾಡುವುದು ಸಹ ಭಯೋತ್ಪಾದಕರೆಂಬುದಕ್ಕೆ ಪುರಾವೆಯೆಂಬಂತೆ ಕಥೆ ಕಟ್ಟಲಾಯಿತು. ಆದರೆ ಆಸ್ಟ್ರೇಲಿಯಾ ಸರ್ಕಾರ ಕೇವಲ ನಾಲ್ಕೇ ವಾರಗಳಲ್ಲಿ ತಮ್ಮ ಪೊಲೀಸರು ತಪ್ಪು ಮಾಡಿದ್ದಾರೆಂದು ಬಹಿರಂಗ ಹೇಳಿಕೆ ಕೊಟ್ಟು ಹನೀಫರ ಪಾಸ್‌ಪೋರ್ಟನ್ನು ವಾಪಸ್ ಮಾಡಿ ಬೇಲ್ ಕೊಟ್ಟಿತು. ಮಾತ್ರವಲ್ಲ, ನಾಲ್ಕು ತಿಂಗಳಲ್ಲಿ ಡಾ. ಹನೀಫ್ ನಿರ್ದೋಷಿ ಎಂದು ಬಿಡುಗಡೆಯಾದರು. ಆದರೆ ಕರ್ನಾಟಕದ ಮಾಧ್ಯಮಗಳು ಮತ್ತು ಪೊಲೀಸರು ಮಾತ್ರ ತಮ್ಮಿಂದ ತಪ್ಪಾದ ಬಗ್ಗೆ ಕಿಂಚಿತ್ತೂ ವ್ಯಥಿಸಲಿಲ್ಲ!

2. ಕರ್ನಾಟಕದಲ್ಲಿ ಕಳೆದ ಬಾರಿ ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ 2008ರ ಮೇ 10 ರಂದು ಹುಬ್ಬಳ್ಳಿಯ ಕೋರ್ಟ್ ಹಾಲ್‌ನಲ್ಲಿ ಒಂದು ಬಾಂಬ್ ಸ್ಫೋಟವಾಯಿತು. ಆ ವೇಳೆಗಾಗಲೇ ದೇಶದ ಇತರೆಡೆಗಳಲ್ಲಿ ಅದರಲ್ಲೂ ಮಾಲೆಗಾಂವ್, ಸಂಜೋತಾ ಎಕ್ಸ್‌ಪ್ರೆಸ್, ಹೈದರಾಬಾದಿನ ಮೆಕ್ಕಾ ಮಸ್ಜಿದ್‌ಗಳಲ್ಲಿ ನಡೆದ ಬಾಂಬ್ ಸ್ಫೋಟಗಳಿಗೆ ಸಂಬಂಧಪಟ್ಟಂತೆ ಉತ್ತರ ಕರ್ನಾಟಕದ ಮತ್ತು ಬೆಂಗಳೂರಿನಲ್ಲಿ ಕೇರಳ ಮೂಲದ ಹಲವು ಮುಸ್ಲಿಂ ಯುವಕರನ್ನು ಬಂಧಿಸಲಾಗುತ್ತಿತ್ತು. ಅದೇ ಸಂದರ್ಭದಲ್ಲಿ ಈ ಬಾಂಬ್ ಬ್ಲಾಸ್ಟ್ ವಿಷಯದಲ್ಲೂ ಅಂತರರಾಷ್ಟ್ರೀಯ ಭಯೋತ್ಪಾದಕ ಸಂಘಟನೆಯನ್ನು ಹೊಣೆಯಾಗಿಸಿ ಹಲವು ಸ್ಥಳೀಯ ಮುಸ್ಲಿಮ್ ಯುವಕರನ್ನು ಬಂಧಿಸಲಾಯಿತು. ಪೊಲೀಸರಂತೂ ಬಾಂಬ್ ಸ್ಫೋಟದಲ್ಲಿ ಟೈಮರ್ ಬಳಕೆಯಾಗಿರುವುದರಿಂದ ಇದು ಮುಸ್ಲಿಮ್ ಉಗ್ರಗಾಮಿ ಸಂಘಟನೆಗಳದ್ದೇ ಕೈವಾಡವೆಂಬ ತೀರ್ಮಾನಕ್ಕೆ ಬಂದಿದ್ದರು. ಆದರೆ ಕೇವಲ ಆರು ತಿಂಗಳಲ್ಲಿ ಈ ಕಥೆಗಳೆಲ್ಲಾ ಸುಳ್ಳೆಂದು ಸಾಬೀತಾಗಿ 2009ರ ಜನವರಿ 12 ರಂದು ಈ ಘಟನೆಗೆ ನಿಜವಾದ ಕಾರಣಕರ್ತರಾದ ಹಿಂದೂತ್ವವಾದಿ ಸಂಘಟನೆಯಾದ ಶ್ರೀರಾಮ ಸೇನೆಯ ನಾಗರಾಜ ಜಂಬಗಿ ಮತ್ತು ಇತರ ಎಂಟು ಜನರನ್ನು ಬಂಧಿಸಲಾಯಿತು. ಇದರಲ್ಲಿ ಹಲವರು 2008ರಲ್ಲಿ ನಡೆದ ಮಾಲೆಗಾಂವ್ ಸ್ಫೋಟದ ಸಂಚಿನಲ್ಲೂ ಭಾಗವಹಿಸಿದ್ದರೆಂದು ಪೊಲೀಸರೇ ನಂತರ ಬಾಯಿ ಬಿಟ್ಟರು.

ಹೀಗಾಗಿ ಈ ಪ್ರಕರಣ ಎರಡು ಪ್ರಮುಖ ಪಾಠಗಳನ್ನು ಮಾಧ್ಯಮಗಳಿಗೆ ಮತ್ತು ಪೊಲೀಸರಿಗೆ ಕಲಿಸಿತ್ತು. ಒಂದು ಮುಸ್ಲಿಮ್ ಯುವಕರು ಅಮಾಯಕರು ಕೂಡಾ ಆಗಿರುತ್ತಾರೆ ಮತ್ತು ಎರಡು ಹಿಂದೂತ್ವವಾದಿ ಸಂಘಟನೆಗಳು ಬಾಂಬ್ ಸ್ಫೋಟದಂಥ ಉಗ್ರಗಾಮಿ ಚಟುವಟಿಕೆಗಳನ್ನು ಕೂಡಾ ನಡೆಸಬಲ್ಲರು ಎಂಬುದು. ಆದರೆ ಪೊಲೀಸರು ಪಾಠ ಕಲಿಯಲೇ ಇಲ್ಲ. ಪೊಲೀಸರು ಮುಸ್ಲಿಮರನ್ನು ಬಂಧಿಸಿದ್ದೇವೆ ಎಂದ ತಕ್ಷಣ ಅತಿ ಉತ್ಪ್ರೇಕ್ಷಿತ ವರದಿಗಳನ್ನು ಪ್ರಕಟಿಸಿ ವಿನಾಕಾರಣ ಅಮಾಯಕ ಮುಸ್ಲಿಮರನ್ನು ಅನುಮಾನದಿಂದ ನೋಡುವ ಭಾವನೆಯನ್ನು ಬಿತ್ತಿ ಸೌಹಾರ್ದ ಭಾವನೆಗೆ ಧಕ್ಕೆ ತಂದ ಬಗ್ಗೆ ಬಹುಪಾಲು ಮಾಧ್ಯಮಗಳೂ ಸಹ ಆತ್ಮಾವಲೋಕನ ಮಾಡಿಕೊಳ್ಳಲಿಲ್ಲ.

3. 2012ರ ಜನವರಿ 1 ರಂದು ಬಿಜಾಪುರ ಜಿಲ್ಲೆಯ ಸಿಂಧಗಿ ಪಟ್ಟಣದ ಜನತೆ ಹೊಸ ವರ್ಷದ ಹಬ್ಬದಲ್ಲಿರುವಾಗ ಅಲ್ಲಿನ ತಹಶೀಲ್ದಾರ್ ಕಚೇರಿಯ ಮೇಲೆ ಯಾರೋ ಕಿಡಿಗೇಡಿಗಳು ಪಾಕಿಸ್ತಾನದ ರಾಷ್ಟ್ರಧ್ವಜವನ್ನು ಹಾರಿಸಿದ್ದರು. ಕೂಡಲೇ ಬೀದಿಗಿಳಿದ ಭಜರಂಗ ದಳ, ಶ್ರೀರಾಮ ಸೇನೆ ಇನ್ನಿತರ ಹಿಂದೂತ್ವವಾದಿ ಸಂಘಟನೆಗಳು ಈ ಕೃತ್ಯವು ಮುಸ್ಲಿಮ್ ಸಂಘಟನೆಯದ್ದೆಂದೂ, ಮುಸ್ಲಿಮ್ ಯುವಕರನ್ನು ಬಂಧಿಸಬೇಕೆಂದೂ ಆಗ್ರಹಿಸಿ ಬಸ್ಸುಗಳ ಮೇಲೆ ಮತ್ತು ಜನರ ಮೇಲೆ ಕಲ್ಲು ತೂರಲಾರಂಭಿಸಿದರು. ಪೊಲೀಸರು ಇವರನ್ನು ತಹಬದಿಗೆ ತರಲು ಲಾಠಿ ಚಾರ್ಜ್ ಮಾಡಬೇಕಾಯಿತಲ್ಲದೆ, ಕೆಲವು ಅಮಾಯಕ ಮುಸ್ಲಿಮ್ ಯುವಕರನ್ನೂ ಬಂಧಿಸಬೇಕಾಯಿತು. ಆದರೆ ಘಟನೆ ನಡೆದ ಐದು ದಿನಗಳಲ್ಲೇ ಈ ಕೃತ್ಯಕ್ಕೆ ಸ್ಥಳೀಯ ಶ್ರೀರಾಮ ಸೇನೆಯ ಅರುಣ್ ವಾಘ್ಮೋರೆ, ರಾಕೇಶ್ ಸಿದ್ದರಾಮಯ್ಯ ಮಠ್ ಇನ್ನಿತರರು ಕಾರಣರೆಂದು ಸಾಬೀತಾಗಿ ಅವರನ್ನು ಬಂಧಿಸಲಾಯಿತು. ಜನರಲ್ಲಿ ಮುಸ್ಲಿಮರ ಬಗ್ಗೆ ಆಕ್ರೋಶವನ್ನು ಮತ್ತು ಅನುಮಾನವನ್ನು ಬಿತ್ತಲೆಂದೇ ಈ ಕೃತ್ಯವನ್ನು ಮಾಡಲಾಯಿತೆಂದು ಸಾಕ್ಷಾತ್ ಆರೋಪಿಗಳೇ ಒಪ್ಪಿಕೊಂಡರು. ನಂತರದಲ್ಲಿ ಸಂಘಪರಿವಾರ ಶ್ರೀರಾಮ ಸೇನೆಯನ್ನೂ ಮತ್ತು ಶ್ರೀರಾಮ ಸೇನೆ ಈ ಘಟಕದ ಕಾರ್ಯಕರ್ತರನ್ನೂ ತಮ್ಮವರಲ್ಲವೆಂದು ಘೋಷಿಸಿ ಮುಖ ಉಳಿಸಿಕೊಳ್ಳಲು ಪ್ರಯತ್ನಿಸಿದ್ದು ಬೇರೆ ಮಾತು..

ಇದಿಷ್ಟು ಕರ್ನಾಟಕದ ಸ್ವಯಂ ಅನುಭವವಾದರೆ ಇದೇ ಅವಧಿಯಲ್ಲಿ 2006-8ರ ವರೆಗೆ - ಅಂದರೆ ದೇಶ



ಸಾರ್ವತ್ರಿಕ ಚುನಾವಣೆಗೆ ಸಜ್ಜಾಗುತ್ತಿದ್ದ ಸಂದರ್ಭದಲ್ಲಿ - ಮಾಲೆಗಾಂವ್, ಹೈದರಾಬಾದ್, ಸಂಜೋತಾ ಎಕ್ಸ್‌ಪ್ರೆಸ್, ಶಿವಕಾಶಿ, ನಾಶಿಕ್, ಕಾನ್ಪುರ ಹಾಗು ದೇಶದ ಇನ್ನಿತರ ಕಡೆಗಳಲ್ಲಿ ದೊಡ್ಡ ಮಟ್ಟದ ಬಾಂಬ್ ಸ್ಫೋಟಗಳಾದವು. ಈ ಎಲ್ಲಾ ಸ್ಫೋಟಗಳಿಗೆ ಕಾರಣರೆಂದು ಸಹಸ್ರಾರು ಮುಸ್ಲಿಮ್ ಯುವಕರನ್ನು ಮಾತ್ರವಲ್ಲ ವೃದ್ಧರನ್ನೂ ಬ[...] ಜಾಮೀನು ಕೂಡಾ ನೀಡದೆ ಜೈಲಿಗೆ ತಳ್ಳಲಾ[...] ಆದರೆ 2008ರ ಸೆಪ್ಟೆಂಬರ್‌ನಲ್ಲಿ ನಡೆದ ಮಾಲೆಗ[...] ಬಾಂಬ್ ಬ್ಲಾಸ್ಟ್‌ನ ತನಿಖೆ ನಡೆಸುತ್ತಿದ್ದ ನಿಷ್ಠಾವಂತ ಪೊ[...] ಅಧಿಕಾರಿ ಹೇಮಂತ್ ಕರ್ಕರೆ ತಂಡಕ್ಕೆ ಕೃತಕ[...] ಅಂಟಿಸಿಕೊಂಡಿದ್ದ ಹೆಣವನ್ನೂ ಒಳಗೊಂಡಂತೆ [...] ಸುಳಿವುಗಳು ದೊರೆತವು. ಆಗ ತೀವ್ರ ಶೋಧಕ್ಕೆ [...] ತಂಡ ಈ ಸಾಲುಸಾಲು ಸ್ಫೋಟಗಳ ಹಿಂದೆ ಇರು[...] ಮುಸ್ಲಿಂ ಸಂಘಟನೆಗಳಲ್ಲ, ಬದಲಿಗೆ ಉಗ್ರ[...] ಮತ್ತು ದೇಶದ್ರೋಹಿ ಆಯಾಮ[...] ಪಡೆದುಕೊಳ್ಳುತ್ತಿರುವ ಹಿಂದೂತ್ವ[...] ಸಂಘಟನೆಗಳೆಂಬುದು ಸಾಬೀತಾಯಿತು. ಕ[...] ಪುರೋಹಿತ್‌ರಂಥವರ ಮೂಲಕ [...] ದೇಶದ್ರೋಹಿ ಶಕ್ತಿಗಳು ಭಾ[...] ಸೇನೆಯಲ್ಲೂ ಇರುವುದು ಸಾಬೀತಾ[...]

ಇದರ ಅರ್ಥ ಮುಸ್ಲಿಂ ಉಗ್ರ[...] ಸಂಘಟನೆಗಳು ಇಲ್ಲವೆಂದು ಅಥ[...] ಅವರು ಬುಡಮೇಲು ಕೃತ್ಯಗಳನ್ನು ಮಾ[...] ಪ್ರಯತ್ನಿಸುವುದಿಲ್ಲ ಎಂತಲೂ ಅಲ್ಲ. ಆದರೆ ಬಹು[...] ತಥಾಕಥಿತ ಉಗ್ರಗಾಮಿ ಕೃತ್ಯಗಳಲ್ಲಿ ಯಾವುದೇ [...] ವಹಿಸದೇ ಇದ್ದರೂ ಮಾಧ್ಯಮಗಳಲ್ಲಿ ಮತ್ತು ಪೊ[...] ವ್ಯವಸ್ಥೆಯಲ್ಲಿ ವ್ಯವಸ್ಥಿತವಾಗಿ ಸಾಗುತ್ತಿರುವ ಕೇಸರೀಕ[...] ಪರಿಣಾಮವಾಗಿ ಇಂಥಾ ಘಟನೆಗಳು ನಡೆದಾಗ [...] ಅಮಾಯಕ ಮುಸ್ಲಿಮರು ಬಲಿಯಾಗುತ್ತಿರುವುದು [...]

ಈಗ ಪ್ರಸ್ತುತ ಪ್ರಕರಣದಲ್ಲಿ ಪತ್ರಕರ್ತ ಸಿದ್ಧಿಕಿ [...] ಇತರರನ್ನು ಬಂಧಿಸಲಾಗಿದೆ. ಪೊಲೀಸರು ಹೇಳು[...] ಅವರು ಉಗ್ರರೋ ಅಲ್ಲವೋ ಎಂಬುದು [...] ಕೂಲಂಕಷ ಮತ್ತು ನಿಷ್ಪಕ್ಷಪಾತ ವಿಚಾರಣೆಯ [...] ಸಾಬೀತಾಗಬೇಕಿದೆ. ಅವರು ಉಗ್ರಗಾಮಿಗಳು ಆಗಿ[...] ಸಾಧ್ಯತೆಯಷ್ಟೇ ಆಗಿಲ್ಲದಿರುವ ಸಾಧ್ಯತೆಯೂ [...] ಎಂಬುದನ್ನು ಪ್ರಜಾತಂತ್ರದ ಕಾ[...] ನಾಯಿಯಾಗಿರಬೇಕಾದ ಮಾಧ್ಯಮ ಮತ್ತು [...] ದೇಶದಲ್ಲಿ ಸರ್ವರಿಗೂ ಒ[...] ಕಾನೂನೆಂಬುದನ್ನು ನಿರ್ವಹಿಸಬೇಕಿ[...] ಪೊಲೀಸರು, ಎಲ್ಲಕ್ಕಿಂತ ಹೆಚ್ಚಾಗಿ ಸೌಹಾ[...] ಬದುಕನ್ನು ಬಯಸುವ ಜ[...] ಅರ್ಥಮಾಡಿಕೊಳ್ಳಬೇಕಿದೆ. ಕರ್ನಾಟಕದಲ್ಲಿ [...] ದೇಶಾದ್ಯಂತ 2007-09ರ ಅವಧಿ[...] ಮುಸ್ಲಿಮರನ್ನು ವಿನಾಕಾರಣ ದೂಷಿಸಿ, [...] ಮಾಡಿದ ಬಹುಪಾಲು ಪ್ರಕರಣಗಳಲ್ಲಿ ಅ[...] ನಿರ್ದೋಷಿಗಳೆಂದು ಸಾಬೀತಾಗಿದೆ. ವಿನಾ[...] ಬಂಧಿತರಾದರೂ ಕೋಮುದ್ವೇ[...] ರಾಜಕಾರಣಕ್ಕೆ ಬಲಿಯಾಗಿ ತುಂಬು ಯೌ[...] ಐದಾರು ವರ್ಷಗಳನ್ನು ತಮ್ಮದಲ್ಲದ ತಪ್ಪಿಗೆ ಜೈ[...] ಕಳೆದರೂ ಅವರು ಕಹಿ ಉಳಿಸಿಕೊಳ್ಳದೆ ದೇಶ[...] ಪ್ರಜಾತಂತ್ರದ ಬಗ್ಗೆ ವಿಶ್ವಾಸವನ್ನೇ ಉಳಿಸಿಕೊಂಡಿದ[...]

ಈಗ ಚುನಾವಣೆ ಹತ್ತಿರ ಬರುತ್ತಿದ್ದಂತೆ ಹೊ[...] ಸ್ಟೇ ದಾಳಿಯಿಂದ ಮೊದಲುಗೊಂಡು ಏಕಾಏಕಿ ರಾಜ[...] ವಾತಾವರಣದಲ್ಲಿ ಕೋಮುವಾದಿ ಒತ್ತಡ ಏರು[...] ಪಟ್ಟಭದ್ರರ ಹಿತಾಸಕ್ತಿಗಳಿಗೆ ಕೋಮುವಾದಿ ಶಕ್ತಿ[...] ಈ ದೇಶದ ನೆಮ್ಮದಿ ಮತ್ತು ಭವಿಷ್ಯವನ್ನು ಬಲಿಗೊಡ[...] ವರ್ತಿಸುವ ಜವಾಬ್ದಾರಿ ಮಾಧ್ಯಮಗಳ ಮತ್ತು ಪೊ[...] ಮೇಲಿದೆ. ಇಲ್ಲದಿದ್ದರೆ ಈ ಕೋಮುದ್ವೇಷದ ಮಾ[...] ಹೇಗೆ ಬಡ ಹಿಂದೂಗಳನ್ನೇ ಬಲಿತೆಗೆದುಕೊಳ[...] ಎಂಬುದಕ್ಕೆ ಮೊನ್ನೆ ಮಂಡ್ಯ ರೈಲ್ವೆ ನಿಲ್ದಾಣದಲ್ಲಿ ಎ[...] ಇಂದ ದಾರುಣ ದಾಳಿಗೊಳಗಾದ ಉತ್ತರ ಭಾ[...] ಬಡ ಹಿಂದೂ ಕೂಲಿಕಾರರೇ ಸಾಕ್ಷಿ.


ಬಂಧಿತರು ಉಗ್ರಗಾಮಿಗಳಾದರೆ ನಿಷ್ಪಕ್ಷಪಾತ ವಿಚಾ[...] ತನಿಖೆ ನಡೆದು ಶಿಕ್ಷೆಯಾಗಲಿ. ಆದರೆ ಸಮಾಜ [...] ಮಾಧ್ಯಮಗಳು ವಿಚಾರಣೆಗೆ ಮುನ್ನವೇ ಶಿಕ್ಷೆ ನೀಡಿ[...] ಹಿಂದೆ ತಾವು ಮಾಡಿದ ತಪ್ಪುಗಳು ಅಮಾಯಕ ಜೀವ[...] ಮತ್ತು ಸುಂದರ ಭವಿಷ್ಯವನ್ನು ಬಲಿತೆಗೆದುಕೊ[...] ಎಂಬುದರ ಅರಿವಿರಲಿ.

ಸಾವಿನಂಚಿನಲ್ಲಿರುವ ಮಚಲಿ ಎಂಬ ಹುಲಿಯ ಕತೆ

ಈ ಸಂಚಿಕೆಯಲ್ಲಿ ಇತ್ತೀಚಿಗೆ ಬೆಂಗಳೂರು ...ತ್ತು ಹುಬ್ಬಳ್ಳಿಯಲ್ಲಿ ಹಲವು ಶಂಕಿತ ಉಗ್ರರನ್ನು ...ಧಿಸಿರುವುದನ್ನು ಕುರಿತಲ್ಲದೆ, ಅದರ ಸುತ್ತ ...ಲೀಸರು ಮತ್ತು ಮಾಧ್ಯಮಗಳು ಪೈಪೋಟಿಗೆ ...ದ್ದವರಂತೆ ಖೊಟ್ಟಿ ಕತೆಗಳನ್ನು ಕಟ್ಟುತ್ತಿರುವುದು, ...ನ್ನೇ ಆಧಾರವಾಗಿಟ್ಟುಕೊಂಡು ದುಷ್ಟ ...ದೂತ್ವವಾದಿಗಳು ಸದ್ಯದಲ್ಲೇ ಎದುರಾಗಲಿರುವ ...ನಾವಣೆಗೆ ಮತ ಬ್ಯಾಂಕ್‌ಗಳನ್ನು ...ಗ್ಗಪಡಿಸಿಕೊಳ್ಳಲು ಯತ್ನಿಸುತ್ತಿರುವುದು, ಇವುಗಳ ...ತ್ತ ವರದಿಗಳು ಮತ್ತು ಲೇಖನಗಳು ಇವೆ. ...ದ್ದರಿಂದ ಈ ಅಂಕಣದಲ್ಲಿ ಆ ವಿಷಯಕ್ಕೆ ...ಬಂಧಪಟ್ಟಂತೆ ಬರೆಯುವ ಅಗತ್ಯವಿಲ್ಲ. ...ವಲ್ಲದರ ಬದಲಾಗಿ, ಈ ಹಿಂದೆ ಆಕ್ರಮಣಕಾರಿ ...ಾಗಿದ್ದ ಆದರೀಗ ಹಲ್ಲಿಲ್ಲದ ಮುದುಕಿ ಆಗಿರುವ ...ಚಲಿ ಎಂಬಾಕೆಯ ಬಗ್ಗೆ ಬರೆಯಬೇಕೆನಿಸುತ್ತಿದೆ.

ಅಂದಹಾಗೆ ಮಚಲಿ ಎಂಬುದು ಒಂದು ಹೆಣ್ಣು ...ಲಿಯ ಹೆಸರು. ಈಕೆಯ ಹುಬ್ಬಿನ ಭಾಗದಲ್ಲಿ ...ೕನಿನ ಕಿವಿರುಗಳನ್ನು ಹೋಲುವ ...ರುತುಗಳಿರುವುದರಿಂದ ಈಕೆಗೆ ಮಚಲಿ ...ಂದಿಯಲ್ಲಿ ಮಚಲಿ ಅಂದರೆ ಮೀನು) ಎಂದು ...ಕರಿಡಲಾಗಿದೆ.

ಈ ಮಚಲಿ ಅಂತಿಂತಹ ಹುಲಿಯಲ್ಲ. ...ಣಥಂಬೋರ್ ರಾಷ್ಟ್ರೀಯ ಉದ್ಯಾನವನದ ...ಹುಭಾಗವನ್ನು ಒಂದು ದಶಕಕ್ಕಿಂತಲೂ ಹೆಚ್ಚು ಕಾಲ ...ಳಿದವಳು. ತನಗಿಂತ ಬಲಶಾಲಿಗಳಾಗಿದ್ದ ಗಂಡು ...ಲಿಗಳ ವಿರುದ್ಧ ಹೋರಾಡಿ ಅವುಗಳನ್ನೆಲ್ಲ ...ರಾಜಯಗೊಳಿಸಿದವಳು. ತಾನು ಹೆತ್ತ ಮರಿಗಳನ್ನು ...ಸಲು ಹತ್ತಾರು ಮೊಸಳೆಗಳನ್ನು ತನ್ನ 'ಹಲ್ಲಾರೆ' ...ಂದು ಹಾಕಿದವಳು. ರಣಥಂಬೋರ್ ರಕ್ಷಿತಾರಣ್ಯ ...ತ್ತು ಅದರ ಸುತ್ತ ವಾಸಿಸುತ್ತಿರುವ ಜನರಿಗೆ ...ಲ್ಲಿಯತನಕ ಕೋಟ್ಯಾಂತರ ರೂಪಾಯಿಗಳ ...ಾಯವನ್ನು ತಂದುಕೊಟ್ಟಿರುವವಳು. ಫೇಸ್‌ಬುಕ್ ...ಬ ಅಂತರಜಾಲತಾಣದಲ್ಲಿ ಒಂದೂವರೆ



ಒದ್ದೋಡಿಸಿ ಆ ಪ್ರದೇಶವನ್ನು ತನ್ನದಾಗಿಸಿಕೊಂಡಳು. ಮಾತ್ರವಲ್ಲ ಇತರ ಹುಲಿಗಳೊಂದಿಗೆ ಸೆಣೆಸಾಡಿ ಲಕಾರ್ಡಾ ಸುತ್ತಮುತ್ತಲಿನ ಪ್ರದೇಶಗಳನ್ನೂ ತನ್ನ ಸುಪರ್ದಿಗೆ ತೆಗೆದುಕೊಂಡಳು. ಆ ಮೂಲಕ 'ರಣಥಂಬೋರಿನ ರಾಣಿ' ಎಂಬ ಅಡ್ಡ ಹೆಸರನ್ನೂ ಪಡೆದಳು. ಈ ಪ್ರದೇಶದಲ್ಲಿದ್ದ ಸಾಂಬಾರ್, ಜಿಂಕೆ, ಮೊಸಳೆ, ಮುಳ್ಳುಹಂದಿ ಇತ್ಯಾದಿ ಪ್ರಾಣಿಗಳೆಲ್ಲ ಆಕೆಯ ಅಧೀನದಲ್ಲಿ ಬದುಕುತ್ತಿದ್ದವು.

ಈ ಕಾಡುಪ್ರದೇಶದ ಪಕ್ಕದಲ್ಲೇ ಅದ್ಭುತವಾದ ರಣಥಂಬೋರ್ ಕೋಟೆ ಇದೆಯಲ್ಲದೆ ಕಾಡಿನಲ್ಲೇ ಹಲವಾರು ಸುಂದರವಾದ ಕೆರೆಗಳೂ ಇವೆ. ಈ ಇಡೀ ಪ್ರದೇಶ ನೋಡಲು ರಮ್ಯವಾಗಿದ್ದರೂ ಅಲ್ಲಿ ನಮ್ಮ ಕರ್ನಾಟಕದಲ್ಲಿರುವಂತೆ ಎತ್ತರವಾದ ಮರಗಳಾಗಲಿ, ದಟ್ಟವಾದ ಕಾಡುಗಳಾಗಲಿ ಇಲ್ಲ. ಬದಲಾಗಿ ಅಲ್ಲಿ ಕುರುಚಲು ಗಿಡಗಳಿದ್ದು ಹುಲಿಗಳು ಬೇಟೆ ಆಡುವುದು, ತಮ್ಮ ಮರಿಗಳನ್ನು ನೋಡಿಕೊಳ್ಳುವುದು, ಜಗಳವಾಡುವುದು ಇತ್ಯಾದಿಗಳನ್ನೆಲ್ಲ ಸ್ಪಷ್ಟವಾಗಿ ಮನುಷ್ಯರು ವೀಕ್ಷಿಸಬಹುದಾಗಿದೆ. ಅದರಲ್ಲೂ

ತಿನ್ನಲೆಂದೇ ಹೊಂಚುಹಾಕಿ ಹಲವಾರು ಬಾರಿ ಮೊಸಳೆಗಳು ಬಂದದ್ದೂ ಇದೆ. ಆಗೆಲ್ಲ ಮಚಲಿ ತನ್ನ ಮಕ್ಕಳ ಪ್ರಾಣವನ್ನು ಉಳಿಸಲು ಆ ಮೊಸಳೆಗಳ ಮೇಲೇರಿ ಅವುಗಳನ್ನು ನಿರ್ದಯವಾಗಿ ಕೊಂದು ಹಾಕಿದ್ದಾಳೆ. ಒಮ್ಮೆಯಂತೂ ಹದಿನಾಲ್ಕು ಅಡಿ ಉದ್ದದ ಬೃಹತ್ ಮೊಸಳೆಯ ವಿರುದ್ಧವೇ ಮಚಲಿ ಯುದ್ಧಕ್ಕೆ ಬಿದ್ದಳು. ಆ ಮೊಸಳೆಯೇನೂ ಸುಮ್ಮನಿರಲಿಲ್ಲ. ಅದೂ ಮಚಲಿಯ ವಿರುದ್ಧ ತಿರುಗಿ ಬಿತ್ತು. ಆಗ ಮಚಲಿ ಆ ಮೊಸಳೆಯ ಕುತ್ತಿಗೆಗೇ ಬಾಯಿ ಹಾಕಿ ಅದರ ಪ್ರಾಣವನ್ನೇ ತೆಗೆದುಹಾಕಿದಳು. ಯಾವ ಪ್ರಾಣಿಗೂ ಕಿಂಚಿತ್ತೂ ಹೆದರದ ಮಚಲಿಯ ಧೈರ್ಯದಿಂದಾಗಿ ಒಂದೆರಡು ಕ್ಷಣದಲ್ಲೇ ಆ ಮೊಸಳೆ ಭೀಕರವಾಗಿ ಹೆಣವಾಗಿತ್ತು. ಯಥಾಪ್ರಕಾರ ಮಚಲಿಯ ಮರಿಗಳು ಬೆಳೆದು ಅವು ತಮ್ಮ ಕಾಲ ಮೇಲೆ ನಿಲ್ಲುವುದನ್ನು ಕಲಿತ ನಂತರ ಮಚಲಿ ಅವುಗಳನ್ನು ತನ್ನ ಪ್ರದೇಶದಿಂದ ಒದ್ದೋಡಿಸುತ್ತಿದ್ದಳು.

ಐದು ವರ್ಷಗಳ ಹಿಂದೆ ಮಚಲಿಗೆ ಹನ್ನೆರಡು ವರ್ಷ ವಯಸ್ಸಾಗಿದ್ದಾಗ ಮೂರು ಹೆಣ್ಣು ಮರಿಗಳಿಗೆ ಜನ್ಮ ನೀಡಿದಳು. ಆ ಮರಿಗಳಿಗೆ ಸತಾರ, ಅಥಾರ ಮತ್ತು ಉನ್ನೀಸ್ ಎಂದು ಅರಣ್ಯಾಧಿಕಾರಿಗಳು ನಾಮಕರಣ ಮಾಡಿದರು. ಈ ಮೂರೂ ಮರಿಗಳನ್ನು ಮಚಲಿ ಎಂದಿನಂತೆ ಚೆನ್ನಾಗಿಯೇ ನೋಡಿಕೊಂಡಳು, ಅವುಗಳಿಗೆ ಆಹಾರ ಮತ್ತು ರಕ್ಷಣೆಯನ್ನು ನೀಡಿ ಬೆಳೆಸಿದಳು.

ಆ ಮರಿಗಳಿಗೆ ನಾಲ್ಕು ವರ್ಷ ವಯಸ್ಸಾದಾಗ ಸತಾರ ಎಂಬಾಕೆ ತನ್ನ ಒಡಹುಟ್ಟಿದ ಅಥಾರ ಮತ್ತು ಉನ್ನೀಸರನ್ನು ದೂರ ಹೋಗುವಂತೆ, ತಾಯಿಯ ರಕ್ಷಣೆ ಇಲ್ಲದೆ ಬದುಕುವಂತೆ ದೂಡಿದಳು. ಅನಂತರ ಹೇಗೆ ಹಿಂದೊಮ್ಮೆ ಮಚಲಿಯೇ ತನ್ನ ತಾಯಿಯ

ಉಳಿಸಿಕೊಂಡಳಾ ಎಂದರೆ ಅದೂ ಆಗಲಿಲ್ಲ. ತಾಯಿಯನ್ನು ಹೊರಗಟ್ಟಿದ ಸ್ವಲ್ಪದಿನಗಳ ನಂತರ ಸತಾರ ಅಥಾಯಿಸ್ ಎಂಬ ಗಂಡು ಹುಲಿಯ ಸಂಗಡಕ್ಕೆ ಬಿದ್ದಳು. ಸತಾರಾಳನ್ನು ತನ್ನ ದೈಹಿಕ ಸಂತೃಪ್ತಿಗೆ ಬಳಸಿಕೊಂಡ ಅಥಾಯಿಸ್ ಅನಂತರ ಆಕೆಯನ್ನೇ ಆ ಪ್ರದೇಶದಿಂದ ಹೊರಗಟ್ಟಿದ. ಹಾಗೆ ಮಾಡುವ ಮೂಲಕ ಹಿಂದೊಮ್ಮೆ ಆ ಪ್ರದೇಶವನ್ನು ಒಂದು ದಶಕಕ್ಕೂ ಹೆಚ್ಚು ಕಾಲ ಆಳಿದ್ದ ಮಚಲಿಯ ವಂಶಪಾರಂಪರ್ಯಕ್ಕೆ ನಾಂದಿ ಹಾಡಿದ.

ಈಗ ಮಚಲಿ ವಾಸಿಸುತ್ತಿರುವ ಪ್ರದೇಶದಲ್ಲಿ ಆಕೆಗೆ ಬೇಟೆ ಆಡಲು ಜಿಂಕೆಗಳಾಗಲಿ, ಇತರೆ ಪ್ರಾಣಿಗಳಾಗಲಿ ಇಲ್ಲ. ಅದಕ್ಕಿಂತ ಮುಖ್ಯವಾಗಿ ಮಚಲಿಗೆ ಈಗ ವಯಸ್ಸಾಗಿರುವುದರಿಂದ ಆಕೆ ನಿತ್ರಾಣಗೊಂಡಿದ್ದಾಳೆ. ಮಾತ್ರವಲ್ಲದೆ ಆಕೆ ತನ್ನ ಹೆಚ್ಚಿನ ಹಲ್ಲುಗಳನ್ನು ಕಳೆದುಕೊಂಡಿದ್ದಾಳೆ. ಈ ಎರಡು ಕಾರಣಗಳಿಂದ

ಕಂಡಹಾಗೆ




editorlankesh@gmail.com • ಗೌರಿ ಲಂಕೇಶ್

ಆಕೆಗೀಗ ಬೇಟೆ ಆಡುವುದು ದುಸ್ತರವಾಗಿದ್ದರೆ, ಸಿಕ್ಕ ಮಾಂಸವನ್ನು ಅಗಿಯುವುದೂ ಕಷ್ಟಕರವಾಗಿದೆ.


ಸಾಮಾನ್ಯವಾಗಿ ಅರಣ್ಯಗಳಲ್ಲಿ ಒಂದು ಹುಲಿಯ ಆಯಸ್ಸು ಹೆಚ್ಚೆಂದರೆ 15 ವರ್ಷ. ಆದರೆ ಮಚಲಿಗೆ ಈಗ ಹದಿನೇಳು ವರ್ಷ ವಯಸ್ಸಾಗಿದೆ. ಬೇರೆ ಹುಲಿಯಾಗಿದ್ದರೆ ಆಕೆ ಇಷ್ಟು ಹೊತ್ತಿಗೆ ಮಣ್ಣಿನಲ್ಲಿ ಮಣ್ಣಾಗಿರುತ್ತಿದ್ದಳು. ಆದರೆ ಆಕೆ 'ರಣಥಂಬೋರಿನ ರಾಣಿ' (ಮಾಜಿ ಆದರೂ) ಆಗಿದ್ದರಿಂದ



ಸತಾರ ಸೇರಿದಂತೆ ತನ್ನ ಮೂರು ಮರಿಗಳೊಂದಿಗೆ



ಬಲಿಯನ್ನು ತಿನ್ನುತ್ತಿರುವುದು



ಮೊಸಳೆಯೊಂದಿಗೆ ಯುದ್ಧ

...ಕ್ಕಿಂತಲೂ ಹೆಚ್ಚು 'ಫ್ರೆಂಡ್ಸ್'ಗಳನ್ನು ...ಂದಿರುವವಳು. ಜಗತ್ತಿನ ಇತರೆ ಎಲ್ಲಾ ...ಲಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ–ಅಂದರೆ ...ಟ್ಯಾಂತರ ಬಾರಿ–ಕ್ಯಾಮೆರಾಗಳಲ್ಲಿ ...ಸೆರೆಹಿಡಿಯಲ್ಪಟ್ಟವಳು. ಮೂರು ಸಾಕ್ಷ್ಯಚಿತ್ರಗಳಲ್ಲಿ ...ಮುಖ್ಯಪಾತ್ರವಹಿಸಿದವಳು. ಜೊತೆಗೆ ಒಂದು ...ಅಂತರರಾಷ್ಟ್ರೀಯ ಸಂಸ್ಥೆಯಿಂದ 'ಜೀವಮಾನ ಸಾಧನೆ'ಗೆ ...ಪ್ರಶಸ್ತಿಯನ್ನೂ ಪಡೆದಿರುವವಳು! (ಅದನ್ನು ಸ್ವೀಕರಿಸಲು ...ಕೆ ಬರಲಿಲ್ಲ ಎಂಬುದು ಬೇರೆ ಮಾತು!!)

ಈಗ 17 ವರ್ಷ ವಯಸ್ಸಾಗಿರುವ ಮಚಲಿ ...ಟ್ಟಿದ್ದು ರಕ್ಷಿತಾರಣ್ಯ ಪ್ರದೇಶವಾದ ರಣಥಂಬೋರ್ ...ಷ್ಟ್ರೀಯ ಉದ್ಯಾನವನದಲ್ಲೇ. ಅಂದಹಾಗೆ ಆಕೆಯ ...ಯಿಯ ಹೆಸರೂ ಮಚಲಿ ಎಂದೇ ಆಗಿತ್ತು. ತಾಯಿ ...ಚಲಿ ಎಲ್ಲಾ ತಾಯಿಯರಂತೆ ತನ್ನ ಮಗಳನ್ನು ...ಸಿದವಳು, ಆಹಾರ ನೀಡಿದವಳು, ಬೇಟೆ ...ಡುವುದನ್ನು ಕಲಿಸಿದವಳು. ಆದರೆ ಮರಿ ಮಚಲಿಗೆ ...ದು ವರ್ಷ ವಯಸ್ಸಾಗುತ್ತಿದ್ದಂತೆ ಆಕೆಯ ...ಕಾಡಿನಲ್ಲಿ ಅದಕವಾಗಿರುವ ನಿಯಮದಂತೆ ...ಯನ್ನೂ ತನ್ನದೇ ಆದ ಅರಣ್ಯ ಪ್ರದೇಶಕ್ಕೆ ...ಬಳಿಸಲಾರಂಭಿಸಿದಳು. ಆಗ ಆಕೆಯ ಕಣ್ಣು ...ದ್ದಿದ್ದೇ ತಾಯಿ ಮಚಲಿ ತನ್ನದೆಂದು ಗುರುತು ...ಮಾಡಿಕೊಂಡಿದ್ದ 40 ಚದುರ ಕಿಲೋಮೀಟರ್ ...ವ್ಯಾಪ್ತಿಯಲ್ಲಿರುವ ಲಕಾರ್ಡಾ ಎಂಬ ಅರಣ್ಯ ಪ್ರದೇಶದ ...ಮೇಲೆ. ಹೇಗಿದ್ದರೂ ಮರಿ ಮಚಲಿಯು ತನ್ನ ...ತಾಯಿಗಿಂತ ದೈಹಿಕವಾಗಿ ಶಕ್ತಿಶಾಲಿಯಾಗಿದ್ದರಿಂದ ಆಕೆ ...ತಾಯಿಯನ್ನೇ ಲಕಾರ್ಡಾ ಪ್ರದೇಶದಿಂದ

ಮನುಷ್ಯರ ಇರುವಿಕೆ ಬಗ್ಗೆ ಕಿಂಚಿತ್ತೂ ಕೇರ್ ಮಾಡದೆ ಅವರ ಕಣ್ಣಮುಂದೆಯೇ ಬಿಸಿಲನ್ನು ಕಾಯಿಸಿಕೊಳ್ಳುವ, ಬೇಟೆ ಆಡುವ, ಕಾಮಿಸುವ, ಮಕ್ಕಳನ್ನು ಹಡೆಯುವ, ಇತರೆ ಹುಲಿಗಳೊಂದಿಗೆ ಕಾದಾಡುವ ಮಚಲಿ ತರಹದ ಹುಲಿಗಳಿದ್ದರೆ ಅರಣ್ಯ ಪ್ರಾಣಿಗಳನ್ನು ಅಧ್ಯಯನ ಮಾಡುವವರಿಗೆ ಒಂದು ಭಂಡಾರವೇ ಸಿಕ್ಕಂತೆ.

ಮಚಲಿ ತನ್ನ ಇಡೀ ಜೀವನವನ್ನು ಮನುಷ್ಯರ ಕಣ್ಣು ಮತ್ತು ಕ್ಯಾಮೆರಾಗಳ ಮುಂದೆಯೇ ಕಳೆದವಳು. ಅಂದಮಾತ್ರಕ್ಕೆ ಆಕೆ ಮೃಗಾಲಯದಲ್ಲೋ, ಪಂಜರದಲ್ಲೋ ಮಾನವನ ಮರ್ಜಿಯನ್ನು ಅವಲಂಬಿಸಿ ತನ್ನ ಬದುಕನ್ನು ಸಾಗಿಸಿದವಳಲ್ಲ. ಬದಲಾಗಿ ತನ್ನ ಸುಪರ್ದಿಯಲ್ಲಿದ್ದ ಕಾಡಿನ ಇಂಚಿಂಚನ್ನೂ ಚೆನ್ನಾಗಿ ಬಲ್ಲ ಮಚಲಿ ತನ್ನನ್ನು ನೋಡಲು ಬರುವ ಜನರ ವಾಹನಗಳನ್ನೇ ತನ್ನ ಅಡಗುತಾಣದಂತೆ ಉಪಯೋಗಿಸಿಕೊಂಡು ಅವುಗಳ ಮರೆಯಿಂದ ಇದ್ದಕ್ಕಿದ್ದಂತೆ ಜಿಗಿದು ತನ್ನ ಬಲಿಗಳಿಗೆ ಬೇಟೆ ಆಡುವವಳು. ಆಕೆಯ ಸೌಂದರ್ಯ, ಚುರುಕುತನ, ಹೊಂಚುಹಾಕುವ ಕಲೆ, ತನ್ನ ಬಲಿಯನ್ನು ಹಿಡಿದು ಮುಗಿಸುವ ರೀತಿಯನ್ನು ನೋಡಿ ಬೆರಗಾಗಿರುವವರಿಗೆ ಲೆಕ್ಕವಿಲ್ಲ.

ಇಲ್ಲಿಯತನಕ ಮಚಲಿ ಹನ್ನೊಂದು ಮರಿಗಳನ್ನು ಹೆತ್ತಿದ್ದಾಳೆ. ಆಕೆಯ ಮಾತೃತ್ವದ ಶಕ್ತಿ ಎಂತಹದ್ದೆಂದರೆ ಆಕೆ ಹೆತ್ತ ಎಲ್ಲಾ ಮರಿಗಳೂ ಪ್ರೌಢವಯಸ್ಸಿನ ತನಕ ಆರೋಗ್ಯಪೂರ್ಣವಾಗಿ ಯಾವ ಅಪಾಯವೂ ಇಲ್ಲದೆ ಬೆಳೆದಿವೆ. ಬೇಸಿಗೆ ಕಾಲದಲ್ಲಿ ಹುಲಿ ಮರಿಗಳನ್ನು

ವಿರುದ್ಧ ತಿರುಗಿ ಬಿದ್ದಿದ್ದಳೋ ಹಾಗೆಯೇ ಸತಾರ ಕೂಡ ಮಚಲಿಯ ವಿರುದ್ಧ ತಿರುಗಿ ಬಿದ್ದಳು. ತಮ್ಮದೇ ಆದ ಪ್ರದೇಶಕ್ಕೆ ತಾಯಿ ಮಚಲಿ ಮತ್ತು ಮಗಳು ಸತಾರ ನಡುವೆ ಜಗಳ ಪ್ರಾರಂಭವಾಯಿತು. ಆಷ್ಟು ಹೊತ್ತಿಗೆ ಮಚಲಿಗೆ 16 ವರ್ಷ ವಯಸ್ಸಾಗಿತ್ತು, ಆಕೆಗಿಂತ ಸತಾರ ಶಕ್ತಿಶಾಲಿಯಾಗಿದ್ದಳು. ಆದ್ದರಿಂದ ಸತಾರಾಳ ಮುಂದೆ ಮಚಲಿ ಸೋಲನ್ನೊಪ್ಪಿಕೊಂಡಳು.

ವಿಚಿತ್ರವೆಂದರೆ, ಮಚಲಿಯ ಮಗಳೇ ಆಕೆಯ ವಿರುದ್ಧ ತಿರುಗಿ ಬೀಳುವ ಒಂದು ತಿಂಗಳ ಮುನ್ನ ಇದೇ ಮಚಲಿ ತನಗಿಂತ ಶಕ್ತಿಶಾಲಿಯಾಗಿದ್ದ ಗಂಡು ಹುಲಿಯೊಂದಿಗೆ ಹೋರಾಡಿ ಗೆದ್ದಿದ್ದಳು. ಆದರೂ ಆಕೆ ತನ್ನ ಮಗಳ ಮುಂದೆಯೇ ಸೋತು ಸುಣ್ಣವಾದಳು. ತನ್ನ ಮಗಳಿಗೇ ತನ್ನ 'ಸಾಮ್ರಾಜ್ಯ' ಸಿಗಲಿ ಎಂಬ ಉದ್ದೇಶದಿಂದ ಮಚಲಿ ಬೇಕಂತಲೇ ತನ್ನ ಮಗಳಿಗೆ ಸೋತಳೇ? ಗೊತ್ತಿಲ್ಲ. ಆದರೆ ಅದರ ಪರಿಣಾಮವಂತೂ ಮಚಲಿ ಪಾಲಿಗೆ ಭೀಕರವಾಗಿತ್ತು. ಮಗಳು ಸತಾರ ತನ್ನ ಪ್ರದೇಶದ ಹೆಚ್ಚು ಭಾಗವನ್ನು ಆಕ್ರಮಿಸಿಕೊಂಡಿದ್ದರಿಂದ ಮಚಲಿ ಪಾಲಿಗೆ ತನ್ನ ಮೊದಲಿನ ಸಾಮ್ರಾಜ್ಯದ ನಾಲ್ಕನೆ ಒಂದು ಭಾಗವೂ ಉಳಿಯಲಿಲ್ಲ. ಮಾತ್ರವಲ್ಲ ಇತರೆ ಹುಲಿಗಳೂ ಈಗ ವಯಸ್ಸಾಗಿರುವ, ನಿಶಕ್ತವಾಗಿರುವ ಮಚಲಿಯ ಮೇಲೆ ದಾಳಿಗಳನ್ನು ಮಾಡಿದ್ದರಿಂದ ಆಕೆಗೆ ಉಳಿದಿದ್ದ ಚೂರುಪಾರು ಪ್ರದೇಶವೂ ಇತರೆ ಹುಲಿಗಳ ಪಾಲಾಯಿತು.

ಹೋಗಲಿ, ತನ್ನ ತಾಯಿಯನ್ನೇ ಓಡಿಸಿದ ನೂತನ 'ರಾಣಿ' ಸತಾರಾಳಾದರೂ ತನ್ನ ಸಾಮ್ರಾಜ್ಯವನ್ನು

ರಕ್ಷಿತಾವಲಯದ ಅಧಿಕಾರಿಗಳು ಆಕೆಗೆಂದು ಪ್ರತಿದಿನ ಒಂದು ಕರ, ಕುರಿ ಅಥವಾ ಮೇಕೆಯನ್ನು ಕಾಡಿನಲ್ಲಿ ಕಟ್ಟಿಟ್ಟು ಅದನ್ನು ಮಚಲಿ ತಿಂದು ತನ್ನ ಪ್ರಾಣವನ್ನು ಉಳಿಸಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದಾರೆ.

ಮಚಲಿ ಬಾಯಲ್ಲಿ ಈಗ ಒಂದೇ ಒಂದು ಹಲ್ಲು ಉಳಿದಿದೆ. ಆಕೆಯ ಘರ್ಜನೆ ತನ್ನ ಶಕ್ತಿಯನ್ನು ಕಳೆದುಕೊಂಡಿದೆ. ದೇಹವಂತೂ ಸೊರಗಿದೆ. ಆದರೂ ಆಕೆ ಎಂತಹ ಚಾಣಾಕ್ಷೆ ಎಂದರೆ ಅರಣ್ಯಾಧಿಕಾರಿಗಳು 'ಕಟ್ಟಿ ಕೊಡುವ' ಆಹಾರವನ್ನು ಪಡೆದ ನಂತರ ಅದನ್ನು ಇತರೆ ಹುಲಿಗಳು ತನ್ನಿಂದ ಕಸಿದುಕೊಳ್ಳಬಾರದೆಂದು ಅದನ್ನು ಸುರಕ್ಷಿತವಾಗಿ ಬಚ್ಚಿಡುವುದನ್ನು ಕಲಿತಿದ್ದಾಳೆ. ಮಾತ್ರವಲ್ಲ, ಹಾಗೊಮ್ಮೆ ನರಿ, ತೋಳ ಇತ್ಯಾದಿಗಳು ಅದಕ್ಕೆ ಬಾಯಿ ಹಾಕಲು ಯತ್ನಿಸಿದರೆ ಅವುಗಳನ್ನೆಲ್ಲ ಓಡಿಸುವಷ್ಟು ಶಕ್ತಿಯನ್ನು ಇನ್ನೂ ಉಳಿಸಿಕೊಂಡಿದ್ದಾಳೆ.

ಆದರೂ, ಮಚಲಿ ಈಗ ಸಾವಿನ ಅಂಚಿನಲ್ಲಿದ್ದಾಳೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆಕೆ ಸದ್ಯದಲ್ಲೇ ಕಣ್ಣುಮುಚ್ಚುವ ಸಾಧ್ಯತೆಗಳಿರುವುದರಿಂದ ಆಕೆಯನ್ನು ಕೊನೆಯ ಬಾರಿ ಕಣ್ಣಾರೆ ನೋಡಲು ಸಾವಿರಾರು ಸಂಖ್ಯೆಯಲ್ಲಿ ಪ್ರಾಣಿ ಪ್ರಿಯರು ರಣಥಂಬೋರ್ ರಾಷ್ಟ್ರೀಯ ವನಕ್ಕೆ ದೌಡಾಯಿಸುತ್ತಿದ್ದಾರೆ.


ಇವತ್ತಿಗೂ ಮಚಲಿ ಅವರೆಲ್ಲರ ವಾಹನಗಳ ಹಿಂದೆಮುಂದೆ ಓಡಾಡುತ್ತಾ, ಅವರ ಕ್ಯಾಮೆರಾಗಳಿಗೆ ಫೋಸು ಕೊಡುತ್ತಾ ತನ್ನ ಕೊನೇ ದಿನಗಳನ್ನು ಕಳೆಯುತ್ತಿದ್ದಾಳೆ...

ತಾವು ಬಿತ್ತರಿಸುವ ಸುದ್ದಿ ರೋಚಕವಾಗಿದ್ದರಷ್ಟೇ ಸಾಲದು, ವಿಶ್ವಾಸಾರ್ಹವಾಗಿಯೂ ಇರಬೇಕು ಎಂಬ ಕಾರಣಕ್ಕೆ ಮಾಧ್ಯಮಗಳು ಕಟ್ಟುಕತೆಗಳನ್ನು ಹೊಸೆಯುತ್ತಲೇ ಇರುತ್ತವೆ. ಪತ್ರಕರ್ತ ಮತಿಉರ್ ರೆಹಮಾನ್ ಬೆಳಗ್ಗೆ ಮನೆ ಬಿಟ್ಟರೆ ಮರಳಿ ಮನೆಗೆ ವಾಪಸ್ಸಾಗುತ್ತಿದ್ದುದು ತಡರಾತ್ರಿಯ ವೇಳೆಯಲ್ಲಿ ಮತ್ತು ಆತನ ಚಲನವಲನಗಳ ಬಗ್ಗೆ ಅವನ ನೆರೆಹೊರೆಯವರಿಗೆ ಏನೂ ಗೊತ್ತಿರಲಿಲ್ಲ ಎಂಬ ವಿವರಗಳು, ಅವನೊಬ್ಬ ಉಗ್ರ ಎಂಬುದಕ್ಕೆ ಪುರಾವೆಯಾಗುತ್ತದೆ. ಇನ್ನೊಬ್ಬ ಶಂಕಿತ ಉಗ್ರ ದಿನಕ್ಕೆ ಐದು ಬಾರಿ ನಮಾಜು ಮಾಡುತ್ತಿದ್ದ ಎಂಬುದು ಸಹ ನಮ್ಮ ಮಾಧ್ಯಮಗಳ ಪತ್ತೇದಾರೀ ಪುರುಷೋತ್ತಮರಿಗೆ ಒಂದು ಪುರಾವೆ. ಶಂಕಿತ ಉಗ್ರರು ಪೊಲೀಸರ ಬಳಿ ಹೇಳಿದ್ದೆಲ್ಲವೂ ಪರಮಸತ್ಯ! ಸ್ವತಃ ಶಂಕಿತರೇ ಅದನ್ನು ಹೇಳಿದರು ಎಂದಮೇಲೆ ಬೇರೆ ಪುರಾವೆ ಯಾಕೆ ಬೇಕು?

ಕರ್ನಾಟಕದ ಶಂಕಿತ ಉಗ್ರರು

ಪ್ರಜಾಪ್ರಭುತ್ವದ ನ್ಯಾಯ ಹಾಗೂ ಮಾಧ್ಯಮಗಳ ತೀರ್ಪು

ಕಳೆದ ವಾರ, ಬೆಂಗಳೂರು ಮತ್ತು ಇತರ ಊರುಗಳಲ್ಲಿ ಬಂಧಿಸಲ್ಪಟ್ಟ ಶಂಕಿತ ಉಗ್ರರಲ್ಲಿ ಒಬ್ಬನಾದ ಮತಿಉರ್ ರೆಹಮಾನ್ ಸಿದ್ದಿಕಿ, ಪ್ರತಿಷ್ಠಿತ ಪತ್ರಿಕೆ ಡೆಕ್ಕನ್ ಹೆರಾಲ್ಡ್‌ನ ಪತ್ರಕರ್ತ. ಆತನ ನಿಜಸಂಗತಿ ಏನು ಎಂದು ತಿಳಿಯುವ ಕುತೂಹಲವಾಗಿ ನನಗೆ ಪರಿಚಯವಿರುವ ಒಂದಿಬ್ಬರು ಪತ್ರಕರ್ತರ ಬಳಿ ವಿಚಾರಿಸಿದೆ. ಸಿದ್ದಿಕಿ ಆ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಾನೆ ಎಂಬುದು ಬಿಟ್ಟು ಆತನ ಬಗ್ಗೆ ತಮಗೆ ಏನೂ ಗೊತ್ತಿಲ್ಲ ಎಂದು ಅವರು ಹೇಳಿದರು. ಅದು ಸರಿ. ಯಾವ ಉಗ್ರನೂ ತಾನೊಬ್ಬ ಉಗ್ರ ಎಂದು ತೋರಿಸಿಕೊಳ್ಳುವುದಿಲ್ಲ. ಸಿದ್ದಿಕಿ ನಿಜಕ್ಕೂ ಒಬ್ಬ ಉಗ್ರನಾಗಿದ್ದರೆ, ಅವನ ಸ್ನೇಹಿತರಿಗೆ ಯಾಕೆ, ಅವನ ಮನೆಯವರಿಗೂ ಅದು ಗೊತ್ತಿರುವ ಸಂಭವವಿಲ್ಲ. ಹಾಗಾದರೆ ಸಿದ್ದಿಕಿ ಮತ್ತು ಇತರ ಶಂಕಿತರ ಬಗ್ಗೆ ಕಳೆದ ಹಲವು ದಿನಗಳಿಂದ ರಾಜ್ಯದ ಮಾಧ್ಯಮಗಳಲ್ಲಿ ಎಡೆಬಿಡದೆ ಪ್ರಕಟವಾಗುತ್ತಿರುವ ಮಾಹಿತಿಯ ಮಹಾಪೂರದ ಮೂಲ ಯಾವುದು? ದಿನಪತ್ರಿಕೆಗಳನ್ನೂ ಒಳಗೊಂಡು ರಾಜ್ಯದ ಎಲ್ಲ ಮಾಧ್ಯಮಗಳಿಗೂ ಕ್ರಿಮಿನಲ್ ಸುದ್ದಿಗಳ ಮಟ್ಟಿಗೆ ಇರುವ ಏಕೈಕ ಮೂಲ ಪೊಲೀಸು ಇಲಾಖೆಯ ಹೇಳಿಕೆಗಳು. ಅದು ನಕ್ಸಲ್ ಚಳವಳಿ, ಭಯೋತ್ಪಾದನೆ ಅಥವಾ ಸರಗಳ್ಳತನ - ಯಾವುದೇ ಆಗಲಿ, ಪೊಲೀಸರು ಅವುಗಳ ಕುರಿತು ಏನು ಹೇಳುತ್ತಾರೋ ಅದೇ ಮಾಧ್ಯಮಗಳ ಮಟ್ಟಿಗೆ ಪರಮಸತ್ಯ! ಸೈನ್ಯ ಮತ್ತು ಪೊಲೀಸು ಪಡೆ, ಅಧಿಕಾರ ವ್ಯವಸ್ಥೆಯ ಇತರ ಅಂಗಾಂಗಗಳಷ್ಟೇ ಕೆಟ್ಟು ಕೆರ



ಹಿಡಿದಿದೆ ಎಂಬುದು ಮತ್ತೆ ಮತ್ತೆ ಸಾಬೀತಾಗಿದೆ. ಆದರೂ ಕಾಶ್ಮೀರ, ಅಸ್ಸಾಂ, ಮಣಿಪುರ ಮುಂತಾದ ಗಡಿ ರಾಜ್ಯಗಳ ಪರಿಸ್ಥಿತಿ ಅಥವಾ ಇಸ್ಲಾಮಿಕ್ ಭಯೋತ್ಪಾದನೆ, ನಕ್ಸಲ್ ಚಳವಳಿ ಇವೇ ಮುಂತಾದ ವಿಷಯಗಳ ಕುರಿತು ಪ್ರಭುತ್ವದ ಸಮವಸ್ತ್ರದ ಪಡೆ ಸತ್ಯವನ್ನೇ ಹೇಳುತ್ತದೆ ಎಂಬುದು ಸಾಮಾನ್ಯ ಜನರ ನಂಬಿಕೆ. ಈ ವಿಷಯಗಳ ಬಗ್ಗೆ ಪ್ರಭುತ್ವದ ವಕ್ತಾರರು ಹೇಳುವುದೆಲ್ಲ ಸತ್ಯವೆಂದು ಜನ ನಂಬುವಂತೆ ಮಾಡಿದ್ದು ನಮ್ಮ ಮಾಧ್ಯಮಗಳೇ.

ರಾಜ್ಯದಲ್ಲಿ ಬಿ.ಜೆ.ಪಿ. ಸರಕಾರ ಬಂದಮೇಲೆ, ನಮ್ಮ ಬಹುತೇಕ ಮಾಧ್ಯಮಗಳ ಮಟ್ಟಿಗೆ ಸಂಘ ಪರಿವಾರ ಸುದ್ದಿ ಒದಗಿಸುವ ಇನ್ನೊಂದು ಮಾಹಿತಿ ಕೇಂದ್ರವಾಯಿತು. ಕಾಲದಿಂದ ಕಾಲಕ್ಕೆ ರಾಜ್ಯದ ಕೆಲವು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗುವ, ಅಕ್ರಮ ಬಾಂಗ್ಲಾ ನಿವಾಸಿಗಳ ಕುರಿತ ಸುದ್ದಿ ಹಾಗೂ ಲವ್‌ಜಿಹಾದ್, ಭಯೋತ್ಪಾದನೆ, ಮತಾಂತರ ಮುಂತಾದ ವಿದ್ಯಮಾನಗಳ ಕುರಿತ ಸ್ಫೋಟಕ ವರದಿಗಳ ಮೂಲ ಕೂಡಾ ಸಂಘಪರಿವಾರವೇ. ಪೊಲೀಸು ಇಲಾಖೆ ಮತ್ತು ನ್ಯಾಯಾಲಯಗಳು ಮತ್ತೆ ಮತ್ತೆ ಈ ಸುದ್ದಿಗಳನ್ನು ಅಲ್ಲಗಳೆದರೂ, ಅವು ಪ್ರಕಟವಾಗುತ್ತಲೇ ಇರುತ್ತವೆ. ರಾಜ್ಯದಲ್ಲಿ ಕಳೆದ ವಾರ ಬಂಧಿತರಾದ ಶಂಕಿತ ಉಗ್ರರ ಬಗ್ಗೆ ಮಾಧ್ಯಮಗಳಲ್ಲಿ ಧಾರಾವಾಹಿಯ ಹಾಗೆ ಪ್ರಕಟವಾಗುತ್ತಿರುವ ಸುದ್ದಿಗಳಲ್ಲಿ ಕೆಲವನ್ನು ರಾಜ್ಯದ ಪೊಲೀಸು ವರಿಷ್ಠಾಧಿಕಾರಿಗಳೇ ನಿರಾಕರಿಸಿದ್ದಾರೆ. ಆದರೂ ಧಾರಾವಾಹಿ ತಡೆ ಇಲ್ಲದೆ ಮುಂದುವರಿದಿದೆ.

ತಾವು ಬಿತ್ತರಿಸುವ ಸುದ್ದಿ ರೋಚಕವಾಗಿದ್ದರಷ್ಟೇ ಸಾಲದು, ವಿಶ್ವಾಸಾರ್ಹವಾಗಿಯೂ ಇರಬೇಕು ಎಂಬ ಕಾರಣಕ್ಕೆ ಮಾಧ್ಯಮಗಳು ಕಟ್ಟುಕತೆಗಳನ್ನು ಹೊಸೆಯುತ್ತಲೇ ಇರುತ್ತವೆ. ಪತ್ರಕರ್ತ ಮತಿಉರ್ ರೆಹಮಾನ್ ಬೆಳಗ್ಗೆ ಮನೆ ಬಿಟ್ಟರೆ ಮರಳಿ ಮನೆಗೆ ವಾಪಸ್ಸಾಗುತ್ತಿದ್ದುದು ತಡರಾತ್ರಿಯ ವೇಳೆಯಲ್ಲಿ ಮತ್ತು ಆತನ ಚಲನವಲನಗಳ ಬಗ್ಗೆ ಅವನ ನೆರೆಹೊರೆಯವರಿಗೆ ಏನೂ ಗೊತ್ತಿರಲಿಲ್ಲ ಎಂಬ ವಿವರಗಳು, ಅವನೊಬ್ಬ ಉಗ್ರ ಎಂಬುದಕ್ಕೆ ಪುರಾವೆಯಾಗುತ್ತದೆ. ಇನ್ನೊಬ್ಬ ಶಂಕಿತ ಉಗ್ರ ದಿನಕ್ಕೆ ಐದು ಬಾರಿ ನಮಾಜು ಮಾಡುತ್ತಿದ್ದ ಎಂಬುದು ಸಹ ನಮ್ಮ ಮಾಧ್ಯಮಗಳ ಪತ್ತೇದಾರೀ ಪುರುಷೋತ್ತಮ[ರಿಗೆ] ಒಂದು ಪುರಾವೆ. ಶಂಕಿತ ಉಗ್ರರು ಪೊಲೀಸರ [ಬಳಿ] ಹೇಳಿದ್ದೆಲ್ಲವೂ ಪರಮಸತ್ಯ! ಸ್ವತಃ ಶಂಕಿತರೇ ಅ[ದನ್ನು] ಹೇಳಿದರು ಎಂದ ಮೇಲೆ ಬೇರೆ ಪುರಾವೆ ಯಾಕೆ ಬೇ[ಕು?] ಪೊಲೀಸರು ಆರೋಪಿಗಳ ಬಾಯಿಂದ ಎ... ಹೇಳಿಕೆಯನ್ನು ಬೇಕಾದರೂ ಹೊರಡಿಸುವ ವಿದ್ಯೆಗ... ಕರಗತ ಮಾಡಿಕೊಂಡಿರುತ್ತಾರೆ ಎಂಬುದು ಬೇರೆ ಮ... ಪೊಲೀಸರ ಸಮ್ಮುಖದಲ್ಲಿ ಆರೋಪಿ ಕೊ... ಹೇಳಿಕೆಗಳನ್ನು ನ್ಯಾಯಾಲಯ ಸಾಕ್ಷ್ಯಾಧಾರ ಎ... ಮನ್ನಿಸುವುದಿಲ್ಲ, ಆದರೆ ಕೇಸು ನ್ಯಾಯಾಲಯದ ಮು... ಬರುವ ವೇಳೆಗೆ ಪ್ರಕರಣ ಜನರಿಗೆ ಮರೆತುಹೋಗಿರು... ಅಷ್ಟರಲ್ಲಿ ಮಾಧ್ಯಮಗಳು ತಮ್ಮ ಧಣಿಗಳು ತ... ವಹಿಸಿಕೊಟ್ಟ ಕೆಲಸವನ್ನು ಮಾಡಿ ಮುಗಿಸಿರುತ್ತವೆ!

ರಾಜ್ಯದಲ್ಲಿ ಮೊನ್ನೆ ಬಂಧಿತರಾದವರು ಉ... ಆಗಿರಬಹುದು; ಅವರಿಗೆ ಪಾಕಿಸ್ತಾನ, ಸೌದಿ ಅರೇಬ... ಮುಂತಾದ ದೇಶಗಳ ಭಯೋತ್ಪಾದಕ ಸಂಘಟನೆಗಳ ... ಸಂಪರ್ಕವೂ ಇರಬಹುದು. ಆದರೆ ಅ... ತೀರ್ಮಾನಿಸಬೇಕಾದದ್ದು ಪೊಲೀಸರೂ ... ಮಾಧ್ಯಮಗಳೂ ಅಲ್ಲ, ಪೊಲೀಸರ ಕೆಲಸವೇನಿ... ಆರೋಪಿಗಳ ವಿರುದ್ಧ ಸಾಕ್ಷ್ಯಾಧಾರಗಳನ್ನು ಸಂಗ... ನ್ಯಾಯಾಲಯದ ಮುಂದಿಡುವುದು ಅಷ್ಟೆ. ಆರೋ... ರುಜುವಾತು ಆಗುವವರೆಗೆ ಆರೋಪಿಗಳನ್ನು ನಿರಪ... ಎಂದೇ ಪರಿಗಣಿಸಬೇಕು- ಎಂಬುದು ಪ್ರಜಾಪ್ರಭು...



ಚುನಾವಣಾಪೂರ್ವ ತಂತ್ರಗಳು ಆರಂಭವಾಗಿವೆ

ಭಾರತೀಯ ಸಮಾಜದಲ್ಲಿ ಇಂದು ಏನಾಗುತ್ತಿದೆ ಎಂದು ಊಹಿಸುವಾಗಲೆ ತುಂಬಾ ಭಯವಾಗುತ್ತದೆ. ಭಾರತೀಯರೇ ಭಾರತೀಯರನ್ನು ಅಸಹನೆಯಿಂದ ಕಾಣುವ, ಶಂಕೆಯ ದೃಷ್ಟಿಯಿಂದ ನೋಡುವ ಒಂದು ಕೀಳುಮಟ್ಟಕ್ಕೆ ಬಂದು ಮುಟ್ಟಿದ್ದೇವೆ ನಾವು! ಇಂತಹ ದುಸ್ಸಹನೀಯ ಪರಿಸ್ಥಿತಿಗೆ ಪ್ರಧಾನ ಕಾರಣ ಸಂಘ ಪರಿವಾರ ಎಂಬುದರಲ್ಲಿ ಸ್ವಲ್ಪವೂ ಅನುಮಾನ ಬೇಡ. ಅತ್ತ ಮಹಾರಾಷ್ಟ್ರದಲ್ಲಿ ಕಾರ್ಯಾಚರಿಸುತ್ತಿರುವ ಶಿವಸೇನೆ ಕೂಡ ಸಂಘ ಪರಿವಾರದ ಆಶಯಗಳಿಗೆ ಪೂರಕವಾಗಿಯೇ ನಡೆದುಕೊಳ್ಳುತ್ತಿರುವ ಒಂದು ಸಂಘಟನೆ. ಬಾಬರಿ ಮಸೀದಿ ಧ್ವಂಸ ಕಾರ್ಯಾಚರಣೆಯಲ್ಲಿ ಶಿವಸೇನೆ ಸಕ್ರಿಯವಾಗಿ ಪಾಲ್ಗೊಂಡಿತ್ತು.

1992-93ರ ಮುಂಬಯಿಯ ಕೋಮು ಹಿಂಸಾಚಾರ ಘಟನೆಗಳ ತನಿಖೆ ನಡೆಸಿದ ಶ್ರೀಕೃಷ್ಣ ಆಯೋಗ ಅನೇಕ ಶಿವಸೇನಾ ನಾಯಕರು ಹಾಗೂ ಕಾರ್ಯಕರ್ತರನ್ನು ದೋಷಿಗಳೆಂದು ತೀರ್ಮಾನಿಸಿದೆ. ಇದೇ ಶಿವಸೇನೆ ಹಿಂದೊಮ್ಮೆ ದಕ್ಷಿಣ ಭಾರತೀಯರ ವಿರುದ್ಧ ಮತ್ತು ಇತ್ತೀಚೆಗೆ ಬಿಹಾರಿಗಳ ವಿರುದ್ಧ ಹರಿಬಿಟ್ಟ ದ್ವೇಷ ಮತ್ತು ಹಿಂಸೆ ಎಷ್ಟಿತ್ತೆಂದರೆ ಅನೇಕರು ಮುಂಬಯಿ ತೊರೆದು ತಂತಮ್ಮ ಹುಟ್ಟೂರುಗಳಿಗೆ ಮರಳಿದ್ದರು.

ಈಗ ಬೆಂಗಳೂರಿನಿಂದ ಸಹಸ್ರಾರು ಈಶಾನ್ಯ ರಾಜ್ಯಗಳ ಜನ ಗುಳೇ ಹೋಗುವಂತೆ ಮಾಡಿದ ಎಸ್ಸೆಮ್ಮೆಸ್‌ಗಳ ಮೂಲ ಪಾಕಿಸ್ತಾನ ಎಂದಿರುವ ಸರ್ಕಾರ ಈ ಕುರಿತು ತನಿಖೆಯನ್ನು ಅಲ್ಲಿಗೇ ಸ್ಥಗಿತಗೊಳಿಸಿರುವಂತಿದೆ. ಪಾಕ್‌ನಿಂದ ಬಂದಿವೆ ಎನ್ನಲಾದ ಎಸ್ಸೆಮ್ಮೆಸ್‌ಗಳಿಗೂ ಸಂಘ ಪರಿವಾರವೇ ಮೂಲ ಇರಬೇಕು ಎನ್ನುವುದು ತರ್ಕಕ್ಕೆ ಸಮೀಪವಾದ ವಾದ. ಯಾಕೆಂದರೆ ಇವತ್ತಿನ ಈ ಸಮೂಹಸನ್ನಿ ಮತ್ತು ಗಲಭೆಗಳ ಲಾಭ ಇರುವುದೇ ಸಂಘ ಪರಿವಾರಕ್ಕೆ.


ಅಸ್ಸಾಮಿನಲ್ಲಿರುವ ಬಹುತೇಕ ಮುಸ್ಲಿಮರನ್ನು ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ಅವಿಭಜಿತ ಬಂಗಾಲ ಪ್ರಾಂತದಿಂದ ಕರೆತಂದವರು. ಆದರೆ ಸಂಘ ಪರಿವಾರ ಅದನ್ನು ಮರೆಮಾಚಿ 'ಅಸ್ಸಾಮಿನಲ್ಲಿ ಸಾವಿರಾರು ಬಾಂಗ್ಲಾ ದೇಶೀಯ ನುಸುಳುಕೋರರು' ಇದ್ದಾರೆ ಎಂಬ ಸತ್ಯಕ್ಕೆ ದೂರ ವದಂತಿಯನ್ನು ಹರಿಬಿಟ್ಟಿದೆ.


1999-2000ದಲ್ಲಿ ಬ್ರಿಟನ್‌ನ ಬಿಬಿಸಿ ವಾರ್ತಾ ಸಂಸ್ಥೆ ಈ ಬಾಂಗ್ಲಾದೇಶ ಮತ್ತು ಭಾರತಗಳ ನಡುವಿನ ವಲಸೆ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ಸಮೀಕ್ಷೆಯನ್ನು ಕೈಗೊಂಡಿತ್ತು. ಆ ಸಮೀಕ್ಷೆ ಪ್ರಕಾರ ಬಾಂಗ್ಲಾದೇಶದಿಂದ ಲಕ್ಷಾಂತರ ಜನ ಭಾರತಕ್ಕೆ ವಲಸೆ ಬರುತ್ತಿದ್ದಾರೆ ಎನ್ನುವುದು ನಿಜವಲ್ಲ. ವಾಸ್ತವ ಏನೆಂದರೆ ಭಾರತದ ಭೂಮಾಲಿಕರಿಗೆ ಕೂಲಿಕಾರ್ಮಿಕರ ಅವಶ್ಯಕತೆಯಿರುವ ನಿರ್ದಿಷ್ಟ ಋತುಗಳಲ್ಲಿ ಬಾಂಗ್ಲಾದೇಶದಿಂದ ಜನ ಇಲ್ಲಿಗೆ ಬರುತ್ತಾರೆ; ಕೆಲಸ ಮುಗಿದ ಬಳಿಕ ಮತ್ತೆ ಸ್ವದೇಶಕ್ಕೆ ವಾಪಸ್ಸಾಗುತ್ತಾರೆ. ಹರಿಯಾಣಾದ ಇಟ್ಟಿಗೆ ಭಟ್ಟಿಗಳಿಗೆ ಬೇಕಾದ ಅಗ್ಗದ ಕೂಲಿಕಾರ್ಮಿಕರನ್ನು ಬಾಂಗ್ಲಾದೇಶದಿಂದ ಕಳ್ಳಸಾಗಾಣಿಕೆ ಮೂಲಕ ತರಿಸುವವರೂ ಭಾರತೀಯ ಮಾಲಿಕರೇ. ಉಭಯ ದೇಶಗಳ ನಡುವಿನ ಸುಮಾರು 4000 ಕಿ.ಮೀ. ಉದ್ದದ ಗಡಿಯಲ್ಲಿ 3200 ಕಿ.ಮೀ.ನಷ್ಟು ಭಾಗಕ್ಕೆ ತಂತಿಬೇಲಿ ಹಾಕಲಾಗಿದೆ. ರಾತ್ರಿ ವೇಳೆ ಪ್ರಕಾಶಮಾನವಾದ ಬೆಳಕನ್ನು ಹಾಯಿಸುವ ವ್ಯವಸ್ಥೆಯೂ ಇದೆ. ಹೀಗಿರುವಾಗ ಲಕ್ಷಾಂತರ 'ನುಸುಳು ಕೋರರು' ಹೇಗೆ ತಾನೆ ಬರಲು ಸಾಧ್ಯ?

1980ನೆ ಇಸವಿಯಿಂದ ಆರಂಭಿಸಿ ಪ್ರತಿಯೊಂದು ಚುನಾವಣೆಗೂ ಮುನ್ನ ಸಂಘ ಪರಿವಾರದ ವಾಡಿಕೆಯ ರಣತಂತ್ರ ಇದೇ ಆಗಿದೆ. ರಾಜ್ಯ ಮತ್ತು ಕೇಂದ್ರಗಳಲ್ಲಿ ಚುನಾವಣೆಗಳು ಸಮೀಪಿಸುತ್ತಿರುವ ಇಂದಿನ ಸನ್ನಿವೇಶದಲ್ಲಿ ಹೇಗಾದರೂ, ಏನಾದರೂ ಮಾಡಿ ಹಿಂದೂ ಮತಬ್ಯಾ... ಗಳನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಬಂ... ಮಾತಾಡುವವರೆಲ್ಲರೂ 'ಬಾಂಗ್ಲಾದೇಶೀಯ ಅಕ್ರಮ ... ಗಾರರು' ಎಂದು ಬಿಂಬಿಸಲಾಗುತ್ತಿದೆ. 'ಬಾಂಗ್ಲಾದೇಶಿ... ನುಸುಳುಕೋರರು' ದೇಶವನ್ನು ಆಕ್ರಮಿಸುತ್ತಿದ್ದಾರೆ ... ಸುಳ್ಳು ವದಂತಿಯ ಮೂಲಕ ಇಡೀ ದೇಶದಲ್ಲಿ ಒ... ಸಮೂಹಸನ್ನಿಯನ್ನು ಹುಟ್ಟುಹಾಕಿ, ಜನರಲ್ಲಿ ಭಯ, ಆ... ಅಭದ್ರತೆ ಮೂಡಿಸಿ, ಅದರ ಲಾಭವನ್ನು ಮುಂಬ... ಚುನಾವಣೆಗಳಲ್ಲಿ ಪಡೆಯುವುದೇ ಸಂಘ ಪರಿವಾ... ಪ್ರಮುಖ ಉದ್ದೇಶ. 1983ರ ನೆಲ್ಲೀ ಹತ್ಯಾಕಾಂಡ ... ಇನ್ನಿತರ ಕೋಮು ಘರ್ಷಣೆಗಳಿರಲಿ, 'ಎನ್ಕೌಂಟ... ಹತ್ಯೆಗಳಿರಲಿ, ಇಂದು 100ಕ್ಕೂ ಅಧಿಕ ಜನರನ್ನು ... ತೆಗೆದುಕೊಂಡಿರುವ ಅಸ್ಸಾಮಿನ ಗಲಭೆಗಳಿರಲಿ, ತಥಾ... ಭಯೋತ್ಪಾದನೆಯ ಸಂಚುಗಳಿರಲಿ ಇವೆಲ್ಲದರ ಹಿ... ಅಡಗಿರುವುದು ಇದೇ ಚುನಾವಣಾ ಲೆಕ್ಕಾಚಾರ.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು (ಎಬಿ... ಎಂಬ ಸಂಘ ಪರಿವಾರದ ವಿದ್ಯಾರ್ಥಿ ಸಂಘಟನ... ಪುಂಡಾಟಿಕೆಗಳಂತೂ ಸಭ್ಯ ನಡವಳಿಕೆಯ ಎಲ್ಲೆಗ...







ನ್ಯಾಯಸಂಹಿತೆ. ಅತ್ಯಂತ ಘೋರ ಅಪರಾಧದ ಆರೋಪ ಹೊತ್ತಿರುವವನಿಗೆ ಕೂಡಾ ನ್ಯಾಯಾಲಯದ ಮುಂದೆ ತನ್ನ ಅಹವಾಲು ಹೇಳಿಕೊಳ್ಳುವ ಹಕ್ಕು ಇದೆ ಎನ್ನುವುದು ಈ ನ್ಯಾಯಸಂಹಿತೆಯ ಇನ್ನೊಂದು ಮೂಲಭೂತ ಸೂತ್ರ. ಉಗ್ರಗಾಮಿ ಚಟುವಟಿಕೆಗಳನ್ನು ಹತ್ತಿಕ್ಕುವ ಕಾಯ್ದೆ-P.O.T.A ಮತ್ತು ಕಾಶ್ಮೀರ, ಮಣಿಪುರ ಮುಂತಾದ ಗಡಿ ರಾಜ್ಯಗಳಲ್ಲಿ ಜಾರಿಯಲ್ಲಿರುವ ಸೈನಿಕ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯಂತಹ ಕರಾಳ ಶಾಸನಗಳು ಮಾತ್ರ ಪ್ರಜಾಪ್ರಭುತ್ವದ ನ್ಯಾಯಸಂಹಿತೆಯ ಈ ಸೂತ್ರಗಳನ್ನು ಮನ್ನಿಸುವುದಿಲ್ಲ.

ರಾಜ್ಯದಲ್ಲಿ ಶಂಕಿತ ಉಗ್ರರ ಬಂಧನದ ಸುದ್ದಿ ಹೊರಬಿದ್ದ ಮರುಕ್ಷಣದಿಂದಲೇ ಟೀವಿ ಚಾನೆಲ್ಲುಗಳಲ್ಲಿ ಪೋಟಾ ಕಾಯ್ದೆ ಜಾರಿಗೆ ತರಬೇಕು ಎಂಬ ಒತ್ತಾಯ ಕೇಳಿಬರಲಾರಂಭಿಸಿತು. ಅದರ ಜೊತೆಗೆ ನಾಗರಿಕ ಹಕ್ಕುಗಳ ಹೋರಾಟಗಾರರು ಮತ್ತು ನಾಗರಿಕ ಹಕ್ಕುಗಳ ಪರಿಕಲ್ಪನೆಯ ಮೇಲೆ ಬೈಗುಳದ ಸುರಿಮಳೆಯೇ ಆಯಿತು. ಮಾಧ್ಯಮಗಳ ಈ ಅಸಹನೆ ಕೇವಲ ಮುಸ್ಲಿಂ ಉಗ್ರರಿಗೆ ಮಾತ್ರ ಸೀಮಿತವಾಗಿಲ್ಲ. ನಕ್ಸಲ್ ಚಳವಳಿಯನ್ನು ವಿರೋಧಿಸುವ ನೆಪದಲ್ಲಿ ಮಾಧ್ಯಮಗಳು ಎಡಪಕ್ಷಗಳ ಚಳವಳಿಗಾರರನ್ನೂ, ಬುದ್ಧಿಜೀವಿಗಳನ್ನೂ ನಕ್ಸಲ್ ಎಂದೇ ನಿಂದಿಸುತ್ತವೆ. ಕರ್ನಾಟಕದ ಶಂಕಿತ ಉಗ್ರರ ವಿರುದ್ಧ ಮಾಧ್ಯಮಗಳು ಸಾರಿರುವ ಯುದ್ಧದ ಹಿಂದೆ ಇರುವುದು ಮುಸ್ಲಿಮ್ ಸಮುದಾಯದ ಕುರಿತ ಅಪನಂಬಿಕೆ ಮಾತ್ರವಷ್ಟೇ ಅಲ್ಲ; ದೇಶದಲ್ಲಿ ಎಲ್ಲೆಡೆ ಈಗ ವಿಜೃಂಭಿಸುತ್ತಿರುವ ದಮನಕಾರೀ ಬಲಪಂಥೀಯ ರಾಜಕೀಯದ ಒತ್ತಾಸೆಯೂ ಅದನ್ನು ಪ್ರಚೋದಿಸುತ್ತಿದೆ.

ಮೊನ್ನೆ ಬಂಧಿತರಾದ ಅಷ್ಟೂ ಜನ ಶಂಕಿತ ಉಗ್ರರು ಮುಸ್ಲಿಮರಾದರೂ, ರಾಜ್ಯದಲ್ಲಿ ಎಲ್ಲಿಯೂ ಮುಸ್ಲಿಮ್ ಸಮುದಾಯ ಈ ಬಂಧನಗಳನ್ನು ಪ್ರತಿಭಟಿಸಿಲ್ಲ. ಶಂಕಿತ ಉಗ್ರರಿಗೆ ಮುಸ್ಲಿಮ್ ಸಮುದಾಯದ ಬೆಂಬಲವೂ ಇಲ್ಲ; ಸಹಾನುಭೂತಿಯೂ ಇಲ್ಲ ಎಂಬುದು ನಿಚ್ಚಳವಾಗಿದೆ. ಸ್ವತಃ ಬಂಧಿತರ ಮನೆಯವರೇ ಅವರು ಅಪರಾಧಿಗಳು ಎಂದು ಕಂಡುಬಂದಲ್ಲಿ ಅವರಿಗೆ ಶಿಕ್ಷೆಯಾಗಲಿ ಎಂದೇ ಹೇಳಿದ್ದಾರೆ. ಇಷ್ಟಾಗಿಯೂ ಶಂಕಿತ ಉಗ್ರರಿಗೂ, ಮುಸ್ಲಿಮ್ ಸಮುದಾಯಕ್ಕೂ ಸಂಬಂಧ ಕಲ್ಪಿಸುವ ಪ್ರಯತ್ನಗಳು ಈಗಾಗಲೇ ಪ್ರಾರಂಭವಾಗಿವೆ. ಮುಂದಿನ ದಿನಗಳಲ್ಲಿ ಕೋಮುದ್ವೇಷದ ಈ ಅಭಿಯಾನದ ರಿಲೇ ಕೋಲನ್ನು ಮಾಧ್ಯಮಗಳಿಂದ ಸಂಘಪರಿವಾರ ಕೈಗೆತ್ತಿಕೊಳ್ಳುವ ಸೂಚನೆಗಳಿವೆ. ಪ್ರಜಾಪ್ರಭುತ್ವದ ನ್ಯಾಯಸಂಹಿತೆ ಮತ್ತು ನಾಗರಿಕ ಹಕ್ಕುಗಳ ವಿರುದ್ಧ ಮಾಧ್ಯಮ ಹಾಗೂ ಸಂಘಪರಿವಾರದ ಇಂತಹ ಜಂಟೀಕಾರ್ಯಾಚರಣೆ ನಡೆಯುತ್ತಿರುವುದು ಇದೇನೂ ಮೊದಲಬಾರಿ ಅಲ್ಲ.

2008ರ ವಿಧಾನಸಭಾ ಚುನಾವಣೆಗಳಿಗೆ ಕೆಲವೇ ದಿನಗಳ ಮೊದಲು ಹುಬ್ಬಳ್ಳಿಯ ಕೋರ್ಟು ಆವರಣದಲ್ಲಿ ಬಾಂಬ್ ಸ್ಫೋಟ ಸಂಭವಿಸಿದಾಗ ಮಾಧ್ಯಮಗಳು ಪ್ರಕಟಿಸಿದ ರೋಮಾಂಚಕಾರೀ ವರದಿಗಳು ಹಾಗೂ ಆ ಪ್ರಕರಣದಲ್ಲಿ ಬಂಧಿತರಾಗಿದ್ದ ನಿರಪರಾಧಿ ಮುಸ್ಲಿಮರನ್ನು ಒಂದುಕ್ಷಣ ನೆನಪಿಸಿಕೊಳ್ಳಿ; ಈ ಆರೋಪಿಗಳ ಪರವಾಗಿ ಕೋರ್ಟಿನಲ್ಲಿ ವಾದಿಸಲು ಬಂದ ವಕೀಲರನ್ನು ಸಹ ಹುಬ್ಬಳ್ಳಿಯ ಇತರ ವಕೀಲರು ತಡೆದರು. ಬಾಂಬ್ ಸ್ಫೋಟಿಸಿದವರು ಪ್ರಮೋದ್ ಮುತಾಲಿಕ್‌ನ ಕಾಲಾಳುಗಳು ಎಂಬ ಸತ್ಯ ಹೊರಬಂದಾಗ ಮಾಧ್ಯಮಗಳು ತಾವು ಮಾಡಿದ ಪ್ರಮಾದ ಬಗ್ಗೆ ತಪ್ಪೊಪ್ಪಿಗೆಯ ಒಂದು ಸಾಲನ್ನು ಕೂಡ ಪ್ರಕಟಿಸಲಿಲ್ಲ. 2001ರಲ್ಲಿ ದೆಹಲಿಯ ಪಾರ್ಲಿಮೆಂಟ್ ಭವನದ ಮೇಲೆ ಉಗ್ರರು ನಡೆಸಿದ ದಾಳಿಗೆ ಸಂಬಂಧಿಸಿದ ಹಾಗೆ, ದೆಹಲಿ ಪೊಲೀಸರು ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಸ್.ಎ.ಆರ್. ಗಿಲಾನಿಯವರನ್ನು ಬಂಧಿಸಿದರು. ಆಕಸ್ಮಿಕವಾಗಿ ಅವರಿಗೆ ಬಂದ ಒಂದು ಫೋನ್ ಕರೆ ಮತ್ತು ಅವರ ಕಂಪ್ಯೂಟರಿನಲ್ಲಿದ್ದ ಕೆಲ ಸರ್ವೇಸಾಮಾನ್ಯ ಮಾಹಿತಿಗಳು ಕೇವಲ ಇಷ್ಟರ ಆಧಾರದಲ್ಲಿ ಪೊಲೀಸರು ಅವರನ್ನೂ ಬಂಧಿಸಿದ್ದರು. ಸತತ ನಾಲ್ಕು ವರ್ಷಗಳ ಕಠಿಣ ಜೈಲುವಾಸ ಮತ್ತು ಕಾನೂನು ಹೋರಾಟಗಳ ನಂತರ ನ್ಯಾಯಾಲಯ ಅವರನ್ನು ನಿರಪರಾಧಿ ಎಂದು ತೀರ್ಮಾನಿಸಿತು. ಹೆಚ್ಚುಕಡಿಮೆ ಇಂತಹದ್ದೇ ಕಾರಣಕ್ಕೆ ಪತ್ರಕರ್ತ ಇಫ್ತಿಕರ್ ಗಿಲಾನಿ ಹಲವು ತಿಂಗಳ ಕಠಿಣ ಜೈಲು ಶಿಕ್ಷೆಯನ್ನು ಕಾರಣವಿಲ್ಲದೆ ಅನುಭವಿಸಿದರು. ಮಾಧ್ಯಮಗಳು ಈ ಇಬ್ಬರು ಗಿಲಾನಿಯವರನ್ನು ವಸ್ತುಶಃ ಬೇಟೆಯಾಡಿತು.

ಇದಕ್ಕಿಂತ ಹೆಚ್ಚು ದಾರುಣವಾಗಿರುವುದು ಸ್ವಾಮಿ ಅಸೀಮಾನಂದ ನ್ಯಾಯಾಲಯದ ಮುಂದೆ ನೀಡಿದ ತಪ್ಪೊಪ್ಪಿಗೆಯ ಹೇಳಿಕೆಯ ನಂತರ ಹೊರಬಿದ್ದ ಸಂಗತಿಗಳು. 2006ರಲ್ಲಿ ಮಹಾರಾಷ್ಟ್ರದ ಮಾಲೆಗಾಂ ನಗರದಲ್ಲಿ ಒಂದು ಸರಣಿ ಬಾಂಬ್ ಸ್ಫೋಟ ನಡೆಯಿತು. ಆಗ ಮಹಾರಾಷ್ಟ್ರದ ಭಯೋತ್ಪಾದನೆ ನಿಗ್ರಹ ದಳ A.T.S.ನ ಮುಖ್ಯಸ್ಥರಾಗಿದ್ದ ಹೇಮಂತ ಕರ್ಕರೆ ಆ ಸ್ಫೋಟದ ತನಿಖೆ ನಡೆಸಿ 2008ರಲ್ಲಿ ಅದರ ಸೂತ್ರಧಾರರಾದ ಸಾಧ್ವಿ ಪ್ರಜ್ಞಾ ಸಿಂಗ್, ದಯಾನಂದ ಪಾಂಡೆ, ಸೈನ್ಯಾಧಿಕಾರಿ ಶ್ರೀಕಾಂತ್ ಪುರೋಹಿತ್ ಮತ್ತು ಸ್ವಾಮಿ ಅಸೀಮಾನಂದರನ್ನು ಬಂಧಿಸಿದರು. 2007ರಲ್ಲಿ ನಡೆದ ಸಮ್ಜೋತಾ ಎಕ್ಸ್‌ಪ್ರೆಸ್, ಅಜ್ಮೀರ್ ಶರೀಫ್ ದರ್ಗ ಮತ್ತು ಹೈದರಾಬಾದಿನ ಮಕ್ಕಾ ಮಸೀದಿಯ ಬಾಂಬ್ ಸ್ಫೋಟಗಳಲ್ಲೂ ಇವರ ಕೈವಾಡವಿತ್ತು. ಆದರೆ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರು 32 ಅಮಾಯಕ ಮುಸ್ಲಿಮ್ ತರುಣರನ್ನು ಬಂಧಿಸಿದ್ದರು. ಅವರಲ್ಲಿ ಒಬ್ಬಾತ ಕೇವಲ 18ರ ಹರೆಯದ ಅಬ್ದುಲ್ ಕಲೀಮ್ ಎಂಬ ಹೈದರಾಬಾದ್‌ನ ತರುಣ. ಜೈಲಿನಲ್ಲಿ ಅವನ ಸ್ಥಿತಿ ಕಂಡು ಮನಕರಗಿದ ಸ್ವಾಮಿ ಅಸೀಮಾನಂದ 2010ರಲ್ಲಿ ದೆಹಲಿಯ ತೀಸ್ ಹಜಾರಿ ಕೋರ್ಟಿನ ನ್ಯಾಯಾಧೀಶರ ಮುಂದೆ ತಾವೇ ಆ ಬಾಂಬ್ ಸ್ಫೋಟಗಳನ್ನು ನಡೆಸಿದ್ದು ಎಂಬ ತಪ್ಪೊಪ್ಪಿಗೆಯ ಹೇಳಿಕೆ ನೀಡಿದ. ಅದರಿಂದಾಗಿ ಜೈಲಿನಲ್ಲಿ ಕೊಳೆಯುತ್ತಿದ್ದ 32 ಯುವಕರು ಬಿಡುಗಡೆಗೊಂಡರು. ಆದರೆ ಅವರ ಬದುಕು ಮಾತ್ರ ನುಚ್ಚುನೂರಾಗಿತ್ತು.

2007ರಲ್ಲಿ ಇಂಗ್ಲೆಂಡ್‌ನ ಗ್ಲಾಸ್ಗೋ ನಗರದ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಬಂಧಿತರಾಗಿದ್ದ ಕರ್ನಾಟಕದ ವೈದ್ಯ ಡಾ. ಮೊಹ್ಮದ್ ಹನೀಫ್‌ರ ಬದುಕು ಕೂಡಾ ಹೀಗೆಯೇ ಮೂರಾಬಟ್ಟೆಯಾಗುತ್ತಿತ್ತು; ಅವರು ಕರ್ನಾಟಕದ ವಾಸಿಯಾಗಿದಿದ್ದರೆ! ಮೊಹ್ಮದ್ ಹನೀಫ್ ಆಸ್ಟ್ರೇಲಿಯಾದಲ್ಲಿ ತಮ್ಮ ವೃತ್ತಿ ನಡೆಸುತ್ತಿದ್ದರು. ಆ ದೇಶದ ನ್ಯಾಯಾಲಯದಲ್ಲಿ ಅವರ ವಿಚಾರಣೆ ನ್ಯಾಯಸಮ್ಮತವಾಗಿ ನಡೆಯಿತು; ಆಸ್ಟ್ರೇಲಿಯದ ಪತ್ರಕರ್ತರು ಮತ್ತು ಲೇಬರ್ ಪಕ್ಷದ ರಾಜಕಾರಣಿಗಳು ಮೊಹ್ಮದ್ ಹನೀಫ್‌ರಿಗೆ ಬೆಂಬಲವಾಗಿ ನಿಂತರು. ಹನೀಫ್ ತಮ್ಮ ವಿರುದ್ಧ ಹೊರಿಸಲಾದ ಸುಳ್ಳು ಆರೋಪಗಳಿಂದ ಖುಲಾಸೆಯಾಗುವುದರ ಜೊತೆಗೆ ಆಸ್ಟ್ರೇಲಿಯ ಸರಕಾರದಿಂದ ಪರಿಹಾರ ಕೂಡ ಪಡೆದುಕೊಂಡರು. ಈ ಎಲ್ಲ ಪ್ರಕರಣಗಳಿಂದ ನಮ್ಮ ಮಾಧ್ಯಮಗಳು ಇನ್ನಾದರೂ ಪಾಠ ಕಲಿಯಬೇಕು. ಮಾಧ್ಯಮಗಳು ತಾವೇ ಆರೋಪಿಗಳ ವಿಚಾರಣೆ ನಡೆಸಿ, ತಾವೇ ತೀರ್ಪು ಪ್ರಕಟಿಸುವುದು ಪ್ರಜಾಪ್ರಭುತ್ವದ ನ್ಯಾಯಕ್ಕೆ ವಿರುದ್ಧವಾದದ್ದು. ಮಾಧ್ಯಮಗಳ ಈ ಏಕಪಕ್ಷೀಯ ವರ್ತನೆ ಕರ್ನಾಟಕದಲ್ಲೂ, ದೇಶದಲ್ಲೂ ಫ್ಯಾಸಿಸ್ಟ್ ಮತ್ತು ಬಲಪಂಥೀಯ ಶಕ್ತಿಗಳು ಮತ್ತೆ ಮುಂಚೂಣಿಗೆ ಬರುತ್ತಿವೆ ಎಂಬುದರ ಸೂಚನೆಯಾಗಿದೆ.

● ಜೆ.ರಾಜಶೇಖರ



...ಸಿರಿಬಿಟ್ಟವೆ. ಮೊನ್ನೆ 29.8.2012ರಂದು ಯಶವಂತಪುರ ... ಕಣ್ಣೂರು ರೈಲಿನಲ್ಲಿ ಮಂಗಳೂರಿಗೆ ಪ್ರಯಾಣಿಸುತ್ತಿದ್ದ ... ರಾಜ್ಯಗಳ ಸುಮಾರು ನೂರು ಜನರನ್ನು 'ವಿಚಾರಣೆ' ಮಾಡಿದ ಅದೇ ರೈಲಿನಲ್ಲಿದ್ದ 30-40 ಎಬಿವಿಪಿ ಮಂದಿ ... ಲ್ಲ ಬಾಂಗ್ಲಾದೇಶದಿಂದ ಬಂದ 'ಅಕ್ರಮ ವಲಸೆಗಾರರು' ಎಂಬ 'ತೀರ್ಮಾನ'ಕ್ಕೆ ಬಂದಿದ್ದಾರೆ. ನಂತರ ರಾತ್ರಿ ಸುಮಾರು 10:30ಕ್ಕೆ ರೈಲನ್ನು ಹಲವು ಗಂಟೆಗಳ ಕಾಲ ಮಂಡ್ಯ ... ದಲ್ಲಿ ಅಕ್ರಮವಾಗಿ ತಡೆದು ನಿಲ್ಲಿಸಿ ಮತ್ತಷ್ಟು 'ವಿಚಾರಣೆ' ನಡೆಸಿ ಕೊನೆಗೆ ಆ ಬಡಪಾಯಿಗಳನ್ನೆಲ್ಲ ಪೊಲೀಸರ ವಶಕ್ಕೊಪ್ಪಿಸಿದ್ದಾರೆ.

ವಾಸ್ತವವಾಗಿ ಆ ಜನರೆಲ್ಲರೂ ಉತ್ತರ ಪ್ರದೇಶ, ಬಿಹಾರ, ... ಬಂಗಾಳ, ರಾಜಸ್ಥಾನದಿಂದ ದಕ್ಷಿಣ ಭಾರತಕ್ಕೆ ... ಬಡ ವಲಸೆ ಕಾರ್ಮಿಕರು. ಇಲ್ಲಿನ ರಸ್ತೆ ಮತ್ತು ... ನಿರ್ಮಾಣ ಮುತ್ತಿತರ ಉದ್ಯಮಗಳಲ್ಲಿ ಕೂಲಿನಾಲಿ ... ಕೊಂಡು ತಮ್ಮ ಸಂಸಾರಗಳ ನಿರ್ವಹಣೆ ಮಾಡುತ್ತಿರು ... ವರು. ಕೆಲವರು ಉದ್ಯೋಗಾಕಾಂಕ್ಷಿಗಳಾದರೆ ಇನ್ನು ಕೆಲವರು ತಮ್ಮ ಸಂಬಂಧಿಗಳನ್ನು ಕಾಣಲೆಂದು ... ಹೊರಟವರು.

ಇಲ್ಲಿ ಪ್ರಜ್ಞಾವಂತರಾದ ನಮ್ಮೆಲ್ಲರನ್ನೂ ಕಾಡಬೇಕಾದ ಕೆಲವು ಪ್ರಶ್ನೆಗಳಿವೆ. ಎಬಿವಿಪಿ ಹುಡುಗರ ಪೈಕಿ ಯಾರೊಬ್ಬನಿಗೂ ಹಿಂದಿ ಭಾಷೆಯ ಜ್ಞಾನ ಇರಲಿಲ್ಲವೇ? ಹಿಂದಿಯಲ್ಲಿ ಒಂದೆರಡು ಪ್ರಶ್ನೆ ಕೇಳಿದ್ದರೆ ಎಲ್ಲವೂ ಸ್ಪಷ್ಟವಾಗುತ್ತಿರಲಿಲ್ಲವೇ? ಹಾಗಾಗಿ ಎಬಿವಿಪಿ ಸದಸ್ಯರು ಒಂದೋ ಗುಂಡಿನ ಅಥವಾ ತಮ್ಮ ಸಂಘ ಪರಿವಾರದ ನೇತಾಗಳ ಉಗ್ರ ಭಾಷಣದ ಅಮಲಿನಲ್ಲಿ ತೇಲುತ್ತಿದ್ದಿರಬೇಕು ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಬಂಗಾಲಿ ಭಾಷೆ ಮಾತಾಡುವವರೆಲ್ಲರೂ ಬಾಂಗ್ಲಾದೇಶೀಯರು ಎಂದು ಎಬಿವಿಪಿಯ ವಿದ್ಯಾರ್ಥಿಗಳು ಭಾವಿಸುತ್ತಿದ್ದಾರಾದರೆ ಒಂದೋ ಅವರಲ್ಲಿ ವಿದ್ಯೆಯ ಅಭಾವ ಇದೆ ಅಥವಾ ಉದ್ದೇಶಪೂರ್ವಕವಾಗಿ ಯಾರೊ ಹೇಳಿಕೊಟ್ಟ ಡಯಲಾಗನ್ನೆ ಕಕ್ಕುತ್ತಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು.


ಇದೇ ಎಬಿವಿಪಿಯ ಕೆಲವು ವಿದ್ಯಾರ್ಥಿಗಳು 2008ರಲ್ಲಿ ಮಧ್ಯಪ್ರದೇಶದ ಉಜ್ಜಯಿನಿ ನಗರದ ಮಾಧವ್ ಕಾಲೇಜಿನ ಪ್ರೊ. ಎಚ್.ಎಸ್. ಸಭರ್‌ವಾಲ್‌ರನ್ನು ಕೊಲೆ ಮಾಡಿದ್ದರು. ಕರ್ನಾಟಕದಲ್ಲಿ ಹಲವಾರು ಎಬಿಬಿಪಿ ಸದಸ್ಯರ ವಿರುದ್ಧ ನ್ಯಾಯಾಲಯಗಳಲ್ಲಿ ಅನೇಕ ಮೊಕದ್ದಮೆಗಳು ಜಾರಿಯಾಗಿದ್ದವು. ಆದರೆ ಬಿಜೆಪಿ ಸರ್ಕಾರದ ಘನ ಸಚಿವ ಸಂಪುಟದ ಕೃಪಾಕಟಾಕ್ಷದಿಂದಾಗಿ ಆ ಎಲ್ಲಾ ಮೊಕದ್ದಮೆಗಳನ್ನು ವಾಪಸ್ ಪಡೆಯಲಾಗಿದೆ.

ಇನ್ನು ಭಯೋತ್ಪಾದನೆ ವಿಷಯಕ್ಕೆ ಬಂದರೆ ಮಾಲೆಗಾಂವ್, ಮಕ್ಕಾ ಮಸೀದಿ, ಅಜ್ಮೀರ, ಸಂಜೋತಾ ಎಕ್ಸ್‌ಪ್ರೆಸ್ ಮೊದಲಾದ ಸ್ಫೋಟಗಳಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಾಧ್ವಿ ಪ್ರಜ್ಞಾ ಸಿಂಗ್ ಠಾಕುರ್ ಒಂದು ಕಾಲದಲ್ಲಿ ಎಬಿವಿಪಿಯ ಸಕ್ರಿಯ ಸದಸ್ಯೆ ಆಗಿದ್ದಾಕೆ. ಆದುದರಿಂದಲೆ ಯಾವ ಕಾರಣಗಳಿಗಾಗಿ ಸಿಮಿ ಸಂಘಟನೆಯನ್ನು ನಿಷೇಧಿಸಲಾಗಿದೆಯೊ ಅದೇ ಕಾರಣಗಳಿಗಾಗಿ ಎಬಿವಿಪಿ ಸಂಘಟನೆಯನ್ನೂ ನಿಷೇಧಿಸಬೇಕೆಂದು ಹೇಳುವುದೂ ಒಂದು ತರ್ಕಬದ್ಧ ಬೇಡಿಕೆ ಆಗುತ್ತದೆ.

ಭಯೋತ್ಪಾದನೆ ಎನ್ನುವುದು ಒಂದು ಅತ್ಯಂತ ಜನವಿರೋಧಿ, ಅಪಾಯಕಾರಿ ಹಾಗೂ ದೇಶದ್ರೋಹದ ಕೃತ್ಯವೆಂಬುದರಲ್ಲಿ ಎರಡು ಮಾತಿಲ್ಲ. ಇತ್ತೀಚೆಗೆ ಕರ್ನಾಟಕ ಪೊಲೀಸ್ ಇಲಾಖೆ ಪತ್ರಿಕಾಗೋಷ್ಠಿಯೊಂದನ್ನು ಕರೆದು ತಾನು ಇಂತಹ ಒಂದು ದುಷ್ಕೃತ್ಯದ ಪಿತೂರಿಯನ್ನು ಬೇಧಿಸಿ ಅದರ ರೂವಾರಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವೆನೆಂದು ಹೇಳಿಕೊಂಡಿದೆ. ಭಯೋತ್ಪಾದನೆ ವಿಷಯದಲ್ಲಿ ನಮ್ಮ ರಾಜ್ಯದ, ಅಷ್ಟೇ ಏಕೆ ನಮ್ಮ ಹಲವಾರು ರಾಜ್ಯಗಳ ಗುಪ್ತಚರ ಮತ್ತು ಪೊಲೀಸ್ ಇಲಾಖೆಗಳ ಕಾರ್ಯವೈಖರಿಯನ್ನು ಬಲ್ಲವರಿಗೆ ಇದರಿಂದೇನೂ ಅಚ್ಚರಿಯಾಗಿಲ್ಲ ಬಿಡಿ. ಕತೆಯ ವಸ್ತು ಅದೇ; ಆದರೆ ಪಾತ್ರಧಾರಿಗಳ ಹೆಸರು ಮಾತ್ರ ಬೇರೆ. ಅಷ್ಟೇ ವ್ಯತ್ಯಾಸ.

ಸತ್ಯಾಸತ್ಯತೆ ಏನಿದ್ದರೂ ಅದು ಹೊರಬೀಳುವಷ್ಟರಲ್ಲಿ ಹಲವು ವರ್ಷಗಳೆ ಗತಿಸಿರುತ್ತವೆ. ಬಂಧಿತರು ನಿರಪರಾಧಿಗಳು ಎಂದು ಮುಂದೊಂದು ದಿನ ನ್ಯಾಯಾಲಯ ತೀರ್ಮಾನಿಸಿದರೆ ಯಾರಿಗೇನು ಬಿದ್ದುಹೋಗಿದೆ? ಸದ್ಯಕ್ಕಂತೂ ಬೇಕಾಗಿರುವುದು ಮುಂಬರುವ ಚುನಾವಣೆಯಲ್ಲಿ ಬೀಳಬೇಕಾದ ಮತಗಳು. ನಮ್ಮ ದೇಶದಲ್ಲಿ ಸುಳ್ಳು ಮಾಹಿತಿ ನೀಡುವ ಗುಪ್ತಚರ ಇಲಾಖೆಯ ಅಧಿಕಾರಿಗಳಿಗೆ ಮತ್ತು ನಿರಪರಾಧಿಗಳನ್ನು ಜೈಲಿಗಟ್ಟುವ ಪೊಲೀಸ್ ಅಧಿಕಾರಿಗಳಿಗೆ ಶಿಕ್ಷೆಯಾಗುತ್ತದೆಂದು ಯಾರಾದರೂ ಭಾವಿಸಿದರೆ ಅವರು ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದಾರೆಂದೇ ಅರ್ಥ. ಇರಲಿ.

ಈಗ ಎಬಿವಿಪಿಯವರು ಮಂಡ್ಯದಲ್ಲಿ ನಡೆಸಿದ ದುಷ್ಕೃತ್ಯವೂ ಒಂದು ಅತ್ಯಂತ ಜನವಿರೋಧಿ, ಅಪಾಯಕಾರಿ ಹಾಗೂ ದೇಶದ್ರೋಹದ ಕೃತ್ಯವಾಗಿದೆ. ಆದರೆ ಹಿರಿಯ ಪೊಲೀಸ್ ಅಧಿಕಾರಿಗಳು ಯಾರೂ ಈ ವಿಷಯದ ಬಗ್ಗೆ ಪತ್ರಿಕಾಗೋಷ್ಠಿ ನಡೆಸಲು ಯಾವುದೇ ಉತ್ಸಾಹ ತೋರದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಡುವುದಿಲ್ಲವೇ?



ಕರ್ನಾಟಕದಲ್ಲಿ ಚುನಾವಣೆಗಳು ಹತ್ತಿರವಾಗುತ್ತಿವೆ. ಸಂಘ ಪರಿವಾರಕ್ಕೀಗ ತನ್ನ ಸಚಿವ ಶಿಖಾಮಣಿಗಳ ಬ್ರಹ್ಮಾಂಡ ಭ್ರಷ್ಟಾಚಾರ, ಆಂತರಿಕ ಕಚ್ಚಾಟ, ಕಾಮಕಾಂಡ, ಹೋಂ ಸ್ಟೇ ದಾಳಿ ಇವೇ ಮುಂತಾದ ಹತ್ತು ಹಲವು ಕರ್ಮಕಾಂಡಗಳಿಂದ ಜನರ ಗಮನವನ್ನು ಆಚೆ ಸೆಳೆಯಬೇಕಾಗಿದೆ. ಆ ಉದ್ದೇಶಕ್ಕೋಸ್ಕರವೇ ಎಬಿವಿಪಿ, ವಿಹಿಂಪ, ಹಿಂಜಾವೇ, ಬಜರಂಗ ದಳ ಮೊದಲಾದ ಸಂಘ ಪರಿವಾರಿ ಸಂಘಟನೆಗಳನ್ನು ಕಣಕ್ಕೆ ಇಳಿಸಲಾಗಿದೆ. ಮೊದಲನೆಯ ಅಸ್ತ್ರವಾಗಿ 'ಬಾಂಗ್ಲಾದೇಶೀಯ ನುಸುಳುಕೋರರು' ಎಂಬ ಕಾಲ್ಪನಿಕ ಭೂತವನ್ನು ಪ್ರಯೋಗಿಸಲಾಗಿದೆ. ಭಯೋತ್ಪಾದನೆಯ ಸಂಚುಗಳು ಬಹುಶಃ ಎರಡನೆ ಅಸ್ತ್ರ. ಮುಂದಿನ ದಿನಗಳಲ್ಲಿ ಇನ್ನೂ ವೈವಿಧ್ಯಮಯವಾದ, ಪ್ರಾಯಶಃ ಇನ್ನಷ್ಟು ಹಿಂಸಾತ್ಮಕವಾದ ಚುನಾವಣಾಪೂರ್ವ ತಂತ್ರಗಳನ್ನು ನಿರೀಕ್ಷಿಸಬಹುದು ಅನಿಸುತ್ತದೆ.

● ಸುರೇಶ್ ಭಟ್ ಬಾಕ್ರಬೈಲು






ನೆಲಮಂಗಲದ ರೌಡಿಗಳೂ ಪೋಲೀಸರೂ ಒಟ್ಟೊಟ್ಟಿಗೆ ಭೋಜನಕ್ಕೆ

ಕಾರ್ಮಿಕರ ಪಾಲಿಗೆ ವಿಷವಾದ ಹಿಮಾಲಯ ಡ್ರಗ್

ಬಿಜೆಪಿಯ ದುರಾಡಳಿತ ಮತ್ತು ಕುಲಗೆಟ್ಟ ಪೊಲೀಸ್ ವ್ಯವಸ್ಥೆಯ ಲಾಭ ಪಡೆಯುತ್ತಿರುವುದು ಕೇವಲ ರಿಯಲ್ ಎಸ್ಟೇಟ್ ಖದೀಮರು, ರೌಡಿಗಳು, ಭಜರಂಗಿಗಳು ಮತ್ತು ಕೇಸರಿ ಪುಢಾರಿಗಳಷ್ಟೇ ಅಲ್ಲ, ಕಾಸು ಬಿಚ್ಚಿದರೆ ರೌಡಿಗಳೂ ಮಾಡಲಾಗದ ಕರಾಮತ್ತುಗಳನ್ನು ಪೊಲೀಸರೇ ಪೂರೈಸಿ ಕೊಡಲು ಹಾತೊರೆಯುತ್ತಿರುವಾಗ ದೇಶದ ದೈತ್ಯ ಔಷಧಿ ಕಂಪೆನಿಯಾದ ಹಿಮಾಲಯ ಡ್ರಗ್ ಕಂಪೆನಿಗೆ ನೆಲಮಂಗಲದ ಹಂತಕರಿಗಿಂತಲೂ ಪೊಲೀಸರೇ ಚೀಪ್ ಅಂಡ್ ಬೆಸ್ಟ್ ಆಗಿ ಕಂಡಿದ್ದರಲ್ಲಿ ಏನಾಶ್ಚರ್ಯವೂ ಇಲ್ಲ.

ಯಕೃತ್ತಿನ ರೋಗವಿದ್ದವರಿಗೆ ವೈದ್ಯರು ನೆಲಮಂಗಲದ ಹಿಮಾಲಯ ಡ್ರಗ್ ಕಂಪೆನಿಯದ್ದೇ ಉತ್ಪನ್ನವಾದ **Liv-52** ಎಂಬ ಸಿರಪ್ ಬರೆದುಕೊಡುತ್ತಾರೆ. ಕಿಡ್ನಿ ಕಲ್ಲಿನ ವ್ಯಾಧಿಯಿತ್ತೆಂದರೆ ಡಾಕ್ಟರುಗಳು ಇದೇ ಹಿಮಾಲಯದ ತಯಾರಿಕೆಯಾದ **Syson** ಟ್ಯಾಬ್ಲೆಟ್ಟನ್ನು ಶಿಫಾರಸ್ಸು ಮಾಡುತ್ತಾರೆ. ವಾಯು ಪ್ರಕೋಪ ಅಂದರೆ ಗ್ಯಾಸ್ ಟ್ರಬಲ್ಲಿಗೆ ಬಳಸುವ **Gasx** ಮಾತ್ರೆ, ಮಕ್ಕಳ ಅಜೀರ್ಣದ ವಿರುದ್ಧ ಕುಡಿಸುವ **Bonizen** ದ್ರಾವಣ; ಲಲನೆಯರ ಕೇಶ ಕಾಂತಿಗೆ ವರದಾನವಾದ ಹಿಮಾಲಯ ಶಾಂಪೂ, ಮುಖಕಾಂತಿಗೆಂದು ಹಿಮಾಲಯ ಫೇಸ್ ವಾಶ್, ಹಿಮಾಲಯ ಸೋಪುಗಳು, ಟೂತ್ ಪೇಸ್ಟ್, ಬೇಬಿ ಸೋಪ್, ಬೇಬಿ ಲೋಶನ್-ಹೀಗೆ ಸರಿಸುಮಾರು 68 ವೈಖರಿಯ ಮದ್ದು, ಶೃಂಗಾರ ಪ್ರಸಾಧನಗಳ ಬ್ರಹ್ಮಾಗಾರವಾದ ಹಿಮಾಲಯ ಡ್ರಗ್ ಕಂಪೆನಿ ಯಾವ ರೇಟಿಗೆ ಯಾರ ಆರೋಗ್ಯ ಕಾಪಾಡಿದೆಯೋ ಗೊತ್ತಿಲ್ಲ.

ಆದರೆ ದುಡ್ಡಿನ ದಾಹ, ದುರಹಂಕಾರ ಮತ್ತು ಕೀರ್ತಿಯ ಮದ ನೆತ್ತಿಗೇರಿಬಿಟ್ಟರೆ ಔಷಧಿ ಕಂಪೆನಿಯೊಂದರ ಆರೋಗ್ಯವೇ ಹೇಗೆ ಬಿಗಡಾಯಿಸುತ್ತದೆ ಎಂಬುದಕ್ಕೆ ನೆಲಮಂಗಲದ ಹಿಮಾಲಯ ಡ್ರಗ್ ಕಂಪೆನಿ ತನ್ನ ನಿಷ್ಠಾವಂತ ಕಾರ್ಮಿಕರ ಮೇಲೆ ಎಸಗುತ್ತಿರುವ ದೌರ್ಜನ್ಯ, ಗೂಂಡಾಗಿರಿಯೇ ಸಾಕು. ಸದ್ಯ ರಾಜಾಜಿನಗರದ ಸುಗುಣ ಆಸ್ಪತ್ರೆಯ 301ನೇ ಕೊಠಡಿಯಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿ ನರಳುತ್ತಿರುವ ರಮೇಶ್‌ನ ಬಲಗಿವಿಯ ತಮಟೆಯೇ ಕಿತ್ತುಹೋಗಿದೆ. ಕಿವಿಯಿಂದ ಸೋರಿದ ರಕ್ತ ಮತ್ತು ಮೈತುಂಬಾ ಬಿದ್ದ ಬಾಸುಂಡೆಗಳ ಪರಿಣಾಮವಾಗಿ ರಮೇಶ್ ಚೇತರಿಸಿಕೊಳ್ಳಬೇಕೆಂದರೆ ಇನ್ನೂ ತಿಂಗಳ ಕಾಲ ಆಸ್ಪತ್ರೆಯಲ್ಲೇ ಬಿದ್ದಿರಬೇಕು.


ಮುಂಗಾರು ಮಳೆ ಕೃಷ್ಣಪ್ಪ

ಕಾರ್ಮಿಕ ದಮನ

ಈ ರಮೇಶ್ ಹಿಮಾಲಯದ ಡ್ರಗ್ ಕಂಪೆನಿಯಲ್ಲಿ ಕಳೆದ ಹತ್ತು ವರ್ಷಗಳಿಂದ ದುಡಿಯುತ್ತಿರುವ ನಿಷ್ಠಾವಂತ ಕಾರ್ಮಿಕ. ಈತನನ್ನು ಈ ರೀತಿ ಅರೆಜೀವ ಹೊಡೆದದ್ದು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಎಸ್ಸೈ ನಾಗೇಶ್. ಅಷ್ಟಕ್ಕೂ ರಮೇಶ್ ಮಾಡಿದ ತಪ್ಪೇನೆಂದರೆ ಅದೇ ಹಿಮಾಲಯದ ಡ್ರಗ್‌ನ ತನ್ನ ಬಡ ಕಾರ್ಮಿಕನೊಬ್ಬ ಕೆಲಸ ಮಾಡುವಾಗಲೇ ಅಪಘಾತಕ್ಕೀಡಾಗಿದ್ದರ ವಿರುದ್ಧ ದನಿಯೆತ್ತಿದ್ದು ಮತ್ತು ಆತನ ಪ್ರಾಣ ಉಳಿಸಲು ಬೇಕಾದ ರಕ್ತವನ್ನು ತಾನು ಕೊಡುತ್ತೇನೆಂದು ಮುಂದೆ ಬಂದದ್ದು!

ಹೊಟ್ಟೆಗೆ ಅನ್ನ ತಿನ್ನುವ ಯಾರಿಗಾದರೂ ಇದು ವಿಚಿತ್ರವೆನಿಸಬಹುದಲ್ಲವೇ! ಇದು ವಿಚಿತ್ರವಾದರೂ ಸತ್ಯ. ಯಾವ ಹಿಮಾಲಯ ಡ್ರಗ್ ಕಂಪೆನಿ ತನ್ನ ಔಷಧಿ ಮತ್ತು ನಿಸರ್ಗ ಪರ ಆರೋಗ್ಯ ಸಂಶೋಧನೆಗೆ ಹೆಸರುವಾಸಿಯೆಂದು ಹಣೆ ಪಟ್ಟಿ ಹೊತ್ತಿದೆಯೋ ಅದೀಗ ತನ್ನದೇ ಕಂಪನಿಯ ನಿಷ್ಠಾವಂತ ಕಾರ್ಮಿಕರ ರಕ್ತ ಹೀರಲು ನಿಂತಿದೆ. ಒಂದೆಡೆ ಮುಂಗಾರು ಮಳೆ ಕೃಷ್ಣಪ್ಪನ ರೌಡಿ ಪಡೆಯನ್ನು ಛೂಬಿಟ್ಟು ಅನ್ಯಾಯದ ವಿರುದ್ಧ ದನಿಯೆತ್ತಿದ ನೌಕರರ ಮೇಲೆ ಗೂಂಡಾಗಿರಿ ನಡೆಸಿದರೆ ಮತ್ತೊಂದೆಡೆ ಪೊಲೀಸರಿಗೇ ಸುಪಾರಿ ಕೊಟ್ಟು ಕಾರ್ಮಿಕರ ಕೈಕಾಲು ಮುರಿಸುತ್ತಿದೆ. ಲೋಕದ ಜನರ ರೋಗರುಜಿನಗಳಿಗೆ ಔಷಧಿ ಕಂಡುಹಿಡಿಯುವ ಹಿಮಾಲಯ ಡ್ರಗ್ಸ್‌ನ ಧಣಿಗಳ ಮನೋವ್ಯಾಧಿಗೆ ಮಾತ್ರ ದೇಶದ ಕಾನೂನು ಕೋರ್ಟು, ಸರ್ಕಾರ ಯಾವುದರಿಂದಲೂ ಚಿಕಿತ್ಸೆ ಸಾಧ್ಯವಾಗುತ್ತಿಲ್ಲ.


ಕಳೆದೊಂದು ತಿಂಗಳಿಂದ ಕಾರ್ಮಿಕ ಮುಖಂಡರಾದ ಸಿದ್ಧರಾಜು ಮತ್ತು ದೇವರಾಜ್ ಮೇಲೆ ಮುಂಗಾರು ಮಳೆ ಕೃಷ್ಣಪ್ಪನ ರೌಡಿ ಪಡೆಯನ್ನು ಛೂಬಿಟ್ಟು ಕೊಲೆಗೆ ಹಿಮಾಲಯ ಡ್ರಗ್ಸ್ ಧಣಿಗಳು ಕೈಹಾಕಿದ್ದಾರೆ. ಮಾಲಿಕ ವರ್ಗದ ಗೂಂಡಾಗಿರಿ ವಿರುದ್ಧ ರಕ್ಷಣೆ ಕೇಳಲೆಂದು ಮಾದನಾಯಕನಹಳ್ಳಿ ಪೊಲೀಸರ ಮೊರೆಹೊಕ್ಕ ನೂರಾರು ಮಂದಿ ಕಾರ್ಮಿಕರನ್ನು ಪೊಲೀಸರೇ ಹೊಡೆದೋಡಿಸಿದ್ದಾರೆ. ಮೃತ್ಯುಂಜಯ ಎಂಬ ಕಾರ್ಮಿಕ ಕಾರ್ಖಾನೆಯಲ್ಲೇ ಅಪಘಾತಕ್ಕೀಡಾದರೆ ಆತನಿಗೆ ಚಿಕಿತ್ಸೆ ಕೊಡಿಸುವುದಿರಲಿ, ಅನಾಥ ಹೆಣವನ್ನು ಹದ್ದುಗಳಿಗೆಸೆದಂತೆ ಫ್ಯಾಕ್ಟ್ರಿ ಮ್ಯಾನೇಜರುಗಳೇ ಗಾಯಗೊಂಡವನನ್ನು ಹೊತ್ತೊಯ್ದು ಆತನ ಮನೆಯೆದುರು ಬಿಸಾಕಿ ಬರುತ್ತಾರೆ. ಇದರ ಮುಂದುವರಿಕೆಯೇ ಮೊನ್ನೆ ಆಗಸ್ಟ್ 24ರಂದು ಕಾರ್ಮಿಕ ರಮೇಶ್ ಮೇಲೆ ನಡೆದ ಪೊಲೀಸರ ಪೈಶಾಚಿಕತೆ.


ಸಾವಿರ ಕೋಟಿ ಖಯಾಯಿ

ಬೆಂಗಳೂರು-ತುಮಕೂರು ರಸ್ತೆಯಲ್ಲಿ ನೆಲಮಂಗಲ ಸಮೀಪಿಸುತ್ತಿದ್ದಂತೆಯೇ ಮಾಕಳಿಯಲ್ಲಿರುವ ಹಿಮಾಲಯ ಡ್ರಗ್ಸ್ ಕಂಪೆನಿಯಲ್ಲಿನ ಒಟ್ಟು ಕಾರ್ಮಿಕರ ಸಂಖ್ಯೆ ಸರಿಸುಮಾರು ಎರಡು ಸಾವಿರದಷ್ಟಿದೆ. ಈ ಪೈಕಿ ಔಷಧಿ ಉತ್ಪಾದನಾ ಘಟಕದಲ್ಲಿ ಐನೂರು ಮಂದಿ ಕಾಯಂ ಕಾರ್ಮಿಕರಿದ್ದರೆ, ಮಿಕ್ಕ ಸಾವಿರಕ್ಕೂ ಅಧಿಕ ಮಂದಿ ಔಷಧಿಗಳ ಮಾರಾಟ, ಸಂಶೋಧನೆ, ಹಂಚಿಕೆ, ಜಾಹೀರಾತು ಮಳಿಗೆಗಳ ಉಸ್ತುವಾರಿ ನೋಡಿಕೊಳ್ಳುತ್ತಾರೆ. ವಿಶ್ವದ ನೂರಕ್ಕೂ ಅಧಿಕ ದೇಶಗಳಿಗೆ ಪ್ರತಿನಿತ್ಯ ಲೋಡುಗಟ್ಟಲೇ ರಫ್ತು ಮಾಡುವ, ಬೆಂಗಳೂರೊಂದರಲ್ಲೇ 30ಕ್ಕೂ ಹೆಚ್ಚು ಪೂರಕ ಉತ್ಪಾದನಾ ಘಟಕಗಳುಳ್ಳ, ದೇಶದಲ್ಲೇ ಸರಿಸುಮಾರು 300 ಆ್ಯಂಕ್ಸಿಲರಿ ಯೂನಿಟ್‌ಗಳ ಮೂಲಕ ತನ್ನ ಬ್ರಾಂಡಿನ ಉತ್ಪನ್ನಗಳನ್ನು ಮಾರುವ ಹಿಮಾಲಯ ಡ್ರಗ್ ಕಂಪೆನಿಯ ವಾರ್ಷಿಕ ವಹಿವಾಟೇ ಸಾವಿರ ಕೋಟಿಗೂ ಅಧಿಕ.

1930ರಲ್ಲಿ ಮುಂಬಯಿಯಲ್ಲಿ ಹಿಮಾಲಯ ಡ್ರಗ್ ಕಂಪೆನಿಯನ್ನು ಹುಟ್ಟುಹಾಕಿದ್ದು ಮಹಮ್ಮದ್ ಮನಾಲ್. ಆಗಿನ್ನೂ ಕೇವಲ 68 ಮಂದಿ ಕಾರ್ಮಿಕರಿದ್ದರು. ಈಗ ಮಾಲೀಕನಾಗಿರುವ ಮೀರಜ್ ಮನಾಲ್ ಆತನ ಒಬ್ಬನೇ ಮಗ. ಜೊತೆಗೆ ಮೀರಜ್ ಮನಾಲ್‌ನ ಮಗ ನಬೀದ್ ಮನಾಲ್ ಎಂಬಾತನೂ ಕಂಪೆನಿಯ ನೊಗ ಹೊತ್ತಿದ್ದಾನೆ. 1972ರಲ್ಲಿ ಬಾಳಠಾಕ್ರೆಯ ಕಾಟ ತಾಳಲಾರದೆ ಮುಂಬಯಿ ತೊರೆದು ಬೆಂಗಳೂರಿನಲ್ಲಿ ಕಾರ್ಖಾನೆ ಆರಂಭಿಸಿದ ಮೀರಜ್ ಮನಾಲ್ ಕನ್ನಡಿಗರ ಔದಾರ್ಯ, ನೆಲಮಂಗಲದ ರೈತರ ಭೂಮಿ, ಬೆಂಗಳೂರಿನ ಕಾರ್ಮಿಕರ ಪರಿಶ್ರಮದ ಫಲವಾಗಿ ಯಾವ ಪರಿ ಬೆಳೆದನೆಂದರೆ ಕೇವಲ ಎರಡೇ ಎರಡು ಉತ್ಪನ್ನಗಳಿಗೆ ಸೀಮಿತವಾಗಿದ್ದ ಕಂಪೆನಿಯ ವಹಿವಾಟು 2005ರ ವೇಳೆಗೆ ಅಶ್ವಗಂಧ, ಬೇವಿನ ಕ್ರೀಮ್, ನೆಲ್ಲಿಕಾಯಿ, ಪುರುಷರ ನಿರ್ವೀರ್ಯತೆ ವಿರುದ್ಧ ನೆಗ್ಗಿನ ಮುಳ್ಳಿನ ಮಾತ್ರೆ, ಬೊಜ್ಜು ನಿಯಂತ್ರಕ ಕ್ಯಾಪ್ಸೂಲ್, ಮೊಡವೆ ಕ್ರೀಮ್, ಸೌತೆಕಾಯಿ ಕ್ರೀಮ್, ಬಾದಾಮಿ ಸೋಪ್, ಕೋಲ್ಡ್ ಕ್ರೀಮ್ ಇತ್ಯಾದಿ ಆಯುರ್ವೇದದ ಅಲೆಯನ್ನೇ ಹುಟ್ಟಿ ಹಾಕಿತ್ತು.

ಅಲ್ಲಿಯತನಕ ಎಲ್ಲವೂ ನೆಟ್ಟಗಿದ್ದದ್ದು ಯಾವತ್ತು ಮ್ಯಾನೇಜರ್ ಆಗಿದ್ದ ಹೇಡನ್ ಎಂಬಾತ ಡೈರೆಕ್ಟರ್ ಹುದ್ದೆಗೆ ಬಂದನೋ, ಅದೇ ಹೊತ್ತಿಗೆ ರವಿ ಪ್ರಕಾಶ್ ಎಂಬ ಮಾರ್ವಾಡಿಯೊಬ್ಬ ಕಂಪೆನಿಗೆ ಪಾರ್ಟನರ್ ಆಗಿ ವಕ್ಕರಿಸಿದನೋ ಕಾರ್ಮಿಕರ ಪಾಲಿನ ದುರ್ದಿನಗಳು ಶುರುವಾದವು. ಲಾಭವೇನೋ ಗಗನಕ್ಕೇರಿತ್ತು, ಆದರೆ ಕಾರ್ಮಿಕರಿಗೆ ಕೊಡಬೇಕಾದ ಸವಲತ್ತು ಒಂದೊಂದಾಗಿ ಕ್ಷೀಣಿಸುತ್ತಿತ್ತು. ಅದಕ್ಕೆ ಕಾರಣರಾದ ದುಷ್ಟ ಚತುಷ್ಟಯದ ಮುಖ್ಯಸ್ಥನೇ ಮಾನವ ಸಂಪನ್ಮೂಲಾಧಿಕಾರಿ ಸತ್ಯಮೂರ್ತಿ. ಈತನಿಗೆ ಪ್ರೊಡಕ್ಷನ್ ಮ್ಯಾನೇಜರ್ ಪಟ್ಟ ಬೇರೆ. ಈತನಿಗೆ ಜೊತೆಯಾದ ಹೆಚ್.ಆರ್.ಮ್ಯಾನೇಜರ್ ಕೆ.ಜಿ.ಉಮೇಶ್, ಟೈಮ್ ಆಫೀಸರ್ ರಾಜ್‌ಕುಮಾರ್, ಸಲಹೆಗಾರ ಜಯಸಿಂಹ ಮತ್ತು ಮತ್ತೊಬ್ಬ ಹೆಚ್.ಆರ್. ಮಹಮ್ಮದ್ ಹನೀಫ್; ಯಾವ ಪರಿ ಕಾರ್ಮಿಕರನ್ನು ಗೋಳು ಹೊಯ್ದುಕೊಂಡರೆಂದರೆ-ಇವರ ಕಾಟ ತಾಳದೇ 2005ರಲ್ಲಿ 400ಕ್ಕೂ ಅಧಿಕಮಂದಿ ಕಾರ್ಮಿಕರು ಕೆಲಸ ಬಿಟ್ಟರು.


ಮೀರಜ್ ಮನಾಲ್ | ನಬಲ್ ಮನಾಲ್ | ಖದೀಮ ಹೇಡನ್ | ರಾಜ್‌ಕುಮಾರ್ | ಸತ್ಯಮೂರ್ತಿ | ಉಮೇಶ್ | ಎಚ್.ಆರ್.ಹನೀಫ್


ಆಡಕಮಾರನಹಳ್ಳಿ ವೆಂಕಟೇಶ್

ಬಾಳಠಾಕ್ರೆ ಮೇಲಿನ ಸಿಟ್ಟಿಗೆ

ಉತ್ಪಾದನಾ ಘಟಕದಲ್ಲಿ ಆ ಹೊತ್ತಿಗೆ ಉಳಿದದ್ದು ಕೇವಲ ಐನೂರು ಮಂದಿ ಮಾತ್ರ. ಇನ್ನು ತಮ್ಮನ್ನೆಲ್ಲಿ ಬೀದಿಗೆ ಹಾಕುತ್ತಾರೋ ಎಂದು ಹೆದರಿದ್ದ ಅವರೆಲ್ಲ ಸಿಐಟಿಯು ಕಾರ್ಮಿಕರ ಯೂನಿಯನ್ ಸ್ಥಾಪಿಸಿಕೊಂಡರು. ಇನ್ನು ಸಂಘ ಕಟ್ಟಿಕೊಂಡಿದ್ದನ್ನು ಆಡಳಿತವರ್ಗ ಹೇಗೆ ಸಹಿಸಲು ಸಾಧ್ಯ. ಯಾರ್‍ಯಾರು ಯೂನಿಯನ್ ಮುಂಚೂಣಿಯಲ್ಲಿದ್ದಾರೋ ಅವರನ್ನೆಲ್ಲ ದೂರದ ಡೆಹ್ರಾಡೂನಿಗೆ ವರ್ಗಾಯಿಸಲಾಯ್ತು. ಎಲ್ಲಿಯ ನೆಲಮಂಗಲ ಎಲ್ಲಿಯ ಡೆಹ್ರಾಡೂನ್. ಧೈರ್ಯ ಮಾಡಿದ ಕೆಲವರು ಬಾಧೆ ಬಿದ್ದು ಡೆಹ್ರಾಡೂನಿಗೆ ಹೋದರೆ ಅಲ್ಲಿಯ ಹಿಮಾಲಯ ಕಂಪೆನಿಯವರು ನಮಗೂ ಬೆಂಗಳೂರಿನ ಫ್ಯಾಕ್ಟ್ರಿಗೂ ಸಂಬಂಧವೇ ಇಲ್ಲ ಎಂದುಬಿಟ್ಟರು!

ಇದು ಕಂಪೆನಿಯ ಕಾರ್ಮಿಕ ದ್ರೋಹಿ ನೀತಿಗೆ ಸಣ್ಣ ಸ್ಯಾಂಪಲ್ಲಷ್ಟೆ. ಬೇರೆಲ್ಲ ಕಂಪೆನಿಗಳಲ್ಲಿ ಶೇ.20ರಷ್ಟು ಬೋನಸ್ಸಾದರೆ ಇಲ್ಲಿ ಕೇವಲ ಎಂಟ್ನೂರವರೆ ಸಾವಿರ ಮಾತ್ರ. ಐನೂರು ಮಂದಿ ಕಾಯಂ ಕಾರ್ಮಿಕರ ಜೊತೆಗೇ 800 ಮಂದಿ ಗುತ್ತಿಗೆ ಕಾರ್ಮಿಕರಿದ್ದಾರೆ. ಇವರದು ನಿಜಕೂ ನಾಯಿಪಾಡು. ಕಂಪೆನಿ ಸ್ಟಾಫ್‌ಗಳಿಗೆ ಪ್ರತ್ಯೇಕ ಕ್ಯಾಂಟೀನು, ಲಕ್ಷಗಟ್ಟಲೆ ಸಂಬಳವಾದರೆ, ಫ್ಯಾಕ್ಟ್ರಿ ಕಾರ್ಮಿಕರಿಗೆಂದೇ ಗಲೀಜು ಕ್ಯಾಂಟೀನಿದೆ. ಕೆಲಸದ ಮಧ್ಯೆ ಮೂತ್ರವಿಸರ್ಜನೆಗೂ ಅವಕಾಶವಿಲ್ಲ. ಅಪಘಾತವಾದರೆ ಗಾಯಗೊಂಡವರನ್ನು ನಿರ್ದಯವಾಗಿ ಅವರ ಮನೆ ಬಾಗಿಲಲ್ಲಿ ಎಸೆದು ಬರುತ್ತಾರೆ. ನೆಟ್ಟಗೆ ಸಂಬಳವಿಲ್ಲ, ಕನಿಷ್ಠ ಗೌರವದಿಂದ ಮಾತನಾಡುವುದೂ ಇಲ್ಲ. ಏಕೆಂದರೆ ಉತ್ಪಾದನಾ ಘಟಕದ ಕಾರ್ಮಿಕರೆಂದರೇನೇ ಸ್ಥಳೀಯರು, ಅನಕ್ಷರಸ್ಥರು, ನ್ಯಾಯ ಕೇಳುವವರು, ಯೂನಿಯನ್ ಮಾಡುವವರೆಂಬ ಮತ್ಸರಕ್ಕೆ ಕಂಪೆನಿ ಬಿದ್ದಿದೆ. ಅದು ಧಣಿ ಮೀರಜ್ ಮನಾಲ್ ತನ್ನ ತಂದೆಯಿಂದ ಕಲಿತ ಪಾಠ.


ಯಾವುದೋ ಕಾಲಕ್ಕೆ ಮುಂಬಯಿಯಲ್ಲಿ ಭಾಷಾಂಧ ಬಾಳಾಠಾಕ್ರೆ, ಮರಾಠಿ ಕಾರ್ಮಿಕರ ಪರವಾಗೋ ಮರಾಠಿಗರಿಗೇ ಕೆಲಸ ಕೊಡಬೇಕೆಂದೋ ಹಾವಳಿಯಿಟ್ಟ ಸಿಟ್ಟಿಗೆ ಬೆಂಗಳೂರಿನ ಕನ್ನಡಿಗರಿಗೆ ಶಿಕ್ಷೆ ಕೊಟ್ಟು ಏನು ಪ್ರಯೋಜನ?

ಸಹಜವಾಗೇ ಕಾರ್ಮಿಕರ ಸಂಘ ಆಡಳಿತ ಮಂಡಳಿಯ ದೌರ್ಜನ್ಯದ ವಿರುದ್ಧ ಲೇಬರ್ ಕೋರ್ಟಿನ ಮೊರೆ ಹೊಕ್ಕಿದೆ. ಇದರಿಂದ ಮತ್ತಷ್ಟು ಕೆರಳಿದ ಆಡಳಿತ ಮಂಡಳಿಯ ಜೊತೆ ಕೈಜೋಡಿಸಿದ್ದು ಮುಂಗಾರು ಮಳೆ ಕೃಷ್ಣಪ್ಪ ಸಂಬಂಧಿ ಆಡಕಮಾರನಹಳ್ಳಿ ವೆಂಕಟೇಶ. ಮುಂಗಾರು ಮಳೆ ಕೃಷ್ಣಪ್ಪನ ಭೂಕಬಳಿಕೆ, ಗೂಂಡಾಗಿರಿಯ ಜೊತೆಜೊತೆ ಬೆಳೆದ ಆಡಕಮಾರನಹಳ್ಳಿ ವೆಂಕಟೇಶ ಕೂಡ ಹಿಮಾಲಯ

...ನ ಕೌಶಲನೆ. ಶುರುವಿನಲ್ಲಿ ಆರೆಸ್ಸೆಸ್ ನಿಯಂತ್ರಿತ ...ಎಸ್ ನೌಕರರ ಸಂಘ ಸ್ಥಾಪಿಸಿ ಮಾಲೀಕರ ಜೊತೆ ...ಗೇ ಕೈ ಜೋಡಿಸಿದ ಕಾರ್ಮಿಕ ನಾಯಕ ಆಲಂಪಲ್ಲಿ ...ರಾಮನ ವಿರುದ್ಧ ರೋಸತ್ತೇ ಕಮ್ಯೂನಿಸ್ಟ್ ಪಕ್ಷದ ...ಯು ನೇತೃತ್ವದ ಸಂಘ ಸ್ಥಾಪಿಸಿದ್ದರು. ಸಿಐಟಿಯು ...ರ್ಯಾದೂ ಮಾಲೀಕರ ಜೊತೆ ಕೈಜೋಡಿಸಲಿಲ್ಲ. ಆದಕ್ಕೆ ...ಕ ವರ್ಗ ಮಾಡಿದ ಮಸಲತ್ತೆಂದರೆ ನಿಷ್ಠ ಕಾರ್ಮಿಕ ...ದ ವಿರುದ್ಧ ತಮ್ಮದೇ ಮಾಲೀಕ ನಿಷ್ಠ ಸಂಘವೊಂದನ್ನು ... ಹಾಕುವುದು!

...ದಕ್ಕೆ ಬಳಕೆಯಾದವನೇ ಅಡಕಮಾರನಹಳ್ಳಿ ...ಟೇಶ. ಜೊತೆಗೆ ಮುಂಗಾರು ಮಳೆ ಕೃಷ್ಣಪ್ಪನ ಕುಮ್ಮಕ್ಕು ... ಸಿಐಟಿಯು ಪ್ರೇರಿತ ದೇವರಾಜ್, ಸಿದ್ಧರಾಜು ...ತ್ವದ ಯೂನಿಯನ್ನಿಗೆ ಪರ್ಯಾಯವಾಗಿ ಡೆಮ್ಮಿ ...ನಿಯನ್ ಒಂದಕ್ಕೆ ತಾನೇ ಅಧ್ಯಕ್ಷನೆಂದು ಸ್ವಯಂ ...ಷಿಸಿಕೊಂಡ. ಇದು ಮ್ಯಾನೇಜ್‌ಮೆಂಟಿನ ಪಿತೂರಿಯ ...ರೆಗೇ ಸ್ಥಾಪಿಸಲ್ಪಟ್ಟ ಯೂನಿಯನ್ನಾದ್ದರಿಂದ ದುಡ್ಡು ... ಕಾಣಿಕೆಗಳಾವುದಕ್ಕೂ ಕೊರತೆಯಿರಲಿಲ್ಲ. ಆದರೆ ...ಟೇಶ್ ಈ ಮಟ್ಟಕ್ಕಿಳಿಯುತ್ತಾನೆಂಬ ನಿರೀಕ್ಷೆ ಅಲ್ಲಿನ ...ರ್ಮಿಕರಿಗಿರಲಿಲ್ಲ. ಮೊನ್ನೆ ರಮೇಶ್ ಮೇಲೆ ಪೊಲೀಸ್ ...ರ್ಜನ್ಯ ನಡೆಯುವುದಕ್ಕೂ 20 ದಿನದ ಹಿಂದೆ ಕಾರ್ಮಿಕ ...ಖಂಡರಾದ ಸಿದ್ಧರಾಜು ಮತ್ತು ದೇವರಾಜ್ ...ಗಾಗುತ್ತಿರುವ ಕಿರುಕುಳದ ವಿರುದ್ಧ ಹೆಚ್.ಆರ್. ...ನೇಜರ್ ಹನೀಫನನ್ನು ಕಂಡು ಪ್ರಶ್ನಿಸಿದ್ದಾರೆ.

...ಬಹುಶಃ ಇದನ್ನೇ ಹನೀಫ್ ಕಾಯುತ್ತಿದ್ದನೇನೋ. ...ಖಂಡರಿಬ್ಬರನ್ನೂ ಬೇಕಂತಲೇ ಕಾಯಿಸಿ ಉಪಾಯವಾಗಿ ...ಕಟೇಶನನ್ನು ಛೂಬಿಟ್ಟಿದ್ದಾನೆ. ಇನ್ನೇನು ಮ್ಯಾನೇಜರ್ ...ಫ್ ಜೊತೆ ಚರ್ಚಿಸಿ ಆತನ ಛೇಂಬರ್‌ನಿಂದ ...ರಬರಬೇಕೆನ್ನುವಷ್ಟರಲ್ಲಿ ಹೊರಗೆ ಹೊಂಚು ಹಾಕುತ್ತಿದ್ದ ...ಮಾರು 30 ಮಂದಿ ರೌಡಿಗಳು ದೊಣ್ಣೆ, ರಾಡು, ...ಸ್ಟಿಕ್‌ಗಳನ್ನು ಹಿಡಿದು ಕಾರ್ಮಿಕ ಮುಖಂಡರ ಮೇಲೆ



ಪೊಲೀಸ್ ಕ್ರೌರ್ಯಕ್ಕೆ ಬಲಿಯಾದ ರಮೇಶ್

...ಲ್ಲೆ ನಡೆಸಿದ್ದಾರೆ. ಇದರ ವಿರುದ್ಧ ಮಾದನಾಯಕನಹಳ್ಳಿ ...ಲೀಸ್ ಠಾಣೆಗೆ ದೂರು ಕೊಟ್ಟರೆ ಎಸ್.ಐ. ನಾಗೇಶ್ ...ಯಿಸಿ ಎಫ್‌ಐಆರ್ ಹಾಕುವುದಕ್ಕೇ ಎರಡು ದಿನ ...ಯಿಸಿದ್ದ. ಆ ಹೊತ್ತಿಗೆ ಅಡಕಮಾರನಹಳ್ಳಿ ವೆಂಕಟೇಶ ...ಮೀನು ಪಡೆದಾಗಿತ್ತು. ಪೊಲೀಸ್ ಕಳ್ಳಾಟದ ವಿರುದ್ಧ ...ನೂರು ಮಂದಿ ಕಾರ್ಮಿಕರು ಮಾದನಾಯಕನಹಳ್ಳಿ ...ಲೀಸ್ ಠಾಣೆಗೆ ಮುತ್ತಿಗೆ ಹಾಕಿದರೆ ಪೊಲೀಸರು ...ರ್ಮಿಕರನ್ನೇ ದಬಾಯಿಸಿ ಓಡಿಸಿಬಿಟ್ಟರು.

... ಹಿಮಾಲಯ ಡ್ರಗ್ಸ್ ಮಾಲಿಕರ ದ್ವೇಷ ಇಷ್ಟಕ್ಕೆ ನಿಂತಿದ್ದರೆ ...ನ್ನೆ ಆಗಸ್ಟ್ 27ರಂದು ರಮೇಶ್ ಮೇಲೆ ದಾಳಿಯಾಗು ...ಲಿಲ್ಲ. ಕಾರ್ಮಿಕ ಮುಖಂಡ ಸಿದ್ಧರಾಜು ಜೊತೆ ...ತನಾಡಿದನೆಂಬ ಒಂದೇ ಕಾರಣಕ್ಕೆ ಟೈಂ ಆಫೀಸರ್ ...ಜ್‌ಕುಮಾರ್ ಮತ್ತು ಹೆಚ್.ಆರ್.ಹನೀಫ್ ಎಳೆದೊಯ್ದು ...ನಾಮಾಪ ಬಯ್ದಿದ್ದಾರೆ. ಇದರ ವಿರುದ್ಧ ಪೊಲೀಸರಿಗೆ ...ಶ್ ದೂರು ಕೊಟ್ಟರೆ ಆ ಬಗ್ಗೆ ಚಕಾರ ವೆತ್ತದ ...ಲೀಸರು ಆದರ ಮಾರನೇ ದಿನ ಮ್ಯಾನೇಜರ್ ...ಫ್‌ನಿಂದಲೇ ಖೊಟ್ಟಿ ದೂರು ಪಡೆದುಕೊಂಡು ...ಶನನ್ನು ಠಾಣೆಗೆ ಕರೆಸಿದ್ದೇ ಲಾಕಪ್ಪಿಗೆ ಹಾಕಿ ಹಿಂಸಿಸಿದ್ದಾರೆ. ...ಡಿದಿದ್ದಷ್ಟೇ ಅಲ್ಲ ಬೇಡದ ಕೇಸುಗಳನ್ನೆಲ್ಲ ಹಾಕಿ ...ತ್ರೋರಾತ್ರಿ ನ್ಯಾಯಾಧೀಶರ ಮನೆಗೊಯ್ದು ಜೈಲಿಗೂ ...ದ್ದಾರೆ. ಅಷ್ಟಕ್ಕೂ, ರಮೇಶ್ ಮಾಡಿದ ತಪ್ಪೆಂದರೆ ...ನೇಜರ್ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದು!

... ವರ್ಷಕ್ಕೆ ಸಾವಿರ ಕೋಟಿಯ ವಹಿವಾಟುಳ್ಳ ...ದ್ಯಂತ ಹೆಸರುವಾಸಿಯಾದ ಹಿಮಾಲಯ ಡ್ರಗ್ಸ್ ...ಯ ಕ್ರೌರ್ಯ, ದೌರ್ಜನ್ಯ ಮತ್ತು ದುಡ್ಡಿನ ಧಾಡಸಿ ...ಯಾದ ಕಾರ್ಮಿಕರ ಕಣ್ಣೀರನ್ನು ಯಾವ ಪತ್ರಿಕೆ, ...ಗಳೂ ಸುದ್ದಿ ಮಾಡುವುದಿಲ್ಲ. ಏಕೆಂದರೆ ವರ್ಷಂಪ್ರತಿ ...ಜಾಹೀರಾತಿನ ಮುಂದೆ ಬಡಪಾಯಿ ಕಾರ್ಮಿಕರ ... ಯಾವ ಲೆಕ್ಕ? ಒಂದೆಡೆ ರೌಡಿಗಳನ್ನು, ಮತ್ತೊಂದೆಡೆ ...ಸರನ್ನು ತನ್ನ ಕಾರ್ಮಿಕರ ಮೇಲೆ ಛೂಬಿಟ್ಟು ...ಸುವ ಹಿಮಾಲಯ ಡ್ರಗ್ ಕಂಪೆನಿಯ 'ಕೀರ್ತಿಮದ' ... ಕೋಗಲಿ, ಸರ್ಕಾರವೂ ಕುರುಡಾದರೆ ಚಿಕಿತ್ಸೆ ನೀಡು ...?

● ರಾ.ಸೋಮನಾಥ್

ರಾಜ್ಯಾಧ್ಯಕ್ಷ ಸ್ಥಾನ ಮುಂದುವರೆದ ಕಟಿಪಿಟಿ

'ಯಡಿಯೂರಪ್ಪ, ಸದಾನಂದಗೌಡ ಮತ್ತು ಅನಂತ್‌ಕುಮಾರ್ – ಈ ತ್ರಿಮೂರ್ತಿಗಳಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷ ಸ್ಥಾನವನ್ನು ಅಲಂಕರಿಸಲು ಯಾರು ಸೂಕ್ತರು?' ಎಂದು ಬಿಜೆಪಿಯ ದೆಹಲಿ ನಾಯಕರು ಚಿಂತಿಸುತ್ತಲೇ ಇದ್ದಾರೆ. ಆದರೆ ಒಂದಂತೂ ನಿಜ. ಹಾಲಿ ಅಧ್ಯಕ್ಷರಾದ ಈಶ್ವರಪ್ಪನವರು ಉಪಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸಿ ಸುಮಾರು 50 ದಿನಗಳೇ ಕಳೆದರೂ ಸಹ ಅವರ ಸ್ಥಾನಕ್ಕೆ ಮತ್ತೊಬ್ಬ ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡಲು ಬಿಜೆಪಿ ಹೈಕಮಾಂಡ್‌ಗೆ ಇನ್ನೂ ಸಾಧ್ಯವಾಗಿಲ್ಲ ಎಂಬುದು ಅವರ ಅಸಹಾಯಕತೆಯನ್ನು ಪ್ರದರ್ಶಿಸುತ್ತಿದೆ.

ಒಂದೆಡೆ ಜಗದೀಶ್ ಶೆಟ್ಟರ್ ಅವರ ಸಂಪುಟ ಪುನರ್ರಚನೆ ನೆನೆಗುದಿಗೆ ಬಿದ್ದಿದೆ. ಇನ್ನೊಂದೆಡೆ ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಕೂಡ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಈ ಹುದ್ದೆಯ ಮೇಲೆ ರಾಜ್ಯ ಬಿಜೆಪಿಯ ಮೂರು ಆಧಾರಸ್ತಂಭಗಳಾದ ಯಡ್ಡಿ, ಅನಂತ್‌ಕುಮಾರ್ ಮತ್ತು ಸದಾನಂದ ಗೌಡ ಕಣ್ಣಿಟ್ಟಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಮೂವರಲ್ಲಿ ಯಾರೇ ಒಬ್ಬರನ್ನು ಅಧ್ಯಕ್ಷ ಮಾಡಿದರೆ ಸಹಜವಾಗಿಯೇ ಉಳಿದೆರಡು ಬಣಗಳ ನಾಯಕರ ಹಿಂಬಾಲಕರು ಅಸಮಾಧಾನಗೊಳ್ಳುತ್ತಾರೆ ಎಂಬ ಒಂದೇ ಒಂದು ಕಾರಣಕ್ಕಾಗಿ ಬಿಜೆಪಿಯ ದೆಹಲಿ ನಾಯಕರು ರಾಜ್ಯಾಧ್ಯಕ್ಷ ಸ್ಥಾನಕ್ಕೆ ಈಶ್ವರಪ್ಪನವರ ಉತ್ತರಾಧಿಕಾರಿ ಆಯ್ಕೆಯನ್ನು ವಿಳಂಬ ಮಾಡುತ್ತಿದ್ದಾರೆ.


ಎರಡು-ಮೂರು ದಿನಗಳ ಹಿಂದೆ ಯಡ್ಡಿ ದಿಢೀರನೆ ದೆಹಲಿಗೆ ದೌಡಾಯಿಸಿ ಅಲ್ಲೇ ಠಿಕಾಣಿ ಹೂಡಿರುವುದು ಕೂಡ ಇದೇ ರಾಜ್ಯಾಧ್ಯಕ್ಷ ಸ್ಥಾನವನ್ನು ಪಡೆಯುವ ಉದ್ದೇಶಕ್ಕಾಗಿ ಎಂಬುದು ಗುಟ್ಟಾಗಿ ಉಳಿದಿಲ್ಲ. ಇತ್ತೀಚೆಗೆ ಎನ್.ಡಿ.ಟಿ.ವಿ ಚಾನೆಲ್ ನಡೆಸಿದ ಒಂದು ಸಮೀಕ್ಷೆಯೇ ಯಡ್ಡಿಗೆ ನೂರು ಆನೆಯ ಬಲವನ್ನು ತಂದುಕೊಟ್ಟಂತಾಗಿದೆ. ಯಡಿಯೂರಪ್ಪನವರನ್ನು ಹೊರತುಪಡಿಸಿದರೆ ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬುದು ಎನ್.ಡಿ.ಟಿ.ವಿಯ ಸಮೀಕ್ಷೆಯ ಸಾರಾಂಶ. ಈಗ ಅದನ್ನೇ ಮುಂದಿಟ್ಟುಕೊಂಡು ಯಡ್ಡಿ ದೆಹಲಿ ನಾಯಕರಲ್ಲಿ ತನ್ನ ವಾದವನ್ನು ಮಂಡಿಸುತ್ತ 'ನನಗೆ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡಿ' ಎಂದು ಒತ್ತಡ ಹೇರುತ್ತಿದ್ದಾರೆ.


ಆದರೆ ಯಾವುದೇ ಕಾರಣಕ್ಕೂ ಯಡ್ಡಿಗೆ ಮತ್ತೆ ಪಕ್ಷದಲ್ಲಿ ಪ್ರಮುಖ ಹುದ್ದೆಯನ್ನು ನೀಡಬಾರದು ಎಂದು ದೆಹಲಿ ಬಿಜೆಪಿ ನಾಯಕರು ಬಹಳ ಹಿಂದೆಯೇ ಒಂದು ತೀರ್ಮಾನವನ್ನು ಕೈಗೆತ್ತಿಕೊಂಡಿದ್ದಾರೆ. ಹಾಗಂತ ಯಡ್ಡಿಯನ್ನು ನಿರ್ಲಕ್ಷಿಸಿ ತನಗೆ ಇಷ್ಟಬಂದ ಬೇರೆ ನಾಯಕನನ್ನು ರಾಜ್ಯಾಧ್ಯಕ್ಷ ಪಟ್ಟದಲ್ಲಿ ಕುಳ್ಳಿರಿಸಲು ಕೂಡ ದೆಹಲಿ ನಾಯಕರಿಗೆ ಧೈರ್ಯವಿಲ್ಲ. ಸದ್ಯಕ್ಕೆ ಸ್ಪರ್ಧೆಯಲ್ಲಿರುವ ಈ ತ್ರಿಮೂರ್ತಿಗಳ ನಡುವೆ ಜನಬಲ ಮತ್ತು ಧನಬಲ ಇರುವುದು ಯಡ್ಡಿಗೆ ಮಾತ್ರ. ಆದರೆ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿರುವ ಸದಾನಂದ ಗೌಡರ ಆತ್ಮವನ್ನು ತೃಪ್ತಿ ಮಾಡಲು ಅವರಿಗೂ ಏನಾದರೊಂದು ಪ್ರಮುಖವಾದ ಹುದ್ದೆಯನ್ನು ನೀಡುವ ನೈತಿಕ ಹೊಣೆ ದೆಹಲಿ ನಾಯಕರ ಮೇಲಿದೆ. ಈ ಕಾರಣಕ್ಕಾಗಿಯೇ ಈಗ ಅಧ್ಯಕ್ಷ ಸ್ಥಾನದ ವಿಚಾರ ದಿನದಿಂದ ದಿನಕ್ಕೆ ವಿಷಮಗೊಳ್ಳುತ್ತಿದೆ.


ಒಂದು ವೇಳೆ ಯಡ್ಡಿಯ ಬಲವನ್ನೇ ಗಣನೆಗೆ ತೆಗೆದುಕೊಂಡು ಅವರನ್ನೇ ರಾಜ್ಯಾಧ್ಯಕ್ಷರನ್ನಾಗಿ ಮಾಡಿದರೆ ಖಂಡಿತವಾಗಿ ಭಿನ್ನಮತೀಯರಾದ ಬಾಲಚಂದ್ರ ಜಾರಕಿಹೊಳಿ ಮತ್ತವರ ಗುಂಪು ಬಂಡಾಯವೇಳುವ ಸಾಧ್ಯತೆಯಿದೆ. ಅಷ್ಟೇ ಅಲ್ಲ, ಯಡ್ಡಿಯನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಕೇಂದ್ರ ಬಿಜೆಪಿ ಹೈಕಮಾಂಡ್ ದುರ್ಬಲವಾಗಿದೆ ಮತ್ತು ಒಬ್ಬ ಪ್ರಾದೇಶಿಕ ನಾಯಕನ ಒತ್ತಡಕ್ಕೆ ಮಣಿದು ಕಾರ್ಯವೆಸಗುತ್ತಿದೆ ಎಂಬ ಸಂದೇಶ ರಾಷ್ಟ್ರಾದ್ಯಂತ ಹೋಗುತ್ತದೆ ಎಂಬ ಭಯವೂ ಚಿಡ್ಡಿಗಳ ಹೈಕಮಾಂಡಿಗಿದೆ.


ಹಾಗಂತ ಯಡ್ಡಿಯ ಬದಲಿಗೆ ಅವರು ಸೂಚಿಸಿದ ಬೇರೆ ಯಾರಾದರೂ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಮಾಡೋಣವೆಂದರೆ ಪ್ರತಿ ಬಾರಿಯೂ ಯಡ್ಡಿ ಶೋಭಾ ಕರಂದ್ಲಾಜೆ ಹೆಸರನ್ನು ಬಿಟ್ಟು ಬೇರೆ ಯಾರ ಹೆಸರನ್ನೂ ಹೇಳುತ್ತಿಲ್ಲವಂತೆ. ಇದು ಕೂಡ ಒಂದು ರೀತಿಯಲ್ಲಿ ಹೈಕಮಾಂಡ್ ಪಾಲಿಗೆ ನುಂಗಲಾರದ ತುತ್ತಾಗಿದೆ. ಶೋಭ ಕರಂದ್ಲಾಜೆ ರಾಜ್ಯಾಧ್ಯಕ್ಷ ಸ್ಥಾನವನ್ನು ವಹಿಸುವುದರ ಬಗ್ಗೆ ಯಡ್ಡಿಯ ಅನೇಕ ಹಿಂಬಾಲಕ ಶಾಸಕರಲ್ಲಿ ಅತೃಪ್ತಿ ಇದ್ದರೂ ಕೂಡ ಕೊನೆಕ್ಷಣದಲ್ಲಿ ಅವರನ್ನೆಲ್ಲ ಒಪ್ಪಿಸುವ ಧೈರ್ಯ ಯಡ್ಡಿಗಿದೆ ಎಂಬುದನ್ನು ಇಲ್ಲಿ ತಳ್ಳಿಹಾಕುವಂತಿಲ್ಲ.


ದೆಹಲಿ ನಾಯಕರು ಧೈರ್ಯ ಮಾಡಿ ಒಂದು ವೇಳೆ











ಯಡ್ಡಿಯ ಬದಲಿಗೆ ಸದಾನಂದ ಗೌಡರನ್ನು ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಕುಳ್ಳಿರಿಸಿದರೆ ಆ ಕ್ಷಣದಿಂದಲೇ ಯಡ್ಡಿ ಬಣ ಸಂಪೂರ್ಣವಾಗಿ ಬಂಡಾಯವೇಳುತ್ತದೆ. ಯಾಕೆಂದರೆ ಈಗಾಗಲೇ ಯಾವುದೇ ಕಾರಣಕ್ಕೂ ಸದಾನಂದ ಗೌಡರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಲೇಬಾರದು ಎಂದು ಯಡ್ಡಿ ಬಣ ಹೈಕಮಾಂಡ್‌ಗೆ ಷರತ್ತು ಹಾಕಿದೆ ಎನ್ನಲಾಗಿದೆ.

ಯಡಿಯೂರಪ್ಪನವರ ಮತ್ತೊಬ್ಬ ಆಜನ್ಮ ವೈರಿ ಅನಂತ್‌ಕುಮಾರ್ ಕೂಡ ಇದೇ ಸಂದರ್ಭ ನೋಡಿ ಆಡಳಿತ ಪಕ್ಷದ ಚುಕ್ಕಾಣಿಯನ್ನು ಹಿಡಿಯಲು ತೆರೆಮರೆಯಲ್ಲಿ ಪ್ರಯತ್ನ ನಡೆಸುತ್ತಲೇ ಇದ್ದಾರೆ. ದೆಹಲಿಯಲ್ಲಿರುವ ಬಹುತೇಕ ಎಲ್ಲ ನಾಯಕರ ಜೊತೆಗೆ ನಿಕಟ ಸಂಪರ್ಕವನ್ನು ಹೊಂದಿರುವ ಅನಂತ್‌ಕುಮಾರ್‌ಗೆ ಈ ವಿಷಯದಲ್ಲಿ ದೆಹಲಿ ದೊರೆಗಳ ಮನಸ್ಸನ್ನು ಒಲೈಸುವುದು ಅಷ್ಟೇನು ಕಷ್ಟದ ಕೆಲಸವಲ್ಲ. ಆದರೆ ರಾಜ್ಯದಲ್ಲಿರುವ ಹಲವಾರು ಗುಂಪುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದರಿಂದ ಮತ್ತು ಮುಖ್ಯವಾಗಿ ಯಡಿಯೂರಪ್ಪ ಬಣ ಅನಂತ್‌ಕುಮಾರ್ ಅವರನ್ನು ಹಿಂದಿನಿಂದಲೂ ವಿರೋಧಿಸುತ್ತಾ ಬಂದಿರುವುದರಿಂದ ಅನಂತ್‌ಕುಮಾರ್‌ಗೆ ರಾಜ್ಯಾಧ್ಯಕ್ಷ ಸ್ಥಾನ ಒಲಿಯಲಾರದು.

ಹೀಗಾಗಿ ಈ ಮೂವರನ್ನು ಹೊರತುಪಡಿಸಿ ಆರೆಸ್ಸೆಸ್ ಮೂಲದ ಯಾರಾದರೊಬ್ಬ ಒಳ್ಳೆಯ ಕಾರ್ಯಕರ್ತರನ್ನು ರಾಜ್ಯದ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಹೈಕಮಾಂಡ್ ಚಿಂತಿಸಿದೆಯಂತೆ. ಈ ಹಿನ್ನೆಲೆಯಲ್ಲಿ ಮಂಗಳೂರಿನ ಲೋಕಸಭಾ ಸದಸ್ಯರಾದ ನಳೀನ್‌ಕುಮಾರ್ ಕಟೀಲ್ ಮತ್ತು ಧಾರವಾಡ ಲೋಕಸಭಾ ಸದಸ್ಯರಾದ ಪ್ರಹ್ಲಾದ್ ಜೋಶಿಯವರ ಹೆಸರು ಕೇಳಿಬಂದಿವೆ. ಇವರಿಬ್ಬರೂ ಮೂಲತಃ ಆರೆಸ್ಸೆಸ್ಸಿನ ಕಾರ್ಯಕರ್ತರಾಗಿರುವುದು ಮತ್ತು ಇವರು ಯಾವುದೇ ಬಣಕ್ಕೆ ಸೇರದವರಾಗಿರುವುದರಿಂದ ಇವರನ್ನು ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೆ ಯಾವುದೇ ಕಂಟಕಗಳಿರಲಾರದು ಎಂಬುದು ದೆಹಲಿ ನಾಯಕರ ಲೆಕ್ಕಾಚಾರ.

ಆದರೆ ಇವರಿಬ್ಬರ ಹೆಸರು ಕೇಳಿಬರುತ್ತಿದ್ದಂತೆ ಮತ್ತೊಮ್ಮೆ ಬಿಜೆಪಿಯಲ್ಲಿ ಒಂದು ರೀತಿಯ ಸಂಚಲನ ಉಂಟಾಗಿ ಪಕ್ಷ ಎರಡು ಹೋಳಾಗುವಷ್ಟು ಚಟುಪಟಿಕೆಗಳು ನಡೆಯಲಾರಂಭಿಸಿವೆ. ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಪುಣ್ಯಕೋಟಿಯಂತಿರುವ ನಳೀನ್‌ಕುಮಾರ್ ಕಟೀಲ್ ರಾಜ್ಯಾಧ್ಯಕ್ಷರಾದರೆ ಅವರು ಬಿಜೆಪಿಯ ಮೂವರು ಹಿರಿಯ ನಾಯಕರ ರಬ್ಬರ್ ಸ್ಟಾಂಪ್ ತರಹ ಆಗುತ್ತಾರೆ. ಹೀಗಾಗಿ ಅವರ ಹೆಸರಿನಲ್ಲಿ ಮತ್ತೆ ಇದೇ ತ್ರಿಮೂರ್ತಿಗಳು ರಾಜ್ಯಭಾರ ನಡೆಸುತ್ತಾರೆ ಎಂಬ ಅಂಜಿಕೆ ಶಾಸಕರನ್ನು ಕಾಡತೊಡಗಿದೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಅಷ್ಟೊಂದು ಜನಪ್ರಿಯವಾಗಿಲ್ಲದ ನಳೀನ್‌ಕುಮಾರ್ ಕಟೀಲ್‌ರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಿದರೆ ಮುಂದೆ ಚುನಾವಣೆಯಲ್ಲಿ ಬಿಜೆಪಿ ಹೇಗೆ ತಾನೇ ಗೆಲ್ಲಲು ಸಾಧ್ಯ ಎಂದು ಯಡ್ಡಿ ಕಡೆಯ ಶಾಸಕರು ಈಗಾಗಲೇ ಅಪಸ್ವರ ಎತ್ತಿದ್ದಾರೆ. ಕಟೀಲ್‌ಗೆ ಯಾವುದೇ ಜಾತಿ ಬೆಂಬಲವಿಲ್ಲ. ಅಷ್ಟೇ ಅಲ್ಲ, ಚುನಾವಣೆಗೆ ತನು-ಮನ-ಧನವನ್ನು ಒಟ್ಟು ಸೇರಿಸುವಂತಹ ಶಕ್ತಿಯೂ ಆತನಿಗಿಲ್ಲ ಎಂಬುದು ಕೂಡ ಯಡ್ಡಿ ಬಣದ ಆರೋಪವಾಗಿದೆ.

ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಳೀನ್‌ಕುಮಾರ್ ಕಟೀಲ್ ಅವರ ಹೆಸರನ್ನು ಸೂಚಿಸಿದ್ದು ಬಿಜೆಪಿ ಮತ್ತು ಆರೆಸ್ಸೆಸ್‌ನ ಮುಖ್ಯ ಸಂಚಾಲಕರಾದ ಸಂತೋಷ್ ಮತ್ತು ಪ್ರಭಾಕರ್ ಭಟ್ ಎಂದು ಯಡಿಯೂರಪ್ಪನವರಿಗೆ ಗೊತ್ತಾಗಿದ್ದೇ ತಡ, ಅವರು ಕಟೀಲ್ ಹೆಸರನ್ನು ವಿರೋಧಿಸುವಂತೆ ತನ್ನ ಹಿಂಬಾಲಕರಿಗೆ ಸೂಚನೆ ನೀಡಿದರು. ಅಂದರೆ ಕಟೀಲ್‌ರವರನ್ನು ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಕುಳ್ಳಿರಿಸಿ ಹಿಂದಿನಿಂದ ರಾಜ್ಯಭಾರ ಮಾಡುವ ಸಂತೋಷ್ ಮತ್ತು ಪ್ರಭಾಕರ್ ಭಟ್ ಅವರ ತಂತ್ರಗಾರಿಕೆಯಿಂದ ತನಗೆ ತೊಂದರೆಯಾಗುತ್ತದೆ ಎಂಬ ರಾಜಕೀಯ ಅರಿವು ಮತ್ತು ಪ್ರಜ್ಞೆಯೇ ಯಡ್ಡಿಯ ಈ ವಿರೋಧಕ್ಕೆ ಮುಖ್ಯ ಕಾರಣ.


ಇನ್ನೇನು ಕೆಲವೇ ತಿಂಗಳುಗಳಲ್ಲಿ ಚುನಾವಣೆ ಎದುರಾಗುವ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ರಾಜ್ಯಾಧ್ಯಕ್ಷರು ತಮ್ಮ ಬಣಕ್ಕೆ ಸೇರಿದವರೇ ಆಗಿರಬೇಕೆಂದು ಬಹುತೇಕ ಎಲ್ಲರೂ ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ಪಕ್ಷ ಮತ್ತು ಸರ್ಕಾರದ ಮೇಲೆ ಗಟ್ಟಿಯಾದ ಹಿಡಿತವನ್ನು ಸಾಧಿಸಿರುವ ಆರೆಸ್ಸೆಸ್‌ನ ಸಂತೋಷ್ ಮತ್ತು ಪ್ರಭಾಕರ್ ಭಟ್ ಅವರುಗಳ ಅಭ್ಯರ್ಥಿ ಯಾವ ಕಾರಣಕ್ಕೂ ರಾಜ್ಯಾಧ್ಯಕ್ಷ ಸ್ಥಾನದಲ್ಲಿರಬಾರದು ಎಂದು ಯಡ್ಡಿ ಒಂದು ತೀರ್ಮಾನಕ್ಕೆ ಬಂದಂತಾಗಿದೆ.

ಇದೇ ಸಂದರ್ಭದಲ್ಲಿ ಧಾರವಾಡದ ಲೋಕಸಭಾ ಸಂಸದ ಪ್ರಹ್ಲಾದ್ ಜೋಷಿ ಹೆಸರು ಕೇಳಿ ಬಂದಾಕ್ಷಣ ಇತ್ತ ಮಲೆನಾಡು ಕಡೆಯ ಶಾಸಕರೆಲ್ಲ ಅದನ್ನು ವಿರೋಧಿಸಲು ಆರಂಭಿಸಿದ್ದಾರೆ. 'ಈಗಾಗಲೇ ಮುಖ್ಯಮಂತ್ರಿ ಸ್ಥಾನವನ್ನು ಹುಬ್ಬಳ್ಳಿ ಕಡೆಯವರಿಗೆ ನೀಡಾಗಿದೆ. ಮತ್ತೆ ರಾಜ್ಯಾಧ್ಯಕ್ಷ ಸ್ಥಾನವನ್ನೂ ಅದೇ ಪ್ರದೇಶದ ಅಭ್ಯರ್ಥಿಗೆ ನೀಡಿದರೆ ಅದು ಸಮತೋಲನವಾಗಲಾರದು' ಎಂಬುದು ಮಲೆನಾಡು ಕಡೆಯ ಶಾಸಕರ ಅಪಸ್ವರ. ಅಂದರೆ, ಸದಾನಂದ ಗೌಡರ ಬಣ ಪ್ರಹ್ಲಾದ್ ಜೋಷಿಯ ನೇಮಕ ತಮಗಿಷ್ಟವಿಲ್ಲ ಎಂದು ಹೈಕಮಾಂಡ್‌ಗೆ ಹೇಳಿಬಿಟ್ಟಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಆಯ್ಕೆಯ ವಿಚಾರದಲ್ಲಿ ಈಗ ಮಲೆನಾಡು ಮತ್ತು ಉತ್ತರ ಕರ್ನಾಟಕದ ಬಿಜೆಪಿ ಶಾಸಕರ ನಡುವೆ ತೀವ್ರ ಪೈಪೋಟಿ ನಡೆಯುತ್ತಿರುವುದು ಮಾತ್ರವಲ್ಲ, ಒಂದು ರೀತಿಯಲ್ಲಿ ಬಿಜೆಪಿ ಇದೇ ಕಾರಣಕ್ಕಾಗಿ ಒಡೆದ ಮನೆಯಂತೆ ಕಾಣಿಸುತ್ತಿದೆ. ಮಲೆನಾಡು ಕಡೆಯ ಅಭ್ಯರ್ಥಿಯನ್ನು ಉತ್ತರ ಕರ್ನಾಟಕದವರು ಒಪ್ಪುವುದಿಲ್ಲ. ಹಾಗೆಯೇ ಉತ್ತರ ಕರ್ನಾಟಕದ ಕಡೆಯ ಅಭ್ಯರ್ಥಿಯನ್ನು ಮಲೆನಾಡು ಕಡೆಯ ಶಾಸಕರು ಒಪ್ಪುವುದಿಲ್ಲ ಎಂಬ ಕಾರಣಕ್ಕಾಗಿ ರಾಜ್ಯಾಧ್ಯಕ್ಷ ಆಯ್ಕೆಯ ವಿಚಾರ ನುಂಗಲಾರದ ತುತ್ತಾಗಿ ಬಿಜೆಪಿ ದೆಹಲಿ ನಾಯಕರನ್ನು ಕಾಡುತ್ತಿದೆ. ಅಂದರೆ ಇತ್ತ ಅನಂತ್‌ಕುಮಾರ್, ಯಡ್ಡಿ ಮತ್ತು ಸದಾನಂದ ಗೌಡರ ನಡುವೆ ಆಯ್ಕೆ ಮಾಡಲಾಗದ ಹೈಕಮಾಂಡ್ ಇತ್ತ ಸಮಸ್ತ ಕರ್ನಾಟಕವನ್ನು ಪ್ರತಿನಿಧಿಸುವ ಮತ್ತೊಬ್ಬ ಅಭ್ಯರ್ಥಿಯನ್ನೂ ಆಯ್ಕೆ ಮಾಡಲಾಗದ ಸಂಕಷ್ಟದಲ್ಲಿದೆ.

● ತೇಗೈ

ಗೋಕರ್ಣ ದೇಗುಲ ದೋಚಿದ್ದು ರಾಘವನ ಬಂಟರಾ?



ಗೋಕರ್ಣ ದೇವಾಲಯದಲ್ಲಿ ಕೋಟ್ಯಂತರ ಕಾಣಿಕೆ ತುಂಬಿಕೊಂಡಿರುವ ಹುಂಡಿಗಳಿಗೇ ಕನ್ನ ಬಿದ್ದಿದೆ! ಬಿಜೆಪಿ ಸರ್ಕಾರದ "ಆಸ್ಥಾನ ಸ್ವಾಮೀಜಿ" ರಾಘವೇಶ್ವರ ಭಾರತಿ ಯಾನೆ ರಗಳೆ ರಾಘವನ ಪಾರುಪತ್ಯಕ್ಕೆ ಒಳಪಟ್ಟಿರುವ ಈ ಮಹಾಬಲೇಶ್ವರ ದೇವಾಲಯದ ಒಂದಲ್ಲ, ಎರಡೆರಡು ಹುಂಡಿಗಳನ್ನು ಕಳ್ಳರು ಆರಾಮಾಗಿ ಕುಂತು ದೋಚಿದ್ದಾರೆ!! ಕ್ರಿ.ಶ. 4 ನೇ ಶತಮಾನದ ಈ ದೇವಾಲಯದಲ್ಲಿ ಹಿಂದೆಂದೂ ಇಂಥದೊಂದು ಕಳ್ಳತನ ನಡೆದಿರಲಿಲ್ಲ, ಹಾಗಾಗಿ ತಲೆಗೊಂದ ರಂತೆ ಊಹಾಪೋಹಗಳು ಎದ್ದಿವೆ. ಆದರೆ ಎಲ್ಲಿಂದೆಲ್ಲಿಗೆ ಚರ್ಚೆ ಮಾಡಿದರೂ, ಯಾವ ಆ್ಯಂಗಲ್‌ನಿಂದ ನೋಡಿದರೂ ರಾಘವ ದೇವಸ್ಥಾನದ ಒಳಗೆ ಬಿಟ್ಟುಕೊಂಡಿರುವ ಒಂದು ಪಂಚೆ-ಒಂದು ಜನಿವಾರದ ಅರೆಬೆತ್ತಲೆ ಮಾಣಿಗಳ ದಂಡಿನತ್ತಲೇ ಅನುಮಾನ ಹರಿಯುತ್ತದೆ....

ಆದ್ಯಾವ ಗಳಿಗೆಯಲ್ಲಿ ಪುಣ್ಯಾಪೇಕ್ಷಿ ಪಾಪಿಗಳ ಶ್ರದ್ಧಾ





ಮುರಿದಿರುವ ಕಬ್ಬಿಣದ ರಾಡುಗಳು...



ಕಳ್ಳರು ಬಿಟ್ಟುಹೋದ ಚಿಲ್ಲರೆ ಕಾಸು....

ಕೇಂದ್ರವಾದ ಗೋಕರ್ಣ ದೇವಾಲಯವನ್ನು ಬ್ರಾಹ್ಮಣರ ಪ್ರಳಯಾಂತಕ ಪೀಠಾಧಿಪತಿ ರಾಘವ ತನ್ನ ಧಾರ್ಮಿಕ ದಂಧೆಯ ಅಡ್ಡೆ ಮಾಡಿಕೊಂಡನೋ ಏನೋ? ಆಗ ಶುರುವಾದ ಬಾರಾ ಭಾನ್ಗಡಿಗಳು ಇವತ್ತಿಗೂ ನವನವೀನವಾಗಿ ನಡೆಯುತ್ತಲೇ ಇವೆ. ಹವ್ಯಕ ಬ್ರಾಹ್ಮಣರ ಗ್ಯಾಂಗ್ ವಾರ್, ಕೋರ್ಟ್-ಕಚೇರಿ ವ್ಯಾಜ್ಯ, ಅಪಾರ ಆಸ್ತಿ-ಆದಾಯ ಸ್ವಾಹಾ ಸಂಚು, ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ, ಬ್ರಹ್ಮಚಾರಿ ಸ್ವಾಮಿ ಮತ್ತು ಬಾಲಿವುಡ್ ಬಿಚ್ಚಮ್ಮ ಮಲ್ಲಿಕಾ ಶರಾವತ್ ಸಖ್ಯ..... ಮುಂತಾದ ತರಹೇವಾರಿ ಲಫಡಾ ಪುರಾಣಕ್ಕೀಗ ಹುಂಡಿ ದರೋಡೆ ಉಪಕತೆಯೂ ಸೇರಿಕೊಂಡಿದೆ.

ಗೋಕರ್ಣವನ್ನು ಉದ್ಧಾರ ಮಾಡುವೆನೆಂಬ ಘೋಷ ವಾಕ್ಯದೊಂದಿಗೆ ಭರ್ಜರಿ ಆಸ್ತಿ-ಆದಾಯದ ಮಹಾಬಲೇಶ್ವರ ದೇವಸ್ಥಾನ ಮತ್ತದರ ಪರಿವಾರ ದೇಗುಲಗಳನ್ನು ಜೋಳಿಗೆಗೆ ಇಳಿಸಿಕೊಂಡಿದ್ದ ರಾಘವ ಬಳಗ ಮಾಡಿದ್ದು ಮಾತ್ರ ಅವಾಂತರ-ಅನಾಹುತ- ಅವ್ಯವಹಾರ-ಅನಾಚಾರಗಳನ್ನೇ! ದೇವಸ್ಥಾನದ ಹಸ್ತಾಂತರವನ್ನು ಸ್ಥಳೀಯ ಬ್ರಾಹ್ಮಣರು ವಿರೋಧಿಸಿದಾಗ ಬೆಚ್ಚಿಬಿದ್ದ ರಾಘವ ತನ್ನ ಸೆಕ್ಯುರಿಟಿಗೆಂದು 30-50ರಷ್ಟು ಉಂಡಾಡಿ ಪುಂಡರಂಥ ವಟುಗಳನ್ನು ದೇವಸ್ಥಾನದ ಒಳ-ಹೊರಗೆ ನೇಮಿಸಿಕೊಂಡಿದ್ದ! ಈ ಉನ್ಮತ್ತ ಮಾಣಿಗಳಿಗೆ ದೇಗುಲದ ಗರ್ಭಗುಡಿಯಿಂದ ಅನತಿ ದೂರದಲ್ಲಿರುವ ಅಶೋಕೆ-ಎಂಬಲ್ಲಿರುವ ರಾಘವನ ಆಶ್ರಮದ ತನಕ, ದೇವಸ್ಥಾನದ ಮಣೆಗಾರ ಜಗಲಿಯಿಂದ -ಅನ್ನ ಛತ್ರದ ಪಾತ್ರೆ-ಪಗಡೆ ತೊಳೆವ ಜಾಗ-ಅಡಿಗೆ ಮನೆವರೆಗೂ ಪಂಚೆ ಎತ್ತಿಕೊಂಡು-ಜನಿವಾರ ಹೊಸೆದುಕೊಂಡು ಅಂಡಲೆವುದೇ ಡ್ಯೂಟಿ!

ಈ ಚಾಕರಿ "ಶಾಂತಿ" ಕಾಲದಲ್ಲಾದರೆ "ಯುದ್ಧ" ಕಾಲದಲ್ಲಿ ರಾಘವನ ಪಾತಕ ಎತ್ತಿಯಾಡುವವರ ಹಣಿಯು ವುದೇ ಚಾಕರಿ! ಗಡದ್ದಾಗಿ ತಿಂದುಂಡು ದೇವಾಲಯದ ಚಂದ್ರ ಶಾಲೆಯಲ್ಲಿ ಕುಳಿತು ಕವಳ ಮೆಲ್ಲುತ್ತ ಪಟ್ಟಾಂಗ ಹೊಡೆಯುವ ಈ ಹುಡುಗರಿಗೆ ಜಿ.ಕೆ. ಹೆಗಡೆ ಎಂಬಾತನೇ "ಬಾಸ್"! ಈ ಅಡ್ನಾಡಿಗಳಿಗೆ ಬಿಟ್ಟರೆ ಇನ್ಯಾರಿಗೂ ದೇಗುಲದ ಒಳ-ಹೊರಗಿನ ವಹಿವಾಟು ಗೊತ್ತಿಲ್ಲ. ಏಕೆಂದರೆ ಇವರು ಮಹಾಬಲೇಶ್ವರ ಸಂಪತ್ತಿಗಷ್ಟೇ ಅಲ್ಲ, ರಾಘವನ ಬಾಡಿಗೂ ಗಾರ್ಡ್‌ಗಳು. ಈ "ಸೆಕ್ಯೂರಿಟಿ ಮಾಣಿ"ಗಳಿಗೆ ಯಾವ ಹುಂಡಿ ತುಂಬಿದೆ, ಯಾವ್ಯಾವುದರಲ್ಲಿ ಎಷ್ಟೆಷ್ಟು ಮೌಲ್ಯದ ನೋಟುಗಳು, ಬಂಗಾರದ ಒಡವೆ ಇರಬಹುದೆಂಬ ಅಂದಾಜು ಇರುತ್ತದೆ; ದೇವಾಲಯದ ಆಭರಣ, ಹತ್ಯಾರ, ಸಿಸಿ ಕ್ಯಾಮರಾದ ಕಾರ್ಯಕ್ಷಮತೆ, ಬಂದುಹೋಗುವ ಭಕ್ತಾದಿಗಳ ಚಲನವಲನ, ಮಹಿಳಾ ಕೆಲಸಗಾರರ ಅಸಹಾಯಕತೆಗಳೆಲ್ಲ ಗೊತ್ತಿರುತ್ತದೆ.

ಹೀಗಾಗಿ ಗೋಕರ್ಣ ಸೀಮೆಯಲ್ಲಿ ಹುಂಡಿ ಕಳ್ಳತನದ ಸಂಶಯವೇನಿದ್ದರೂ ಈ ಸ್ವಾಮಿ ಶಿಷ್ಯರ ಮೇಲೆಯೇ ಕೇಂದ್ರೀಕೃತವಾಗಿದೆ. ರಾಘವೇಶನ ಸುಪರ್ದಿಗೆ ಮಹಾಬಲೇಶ್ವರ ದೇವಾಲಯ ಸಿಕ್ಕ ಮೇಲೆ ದೇವಾಲಯದ ಆವರಣದಲ್ಲೆಲ್ಲ ಕಂಡ-ಕಂಡಲ್ಲಿ ಹುಂಡಿ ಸ್ಥಾಪಿಸಲಾಗಿವೆ. ಭಕ್ತರ ಶೋಷಿಸಿ ಕಾಸು ಮಾಡುವ ಹಿಡನ್ ಉದ್ದೇಶದಿಂದ ದೊಡ್ಡ-ದೊಡ್ಡ ತಾಮ್ರದ ಹಂಡೆಗಳನ್ನು ದೇವಾಲಯದ ಸುತ್ತ ಇಡಲಾಗಿದೆ. ಇದರಲ್ಲಿ ಗರ್ಭಗುಡಿಯ ನಂದಿ ಮಂಟಪದಲ್ಲಿದ್ದ ಎರಡು ಹಂಡೆಗಳನ್ನಷ್ಟೇ "ಕಳ್ಳರು" ಒಡೆದಿದ್ದಾರೆ. ಈ ಎರಡು ಹಂಡೆಗಳಲ್ಲಿ ಉಳಿದೆಲ್ಲ ಹುಂಡಿಗಳಿಗಿಂತ ಹೆಚ್ಚು ಕಲೆಕ್ಷನ್ ಆಗುತ್ತದೆಯಂತೆ. ಇವುಗಳನ್ನು ಒಡೆದು ಹಣ ನೆಲದ ಮೇಲೆ ಸುರಿದ ಚೋರರು ಅದರಲ್ಲಿಯ ರೂ. 1000, 500 ಮತ್ತು 100 ನೋಟುಗಳನ್ನಷ್ಟೇ ಎಗರಿಸಿದ್ದಾರೆ. ಬಂಗಾರದ ಆಭರಣ ದೋಚಿಸಿದ್ದಾರೆ. ಆದರೆ ಉಳಿದ ಚಿಲ್ಲರೆ ಹಣ ಹಾಗೇ ಬಿಟ್ಟು ಪರಾರಿಯಾಗಿದ್ದಾರೆ. ಬಿಟ್ಟು ಹೋಗಿರುವ ಹಣವೇ ಬರೋಬ್ಬರಿ 51 ಸಾವಿರ ರೂಪಾಯಿ!!

ವೃತ್ತಿನಿರತ ಹೊರಗಿನ ಕಳ್ಳರಾಗಿದ್ದರೆ "ಚಿಲ್ಲರೆ" ಬಿಟ್ಟು ಹೋಗುತ್ತಿದ್ದರಾ? ಉಳಿದ ಒಡವೆ ಒಯ್ಯುತ್ತಿರಲಿಲ್ಲವಾ? ಕದಿಯಲು ಬಂದವ ಕೈಗೆ ಸಿಕ್ಕಿದ್ದರಲ್ಲಿ ಆರಾಮಾಗಿ ದೊಡ್ಡ ನೋಟುಗಳನ್ನಷ್ಟೇ ಆಯುತ್ತ ಕೂರುತ್ತಾನಾ? ಕಳ್ಳ ಅಷ್ಟು ಟೆನ್ಷನ್ ಫ್ರೀಯಾಗಿ ಇರಲು ಸಾಧ್ಯವಾ? ಈ ಸಿಂಪಲ್ ಪ್ರಶ್ನೆಗಳಿಗೆ ಉತ್ತರವೂ ತುಂಬ ಸರಳ. ಅಂದರೆ ಹುಂಡಿ ಒಡೆದು ದೊಡ್ಡದಷ್ಟೇ ದೋಚಿದವರು "ಒಳಗಿನ ಕಳ್ಳರು"! ಈ ಚೋರ ವಿಪ್ರರು ಯಾರೋ ಭಕ್ತಾದಿಗಳು ಸದ್ರಿ ಹುಂಡಿಯಲ್ಲಿ ಒಂದರಲ್ಲಿ ಅಪಾರ ಬಂಗಾರ ಅಥವಾ ಲಕ್ಷಾಂತರ ಕಾಣಿಕೆ ಹಾಕಿದ್ದನ್ನು ಕಂಡಿರುವ ಸಾಧ್ಯತೆಯಿದೆ. ಎರಡರಲ್ಲಿ ಯಾವ ಹಂಡೆ ಎಂಬುದವರಿಗೆ ಕನ್‌ಫ್ಯೂಸ್ ಆಗಿದೆ. ಹಾಗಾಗಿ ಎರಡೂ ಒಡೆದಿದ್ದಾರೆ. ಒಡೆದಾಗ ತಮಗೆ ಬೇಕಾದ್ದು ಸಿಕ್ಕಾಗ ದೊಡ್ಡ ಮೊತ್ತದ ನೋಟುಗಳನ್ನು ಆಯ್ದುಕೊಂಡು ನಿರಾತಂಕವಾಗಿ "ಕಿಂಡಿ"ಯಿಂದಲೇ ಹೋಗಿದ್ದಾರೆ. ಇದು ದೇವಸ್ಥಾನದ ಚೋರಿ ಪ್ರಕರಣದ "ಸ್ಥಳ" ನೋಡಿದರೆ ಎಂಥವರಿಗೂ ಅರ್ಥವಾಗುವ ಸತ್ಯ!!

ಕಳ್ಳತನಕ್ಕೆ ದೇವಸ್ಥಾನದೊಳಗಿನ ಪರಿಕರಗಳನ್ನೇ ಬಳಸಿರುವುದು ಬಾಗಿಲಿನ ಕಬ್ಬಿಣದ ರಾಡನ್ನು ಮುರಿದಿರುವ ರೀತಿ, ದೇವಸ್ಥಾನದ ಸಿಸಿ ಕ್ಯಾಮರಾ ಕಳ್ಳತನದ ಹೊತ್ತಲ್ಲಿ ಸ್ವಿಚ್-ಆಫ್ ಆಗಿರುವುದೆಲ್ಲ ಕಳ್ಳರು ಖಂಡಿತ ಒಳಗಿನವರೇ ಎಂಬುದನ್ನು ನಿಸ್ಸಂಶಯವಾಗಿ ಸಾಬೀತುಮಾಡುವಂತಿದೆ. ಕಳ್ಳತನ ನಡೆದಿರುವುದು ಆಗಸ್ಟ್ 24 ಮತ್ತು 25 ರ ರಾತ್ರಿ. ಅಂದರೆ ಶುಕ್ರವಾರ ರಾತ್ರಿಯೇ "ಕಳ್ಳರು" ಒಳಗೇ ಇದ್ದಿರಬೇಕು. ಅಥವಾ ಸದಾ ತೆರೆದೇ ಇರುವ ದೇಗುಲದ ಹಿಂದಿನ ಕಿಂಡಿಯಿಂದ ಒಳಬಂದು ಕೆಲಸ ಮುಗಿಸಿಕೊಂಡು ಬಂದ ದಾರಿಯಲ್ಲೇ ಹೋಗಿರಬೇಕು. ದೇಗುಲದ ಉತ್ತರ ದಿಕ್ಕಿನ ಬಾಗಿಲಿನ ರಾಡನ್ನು ಮೀಟಿ ಬಗ್ಗಿಸಿ ಒಳಗೆ ನುಸುಳಿದಂತೆ ಭ್ರಮೆ ಬರುವಂತೆ ಮಾಡಲು ಪ್ರಯತ್ನಿಸಿದ್ದಾರೆ. ಅದಕ್ಕವರು ದೇವಸ್ಥಾನದೊಳಗಿನ ಬಲಿ ಸೊಪ್ಪು ಕೊಚ್ಚುವ ಕತ್ತಿ ಮತ್ತು ಪಲ್ಲಕ್ಕಿಯ ಹಂಸಪಾದ (ಪಲ್ಲಕ್ಕಿ ನಿಲ್ಲಿಸಲು ಬಳಸುವ ಆಧಾರ ಕಂಬ) ಬಳಸಿದ್ದಾರೆ.

ಈ ಕತ್ತಿಯನ್ನು ಬಲಿ ಸೊಪ್ಪಿನ ಅಡಿಯಲ್ಲಿ ಸದಾ ಅಡಗಿಸಿಡಲಾಗುತ್ತದೆ. ಇದು ದೇವಸ್ಥಾನದ "ನಿತ್ಯಕರ್ಮ" ಬಲ್ಲವರಿಗಷ್ಟೇ ಗೊತ್ತಿರುವಂಥದ್ದು. ಆ ಕತ್ತಿ ಬಳಸಿದ್ದರಿಂದ ಮೇಲೆ ಕಳ್ಳರು ಒಳಗಿನವರೋ? ಹೊರಗಿನವರೋ? ಎಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ, ಕಳ್ಳರು ಒಳಗೇ ಇದ್ದರು ಎಂಬುದಕ್ಕೆ ಬಾಗಿಲಿನ ರಾಡುಗಳನ್ನು ಗರ್ಭಗುಡಿಯ ಒಳಭಾಗಕ್ಕೆ ಎಳೆದು ಬಗ್ಗಿಸಲಾಗಿದೆ. ಹೊರಗಿನಿಂದ ಕಳ್ಳರು ಬಂದಿದ್ದರೆ ಈ ರಾಡು ಹೊರಗಡೆಗೆ ಎಳೆದು ಬಗ್ಗಿಸಬೇಕಾ ಗುತ್ತಿತ್ತು. ಇದು ಪೊಲೀಸರ ಅಥವಾ ಜನರ ದಾರಿ ತಪ್ಪಿಸಲು ಜಾಣ ಕಳ್ಳರು ಮಾಡಿರುವ ಹುಚ್ಚು ಉಪಾಯ! ಹಾಗೆಯೇ ಪಲ್ಲಕ್ಕಿಯ ಹಂಸಪಾದ ಎಲ್ಲಿರುತ್ತವೆ ಎಂದು ಗೊತ್ತಿರುವುದು ಒಳಗಿನ ಆಡಳಿತಗಾರರಿಗಷ್ಟೇ ತಾನೆ?

ಇದಕ್ಕಿಂತಲೂ ಮುಖ್ಯ ಅಂಶವೆಂದರೆ, ಕಳ್ಳತನದ ರಾತ್ರಿ ದೇಗುಲದ ಸಿಸಿ ಕ್ಯಾಮರಾ ಆಫ್ ಆಗಿರುವುದು. ಅಂದು ರಾತ್ರಿ ಗುಡುಗು-ಮಳೆ ಬಂದಿದ್ದರಿಂದ ಕ್ಯಾಮರಾ ಬಂದ್ ಮಾಡಲಾಗಿತ್ತೆಂದು ದೇವಾಲಯದ ಆಡಳಿತ ಮಂಡಳಿಯ ಕಾರ್ಯದರ್ಶಿ ಜಿ.ಕೆ. ಹೆಗಡೆ ಹಲಬುತ್ತಿದ್ದಾನೆ. ಆದರೆ ಅಂದು ಸಿಸಿ ಕ್ಯಾಮರಾ ಬಂದ್ ಮಾಡುವಷ್ಟು ಭೀಕರ ಗುಡುಗು ಗೋಕರ್ಣ ಭಾಗದಲ್ಲಿ ಇರಲಿಲ್ಲ. ಈ ಅವಾಂತರಕಾರಿ ಜಿ.ಕೆ. ಹೆಗಡೆಯೇ ಕಳ್ಳತನದ ಸಂಚಿನಲ್ಲಿ ಭಾಗಿಯಾಗಿರುವ ಸಂಶಯ ಆತನ ಮಾತುಗಳೇ ಮೂಡಿಸಿ ಬಿಟ್ಟಿದೆ. ದೇವಸ್ಥಾನ ಆಡಳಿತ (ರಾಘವ)ದ ಬಗ್ಗೆ ಹೊಟ್ಟೆಕಿಚ್ಚು ಇರುವವರೇ ಈ ಕೃತ್ಯ ಮಾಡಿದ್ದಾರೆಂಬುದು ಸ್ವಾಮಿನಿಷ್ಠ ಹೆಗಡೆ ಹೇಳಿಕೆ. ಗೋಕರ್ಣ ದೇವಾಲಯದ ಹಸ್ತಾಂತರದ ನಂತರದ ಅನೇಕ ಸಂಘರ್ಷಕ್ಕೆ ಸೂತ್ರಧಾರನೇ ಈ ಅಧಿಕಪ್ರಸಂಗಿ ಹೆಗಡೆ. ಈತನ ಹೆಡೆಮುರಿ ಕಟ್ಟಿ ತದುಕಿದರೆ ಪೊಲೀಸರಿಗೆ ಮಹತ್ವದ ಸುಳಿವು ಸಿಗುವುದು ಗ್ಯಾರಂಟಿ!

ಈ ಅಧಿಕಪ್ರಸಂಗಿ ಜಿ.ಕೆ. ಹೆಗಡೆಯ ಆಣತಿ-ಅವಗಾಹನೆ ಇಲ್ಲದೆ ದೇಗುಲದ ಆಡಳಿತ ನಡೆಯದು. ಆಡಳಿತಗಾರರ ವೇಷದಲ್ಲಿ, ಪುರೋಹಿತರ ಪಾತ್ರದಲ್ಲಿ ಅಥವಾ ಸಹಾಯಕರ ಚಾಕರಿಯ ವಟುಗಳಲ್ಲಿ ಕಳ್ಳರು-ಲೂಟಿಕೋರರು -ಅತ್ಯಾಚಾರಿಗಳು ದೇಗುಲದಲ್ಲಿ ದರ್ಬಾರು ನಡೆಸುತ್ತಿದ್ದಾರೆಂದೇ ಜನರಾಡಿಕೊಳ್ಳುತ್ತಿದ್ದಾರೆ. ಹಿಂದೆಂದೂ ಆಗದ ಕಳ್ಳತನ-ಸುಲಿಗೆ ರಾಘವನ ಕಬ್ಜಾ ಆದನಂತರ ನಿರಾತಂಕ-ನಿರಂತರವಾಗಿ ದೇಗುಲದಲ್ಲಿ ನಡೆಯುತ್ತಿವೆ. ಕೆಲವೇ ಕೆಲವು ತಿಂಗಳ ಹಿಂದೆ ಅಮಾಯಕ ಭಕ್ತೆಯೊಬ್ಬಳ 30,000 ರೂ.ಗಳನ್ನು ದೇವಸ್ಥಾನದ ಒಳಗೆ ಎಗರಿಸಲಾಗಿತ್ತು; ಅದಕ್ಕೂ ಮೊದಲು ಒಬ್ಬರ ಲೋಡೆಡ್ ಗನ್ ಮಂಗಮಾಯ ವಾಗಿತ್ತು. ಈ ಬಗ್ಗೆ ಪೊಲೀಸ್ ಕಂಪ್ಲೇಂಟೂ ಆಗಿದೆ. ಆದರೆ ಆಗಲೂ ಈಗಿನಂತೆಯೇ ದೇವಸ್ಥಾನದ ಸಿಸಿ ಕ್ಯಾಮರಾ ಬಂದ್ ಆಗಿತ್ತು!! ಅದಕ್ಕೇ ಹೇಳೋದು, ಬೇಡದಕ್ಕೆ ಬಾಯಿಬಡಿದುಕೊಂಡು "ಗುರು"ಗಳ ಮುಖ ಉಳಿಸಲು ಅನಾಚಾರ ಮಾಡುವ ಜಿ.ಕೆ. ಹೆಗಡೆಯನ್ನು ಮೊದಲು ಪೊಲೀಸರು ವಿಚಾರಣೆಗೊಳಪಡಿಸಬೇಕು ಎಂದು!

ದೇವಸ್ಥಾನದ ಚಂದ್ರಶಾಲೆ, ಆವಾರ, ಅನ್ನಛತ್ರ, ಅನ್ನ ಛತ್ರದ ಅಡಿಗೆ ಮನೆಯಲ್ಲೆಲ್ಲ ಅರೆಬೆತ್ತಲೆ ಕವಳದ ಚಪಲಿಗರದೇ ಹಾವಳಿ. ಇಂಥವರಲ್ಲೊಬ್ಬ ಮದೋನ್ಮತ್ತ ಚಾಕರಿಗೆ ಬರುತ್ತಿದ್ದ ಶೂದ್ರರ ಹುಡುಗಿಯನ್ನು ಮುಗಿಸಿದ್ದ. ಈ ಮಾಣಿಯ ವಿಕೃತಿಗೆ ಆ ಹು ಬಸಿರಾಗಿದ್ದಳು. ಇದು ದೊಡ್ಡ ಸುದ್ದಿಯಾಗಿ ವಿ ಪರಿಹಾರ ಸ್ವಾಮಿಗಳೇ ಕೊಟ್ಟು ಕೇಸ್ ಖತಮ್ ಮಾಡಿ ಆ ಮಾಣಿಯನ್ನು ಓಡಿಸಿದ್ದರು. ಆದರೆ ಅಂಥ ಅನ ಆಟ ಮಾತ್ರ ಇನ್ನೂ ನಿಂತಿಲ್ಲವೆಂಬುದು ರಾಘವ ಮ ಬಳಗದ ಇತಿಹಾಸ ಬಲ್ಲವರು ಹೇಳುತ್ತಾರೆ.

ರಾಘವನ ಇಂಗದ ದೇಗುಲ ದಾಹ, ಆಳುವ ಆಸ್ಥಾನ ಯತಿವರ್ಯನಾಗುವ ಮಹತ್ವಾಕಾಂಕ್ಷೆ ಬಲ್ಲ ಹುಂಡಿ ದರೋಡೆಯನ್ನು ಕರಾರುವಾಕ್ಕಾಗಿ ವಿಶ್ಲೇಷಿಸುತ್ತಿ ಈ ಕಳ್ಳತನದ ಹಿಂದೆ ರಾಘವನ ಕಾರಸ್ಥಾನ ಅಡಗಿರಲೂಬಹುದೆಂಬುದು ಅವರ ಅಂದಾಜು. ಏಕೆ ಇಂಥ ಸಣ್ಣ-ಪುಟ್ಟ ಕಳ್ಳತನ ಮೇಲಿಂದ ಮೇಲೆ ನಡೆಯು ಮಾಡಿ ನಂತರ ಸುಮಾರು 10 ಕೆ.ಜಿ.ಯಷ್ಟಿರುವ ಬಂಗಾ ಒಡವೆಗಳ ಪೆಟ್ಟಿಗೆಯೇ ಹಾರಿಸುವ ಸ್ಕೆಚ್ ರಾಘವ ಹಾಕಿರಬಾರದು? ಕೋರ್ಟು-ಕಚೇರಿ ವ್ಯಾಜ್ಯದಲ್ಲಿ ಸೋ ದರೆ ಅಥವಾ ಸರ್ಕಾರ ಬದಲಾಗಿ ಹಸ್ತಾಂತರ ರದ್ದುಪ ದರೆ ಆಗರ್ಭ ಶ್ರೀಮಂತ ಮಹಾಬಲೇಶ್ವರ ಕೈತಪ್ಪುತ್ತಾನೆ ಭೀತಿ ರಾಘವನ ಗ್ಯಾಂಗಿಗಿದೆ. ಹಾಗಾಗಿ ಈ ಎಂಟ ಕೆ.ಜಿ. ಬಂಗಾರವಾದರೂ ಲಪಟಾಯಿಸಿಕೊಂಡು ಓಡ ದೂ(ದು)ರಾಲೋಚನೆ ರಾಘವ ಹಾಕಿಯೇ ದೇವಸ್ಥಾ ಒಳಗೆ ಆಗಬಾರದ್ದು ಆಗಲು ಅವಕಾಶ ಕೊಡುತ್ತಿದ್ದಾನಂತ ಆಗಲೂ ಈಗಾಗಿರುವ ಪತ್ತೆಯಾಗದ ಮೂರು ಕಳ್ಳತನ ಸಾಲಿಗೆ ಆ ಭರ್ಜರಿ ಬೇಟೆಯನ್ನು ಸೇರಿಸಬಹುದಲ್ಲವಾ

'ರಾಘವೇಷ'ನ ಬಳಗಕ್ಕಂತೂ ಕಳ್ಳರ ಹಿಡಿಯುವುದ ಬೇಕಾಗಿಲ್ಲ. ಹಾಗಾಗಿಯೇ ಆತನ ಕಾರ್ಯದರ್ಶಿ ಬಾಯಿ ಬಂದಂತೆ ಅಸಂಬದ್ಧ ಬೊಗಳುತ್ತಿದ್ದಾನೆ. ಅತ್ತ ಪೊಲೀಸರ ಯಾವುದೋ ಒತ್ತಡಕ್ಕೆ ಸಿಕ್ಕಂತೆ ಖದರ್ ಕಳಕೊಂಡಿದ್ದಾ ಪೊಲೀಸ್ ನಾಯಿ ತಂದಾಗ ಅದು ದೇಗುಲಕ್ಕೆ ಪ್ರದಕ್ಷಿ ಹಾಕಿ ಮಣೆಗಾರ ಚಾವಡಿ ಸುತ್ತಲೇ ಗಿರಕಿ ಹೊಡೆದ ನಿಂತುಬಿಟ್ಟಿತ್ತು. ಅಂದರೆ ಕಳ್ಳರು ದೇಗುಲದಿಂದ ಹೊ ಹೋಗಿಲ್ಲ ಅಂದಾಯ್ತಲ್ಲವಾ? ಅಥವಾ ಕಳ್ಳರು ಒಳಗಿನವರ ಎಂಬುದು ಪಕ್ಕಾ ಆದಂತಾಯ್ತು. ಆದರೂ ಪೊಲೀಸರ ಮಾತ್ರ ಕೈಕಟ್ಟಿಕೊಂಡು ಕೂತಿದ್ದಾರೆ. ಪೊಲೀಸರು ಶಂಕಿತರು ಇಲ್ಲದಂತಿದ್ದಾರೆ.

ದೇವಸ್ಥಾನದ ಬಳಿಯ ಪೊಲೀಸ್ ಚೌಕಿಯಲ್ಲಿ ಅಂದ ಡ್ಯೂಟಿಯಲ್ಲಿದ್ದ-ನಿವೃತ್ತಿಗೆ ಕೆಲವೇ ತಿಂಗಳಿರುವ ಬಡಪಾಯಿ ಹವಾಲ್ದಾರ್ ಒಬ್ಬನನ್ನು ಸಸ್ಪೆಂಡ್ ಮಾಡಲಾಗಿದೆ. ಹೊರಗಿ ಕಳ್ಳರಾಗಿದ್ದರೆ ಈ ಪೊಲೀಸಪ್ಪನಿಗೆ ಕಾಣಿಸುತ್ತಿದ್ದರೋ ಏನೋ ದೇವಸ್ಥಾನದವರೇ ನೇಮಿಸಿರುವ ಖಾಸಗಿ ಸೆಕ್ಯೂರಿ ರಾತ್ರಿಯಿಡೀ ಒಳಗೇ ಮಲಗಿದ್ದ ಇವನಿಗೇ ಕಾಣದ ಕಳ್ಳರ ಆ ಪೊಲೀಸರಿಗೆ ಅದ್ಹೇಗೆ ಕಂಡಾನು ಪಾಪ? ಪೊಲೀಸ ಇಲಾಖೆಯ ತನಿಖೆಯ ಜಾಡು ನೋಡಿದರೆ, ಶ್ರೀಶ್ರೀಶ್ರಿ ರಗಳೆ ರಾಘವನ ಮಾನ-ಮರ್ಯಾದೆ ಕಾಪಾಡು ಹವಣಿಕೆಯಲ್ಲಿ ಇರುವಂತಿದೆ!!

ಆಳುವ ಚಡ್ಡಿ-ಕಾವಿಗಳನ್ನೇ ಜೋಳಿಗೆಯಲ್ಲಿಟ್ಟುಕೊಂಡ ಧರ್ಮದ ಆಟ ಆಡುತ್ತಿರುವ ರಾಘವನಿಗೆ ಈ ಹುಂ ಕಳ್ಳತನದ ಕೇಸ್ ಹಳ್ಳಹಿಡಿಸೋದು ಕಷ್ಟವಾ ಮಹಾಬಲೇಶ್ವರನ ಮೂರನೇ ಕಣ್ಣಾದರೂ ಕಳ್ಳರ ಬಳಗ ಮೇಲೆ ಬದ್ದೀತಾ? ಹಾಗೆಂಬುದು "ನಾಸ್ತಿಕರ" ಆಳಲು

• ನಹು

ಶಾಮನೂರು ವಶಕ್ಕೆ ಅರಸು 'ಶ್ರೀಶಕ್ತಿ' ಬಂಗಲೆ

ಸೇರಿ ಹಿಂದುಳಿದ ವರ್ಗಗಳ ಅಧ್ವರ್ಯು, ದೀನದಲಿತರ ಹಿತಚಿಂತಕ, ...ಣಸೂರು ಹುಲಿ, ಮಾಜಿ ಮುಖ್ಯಮಂತ್ರಿ ದೇವರಾಜ ಅರಸರ ಬಂಗಲೆ ...ರಾಟೆಯಾಗಿದೆ.


ಅರಸರ ಕನಸು, ಕುಟುಂಬ, ಪ್ರತಿಷ್ಠೆಗಳೆಲ್ಲದರ ಪಳೆಯುಳಿಕೆಯಂತಿದ್ದ ...ಾಶಿವನಗರದ 'ಶ್ರೀ ಶಕ್ತಿ' ಬಂಗಲೆ, ಅರಸರ ಪರಮಶಿಷ್ಯರಲ್ಲೊಬ್ಬರಾದ ...ಮನೂರು ಶಿವಶಂಕರಪ್ಪನವರ ಪಾಲಾಗಿದೆ.

ಸದ್ಯ ಅರಸರ ನೆನಪಾಗಿ ಅವರು ಬಾಳಿ ಬದುಕಿದ ಸದಾಶಿವನಗರದ ...ನೆಯನ್ನೊಮ್ಮೆ ನೋಡಲೆಂದು ಬಂದ ಯಾರಿಗಾದರೂ ಆಘಾತವಾಗಲೇಬೇಕು. ...ಲ್ಲೀಗ ಅರಸರು ನೆನಪು ಮಾತ್ರ. ಅವರು ಬಳಸುತ್ತಿದ್ದ ಪರಿಕರಗಳು, ...ೋಟೋಗಳು, ಸನ್ಮಾನದ ಫಲಕಗಳೆಲ್ಲವನ್ನೂ ಕಸದತೊಟ್ಟಿಗೆ ಎಸೆದಂತೆ ...ಗೆಸೆಯಲಾಗಿದೆ. ಅವರ ಹಸ್ತಾಕ್ಷರವಿದ್ದ ಪತ್ರಗಳು, ಪೇಪರ್ ಕಟಿಂಗ್ಸ್, ...ದಕ, ಹುಕ್ಕಾ ಇತ್ಯಾದಿಗಳೆಲ್ಲವನ್ನೂ ರಸ್ತೆ ಕಸ ಗುಡಿಸುವಾಕೆ ಹೊತ್ತೊಯ್ದು ...ದ ಲಾರಿಗೆ ಸಾಗಿಸಿದ್ದಾಳೆ. ಅವಶೇಷದಂತಿದ್ದ ಒಂದೆರಡು ವಸ್ತುಗಳನ್ನು ...ಾರೋ ಅರಸರ ಬಗ್ಗೆ ಗೊತ್ತಿದ್ದ ಪುಣ್ಯಾತ್ಮರು ಎತ್ತಿ ಆ ಬಂಗಲೆಯ ...ಮಫಲಕದ ಕೆಳಗಿಟ್ಟು ಸಂತಾಪ ಸೂಚಕವಾಗಿ ಜೋಡಿಸಿಟ್ಟ ದೃಶ್ಯ ...ಥವರಲ್ಲೂ ದುಃಖ ಉಮ್ಮಳಿಸುತ್ತದೆ.

ಅರಸು ಬಾಳಿ ಬದುಕಿದ ಬಂಗಲೆಯೀಗ ಪರರ ಪಾಲಾಗಿದೆ!

ಶ್ರೀ ಶಕ್ತಿ.....!

ಇಲ್ಲಿಗೆ ನಾಲ್ಕು ವರ್ಷಗಳ ಹಿಂದೆಯೇ ಅರಸು ಕುಟುಂಬದ ದುರಂತ ...ತ್ತು ಸದಾಶಿವನಗರದ ಅವರಿದ್ದ ಬಂಗಲೆಯ ಮೇಲೆ ರಿಯಲ್ ಎಸ್ಟೇಟ್ ...ಫಿಯಾ ಕಣ್ಣು ಹಾಕಿದ್ದರ ವಿರುದ್ಧ ಪತ್ರಿಕೆ ವಿಶೇಷ ವರದಿಯೊಂದನ್ನು ...ಟಿಸಿತ್ತು. ಸದಾಶಿವನಗರದ ನಂ. 10, 10 ನೇ ಕ್ರಾಸ್, 8 ನೇ ಮುಖ್ಯರಸ್ತೆ, ...ಎಂವಿ ಎಕ್ಸ್‌ಟೆನ್ಷನ್, ಸದಾಶಿವನಗರ, ಬೆಂಗಳೂರು 80 ವಿಳಾಸದ 'ಶ್ರೀ ...' ಬಂಗಲೆಯ ಹಿನ್ನೆಲೆ, ವೈಭವ ಮತ್ತು ಪ್ರತಿಷ್ಠೆಯೇ ಅಂಥಾದ್ದು. ಅರಸು ...ಖ್ಯಮಂತ್ರಿಯಾದ ಮೇಲೆ ಅಪಾರ ಕನಸು ಕಟ್ಟಿಕೊಂಡೇ ಕಟ್ಟಿಸಿದ ...ಗಲೆಯದು. ಮೈಸೂರಿನ ಚಾಮುಂಡೇಶ್ವರಿ ದೇವಿಯ ಮೇಲಿದ್ದ ಭಕ್ತಿಯಿಂದಲೇ ಅದಕ್ಕೆ 'ಶ್ರೀ ಶಕ್ತಿ' ಎಂದು ಹೆಸರಿಟ್ಟಿದ್ದರು.




ಅಷ್ಟೇ ಅಲ್ಲ, ಈ ಬಂಗಲೆಗೆ ಹೊಂದಿಕೊಂಡಂತೆಯೇ ಪತ್ನಿ ಲಕ್ಷ್ಮೀ ಅಮ್ಮಣ್ಣಿಯವರಿಗೊಂದು, ಈ ಎರಡೂ ಸೈಟುಗಳಿಗೆ ಹೊಂದಿಕೊಂಡು ಹಿಂಭಾಗದಲ್ಲಿ ಮಗಳು ನಾಗರತ್ನಳಿಗೊಂದು, ಭಾರತಿ ಅರಸುಗೊಂದು- ಹೀಗೆ ಒಟ್ಟೊಟ್ಟಿಗೆ ನಾಲ್ಕು ಸೈಟುಗಳನ್ನು ಬಿಡಿಎ ನಿಂದ ಮಂಜೂರು ಮಾಡಿಸಿಕೊಂಡೇ ಅರಸು ತಮ್ಮ ಬಂಗಲೆಯೆಬ್ಬಿಸಿದ್ದರು. ಅರಸು 1982 ರ ಜೂನ್ 6 ರಂದು ಕೊನೆಯುಸಿರೆಳೆದಾಗ ಅವರ ಉತ್ತರಾಧಿಕಾರಿಯಂತೆ ಹಿರಿಮಗಳು ಚಂದ್ರಪ್ರಭಾ ...ಸು ಸುಪರ್ದಿಗೆ ಬಂದ ಸದಾಶಿವನಗರದ 'ಶ್ರೀ ಶಕ್ತಿ' ಬಂಗಲೆಯ ದುರಂತಕ್ಕೂ ...ಸು ಕುಟುಂಬದ ದುರಂತಕ್ಕೂ ವ್ಯತ್ಯಾಸವೇ ಇರಲಿಲ್ಲ. ಅರಸರ ಮೂವರು ...ಯರ ಪೈಕಿ ಮೊದಲನೆಯವರಾದ ಚಂದ್ರಪ್ರಭಾ ಅರಸು 1983 ರಲ್ಲಿ ...ಣಸೂರಿನಿಂದ ಕ್ರಾಂತಿರಂಗದ ಅಭ್ಯರ್ಥಿಯಾಗಿ ಗೆದ್ದು ಹೆಗಡೆ ಸಂಪುಟದಲ್ಲಿ ...ತ್ರಿಯಾಗುವ ಹೊತ್ತಿಗೇ ಆಸ್ತಿ ಕಲಹ ಶುರುವಾಗಿತ್ತು. 85 ರಲ್ಲಿ ಎಚ್.ಎಲ್. ...ಮೇಗೌಡರ ವಿರುದ್ಧ ಸೋತ ಚಂದ್ರಪ್ರಭಾ ಮತ್ತೆ ಗೆದ್ದಿದ್ದು 1989 ರಲ್ಲಿ, ...ೂ ಕಾಂಗ್ರೆಸ್ ಅಭ್ಯರ್ಥಿಯಾಗಿ. ಗೆದ್ದ ಎರಡೇ ವರ್ಷಕ್ಕೆ ಕಾಂಗ್ರೆಸ್ ನಾಯಕರು ...ರಾಯಿಸಿ ಮೈಸೂರು ಲೋಕಸಭಾ ಕ್ಷೇತ್ರಕ್ಕೆ ನಿಲ್ಲಿಸಿದ್ದು; ...ದ್ರಪ್ರಭಾ ಅತ್ತ ಶಾಸಕಿಯಾಗೂ ನೆಲೆಗೊಳ್ಳದೆ, ಮಂತ್ರಿಯೂ ...ದೆ, ಇತ್ತ ದೆಹಲಿಯಲ್ಲಿ ಆಯಕಟ್ಟಿನ ಹುದ್ದೆಗೂ ಬಾರದೆ ...ಂತ್ರ ಸ್ಥಿತಿಯಲ್ಲೇ ಕಾಲಹರಣವಾಯ್ತು.

ಖೋಡೆ-ಶಾಮನೂರು

ಚಂದ್ರಪ್ರಭಾರ ಗಂಡ ಎಂ.ಸಿ. ಮೋಹನ್ ಆ ಕಾಲಕ್ಕೆ ...ಡಿತ. ರೇಸಿಗೆ ಕುದುರೆ ಸಾಕುವ ಹುಚ್ಚು ಬೇರೆ. ಜೊತೆಗೆ ...ತ, ರೇಸು, ಜೂಜು ಎಲ್ಲವೂ ಸೇರಿಕೊಂಡು ಪ್ರತಿ ...ಾವಣೆಯಲ್ಲೂ ಕೂಡಿಟ್ಟ ದುಡ್ಡು ಖರ್ಚಾಯಿತಷ್ಟೆ. ...ದ್ರಪ್ರಭಾ ಆಗಲಿ ಪತಿ ಮೋಹನ್ ಆಗಲಿ ವ್ಯವಹಾರಸ್ಥರಲ್ಲ, ಡೀಲುಗಳು ...ತ್ತಿಲ್ಲ, ಬೆಂಗಳೂರಿನ ನಾಯ್ಡು, ರೆಡ್ಡಿ ರಾಜಕಾರಣಿಗಳಂತೆ ರಿಯಲ್ ಎಸ್ಟೇಟ್, ...ಟಿಬಾ, ಕಾಂಟ್ರಾಕ್ಟುಗಳಿಗೆ ಪಳಗಲಿಲ್ಲ, ಕೂಡಿಟ್ಟ ದುಡ್ಡಾಗಲಿ, ತಂದೆ ಅರಸರು ...ಡಿಟ್ಟ ಆಸ್ತಿಯಾಗಲಿ ಎಷ್ಟು ದಿನ ಅಂತ ಉಳಿದೀತು.

ಇಂದಿರಾ ವಿರುದ್ಧ ಬಂಡೆದ್ದು ಕ್ರಾಂತಿರಂಗ ಕಟ್ಟಿ ಸೋತು ಹೈರಾಣಾಗಿದ್ದ ...ಸು ನಿರ್ಮಲಾ ಪ್ರಸಾದ್ ಎಂಬ ಬ್ರಾಹ್ಮಣರ ಹೆಂಗಸೊಬ್ಬಳ ಮನೆ ...ಕೊಂಡು ಕುಡಿತಕ್ಕೆ ಬಿದ್ದು ಹತಾಶ ಸ್ಥಿತಿಯಲ್ಲೇ ಕೊರಕೊರಗಿ ...ನೆಯುಸಿರೆಳೆದರು. ಹಾಗಂತ ಅರಸು ಮಕ್ಕಳಿಗಾಗಿ ಆಸ್ತಿ ಮಾಡಿಲ್ಲವೆಂದಲ್ಲ, ...ಷ್ಟು ಆಸ್ತಿಪಾಸ್ತಿ ಬಿಟ್ಟೇ ಹೋಗಿದ್ದರು. ಆದರೆ ಆಸ್ತಿಯಿದ್ದದ್ದು ಬೇನಾಮಿಯಾಗಿ. ... ಮೂಲಗಳು ಹೇಳುವಂತೆ ಅರಸರ ವೈಭವದ ದಿನಗಳಲ್ಲಿ ಅವರ ...ಮಾಲಿಗಳೆಲ್ಲದರ ಮೇಜುವಾಣಿ ಮಾಡುತ್ತಿದ್ದವರೆ ಈ ಬೇನಾಮಿ ಆಸ್ತಿಗಳ ...ಲೀಕರಾಗಿದ್ದರು. ಅದೇ ರೀತಿ ಅರಸುರವರ ಗೆಳೆತನದಿಂದಾಗಿಯೇ ...ಮನೂರು ಶಿವಶಂಕರಪ್ಪ ಬಾಪೂಜಿ ಮೆಡಿಕಲ್ ಕಾಲೇಜ್, ಡೆಂಟಲ್ ...ಲೇಜ್, ಇಂಜಿನಿಯರಿಂಗ್ ಕಾಲೇಜ್, ಶಾಮನೂರು ಶುಗರ್ಸ್, ಲಕ್ಷ್ಮಿ ...ರ್ಸ್, ಹೀಗೆ ಉದ್ಯಮ ಬೆಳೆಸಿ ರಾತ್ರೋರಾತ್ರಿ ಕುಬೇರರಾದರು.



ಹಾಗೇ ಬೆಂಗಳೂರಿನಲ್ಲಿ ಅರಸು ನೆಚ್ಚಿಕೊಂಡಿದ್ದು ಲಿಕ್ಕರ್ ದೊರೆ ಹರಿ ಖೋಡೆಯನ್ನು. ಸದ್ಯ ಶಾಸಕರ ಭವನದ ಹಿಂದಿನ ಗಾಲ್ಫ್ ಕ್ಲಬ್ ಮತ್ತು ಸೋಫಿಯಾ ಸ್ಕೂಲ್ ಪಕ್ಕದ ಹರಿ ಖೋಡೆಯ ಅಡ್ಡೆಯಾದ ಐದೆಕರೆಯ ಸೊತ್ತು ಕೂಡ ಅರಸರದೇ ಬೇನಾಮಿ ಸೊತ್ತಾಗಿತ್ತೆಂಬುದು ಬಲ್ಲವರ ಮಾತು. ಹಾಗೊಂದು ಪಕ್ಷ ಹರಿ ಖೋಡೆಯಾಗಲಿ, ಶಾಮನೂರು ಶಿವಶಂಕರಪ್ಪನವರಾಗಲಿ ಅರಸರ ಬೇನಾಮಿ ಆಸ್ತಿಯನ್ನು ಮುಂದಾಯಿಸದೇ ಇದ್ದರೂ ಅವರ ಕೃಪೆಯಿಂದಾಗಿಯೇ ಉದ್ಧಾರಗೊಂಡ ಋಣವಂತೂ ಇದ್ದೇ ಇತ್ತು. ಕನಿಷ್ಠ ಅರಸರ ಮಕ್ಕಳು-ತಮ್ಮ ಬದುಕಿಗಾಗಿ ಕಂಡಕಂಡವರೆದುರು ಕೈಚಾಚಿ ತಂದೆ ಬಾಳಿಬದುಕಿದ ಮನೆಯನ್ನೇ ಒತ್ತೆಯಿಟ್ಟು ಸಾಲ ಪಡೆಯುವ ದುರ್ಗತಿಗಿಳಿದದ್ದು ಗೊತ್ತಾದ ಮೇಲಾದರೂ ಅವರ ನೆರವಿಗೆ ನಿಂತು ಗುರುವಿನ ಋಣ ತೀರಿಸಬಹುದಿತ್ತು.

ಮಗ ಮಂಜನ ಶೋಕಿ

ದುಡ್ಡು, ಆಸ್ತಿ, ಅಂತಸ್ತಿನ ಮುಂದೆ ಮನುಷ್ಯ ಸಂಬಂಧಕ್ಕೆ ಏನು ಬೆಲೆ? ಹರಿ ಖೋಡೆ ಅರಸರ ಕೊನೆ ಮಗಳು ಭಾರತಿ ಅರಸನ್ನು ತನ್ನ ರಾಜಕೀಯದ ತೀಟೆಗೆ ಬಳಸಿಕೊಂಡರೆ ಚಂದ್ರಪ್ರಭಾರ ಬದುಕಿನಲ್ಲಾದ ಒಂದೊಂದೇ ದುರಂತಗಳೆಲ್ಲ ಆಕೆಯನ್ನು ಪದೇಪದೇ ಶಾಮನೂರು ಧಣಿಯೆದುರು ಕೈಯೊಡ್ಡುವಂತೆ ಮಾಡಿತು. ಗಂಡ ಎಂ.ಸಿ. ಮೋಹನ್ ಕುಡಿತ, ರೇಸಿಗೆ ಬಿದ್ದೇ ದಿವಾಳಿಯಾದ. ಅರಸರು ಬದುಕಿದ್ದಾಗಲೇ ಶರ್ಮಾ ಟ್ರಾವಲ್ಸ್‌ನ ಟ್ರಾನ್ಸ್‌ಪೋರ್ಟ್ ದಂಧೆಯಲ್ಲಿ ಮೋಹನ್ ಪಾಲುದಾರರಾಗಿದ್ದರು. ಮೋಹನ್‌ನ ದೌರ್ಬಲ್ಯವನ್ನೇ ಬಳಸಿಕೊಂಡ ಟ್ರಾವಲ್ಸ್ ಧಣಿ ಶರ್ಮಾ ದೊಡ್ಡ ಮೊತ್ತವೊಂದಕ್ಕೆ ಕೈಯಿಟ್ಟು ತನ್ನ ಟ್ರಾನ್ಸ್‌ಪೋರ್ಟ್ ದಂಧೆಯ ಪಾಲುದಾರಿಕೆಯಿಂದಲೇ ಹೊರದಬ್ಬಿದ.

2004ರ ಹೊತ್ತಿಗೆ ಚಂದ್ರಪ್ರಭಾ ರಾಜಕೀಯವಾಗಿ ನಿರುದ್ಯೋಗಿಯಾಗಿ ಕಾಂಗ್ರೆಸ್ಸಿಗೂ ಸಲ್ಲದೆ ಜೆಡಿಎಸ್‌ಗೂ ಹೋಗಲಾಗದೆ, ಇತ್ತ ಗಂಡನ ಆದಾಯವೂ ಇಲ್ಲದೆ ಹತಾಶಸ್ಥಿತಿ ತಲುಪಿದ್ದರು. ಇನ್ನು ಮಕ್ಕಳಾದರೂ ಬರಕತ್ತಾಗಿದ್ದರೆ ಆ ಮಾತು ಬೇರೆ. ಚಂದ್ರಪ್ರಭಾ-ಮೋಹನ್ ದಂಪತಿಗಳ ಮೂವರು ಮಕ್ಕಳ ಪೈಕಿ ಹಿರಿಮಗ ಮಂಜುನಾಥ್ ಸುಖಕ್ಕೆ ಬಿದ್ದೇ ಎಕ್ಕುಟ್ಟಿಹೋದ. ಪ್ರತಿನಿತ್ಯ ಬ್ರಿಗೇಡ್ ರಸ್ತೆಯ ಚೈನೀಸ್ ರೆಸ್ಟೋರೆಂಟುಗಳಿಗೆ ಹೋಗಿ ಪಾರ್ಟಿ ಮಾಡುವುದು. ರಜಾ ದಿನಗಳಲ್ಲಿ ಗೋವಾ-ಪಾಂಡಿಚೇರಿಗೆ ಹೋಗಿ ಶೋಕಿ ಮಾಡುವುದು. ಕೆಲಸವಿಲ್ಲ, ಕಸುಬು ಗೊತ್ತಿಲ್ಲ.

ಇಂಥ ಕ್ಷೋಭೆಗೆ ಬಿದ್ದಾಗಲೇ ಮಂಜುನಾಥ್ ಅರಸು ಬದುಕಿನಲ್ಲಿ ಚೀನಿ ಹೆಂಗಸೊಬ್ಬಳು ಕಾಲಿಟ್ಟಳು. ಆಕೆಯ ಹೆಸರು ಇವಾಂಗ್ ಚು. ಬೆಂಗಳೂರೊಂದರಲ್ಲೇ ಆಕೆಗೆ ಐದು ಚೈನೀಸ್ ರೆಸ್ಟೋರೆಂಟುಗಳಿವೆ. ಯಾರೋ ಚೀನಿಯೊಬ್ಬನಿಗೆ ಡೈವೋರ್ಸ್ ಕೊಟ್ಟು ಆತನಿಂದ ಇಬ್ಬರು ಮಕ್ಕಳು, ಆನಂತರ ಮುಸ್ಲಿಂ ಒಬ್ಬನಿಂದ ಮಗ. ತದನಂತರ ಟಿಬೆಟಿಯನ್ ಒಬ್ಬನ ಜೊತೆ ಮದುವೆ. ಅಂತಿಮವಾಗಿ ಆತನಿಗೂ ಡೈವೋರ್ಸ್ ಕೊಟ್ಟು ಇವಾಂಗ್ ಚು ಎಂಟ್ರಿ ಕೊಟ್ಟಿದ್ದು ಅರಸರ ಮೊಮ್ಮಗ ಮಂಜುನಾಥನ ಬದುಕಿಗೆ!





ಮನೆ ಒತ್ತೆ

ಆಕೆಯ ಸಹವಾಸ ದೋಷದ ಫಲವೆಂಬಂತೆ ತಮಿಳುನಾಡಿನ ಹೊಸೂರಿನಲ್ಲೊಂದು ಚೈನೀಸ್ ಡಾಬಾ ಆರಂಭಿಸಿದ ಮಂಜುನಾಥ್ 2004 ರ ಹೊತ್ತಿಗೆ ಮೈತುಂಬಾ ಸಾಲ ಹೊತ್ತಿಕೊಂಡಿದ್ದ. ಅದೇ ಹೊತ್ತಿಗೆ ತಂದೆ ಮೋಹನ್ ಕೂಡ ದಿವಾಳಿಯಂಚಿಗೆ ಬಂದು ಹಾಸಿಗೆ ಹಿಡಿದರು. ಹೇಗೋ ಬಾಧೆಬಿದ್ದು ಮಗಳು ಅನುಪಮಾಳನ್ನು ಮೈಸೂರಿನ ಹರೀಶ್ ಕಾಂತರಾಜ್ ಅರಸ್ ಎಂಬ ಸಾಫ್ಟ್‌ವೇರ್ ಇಂಜಿನಿಯರ್‌ಗೆ ಕೊಟ್ಟು ಚಂದ್ರಪ್ರಭಾ ಮದುವೆ ಮುಗಿಸಿದರಾದರೂ ಮದುವೆಗೆಂದು ಶಾಮನೂರು ಶಿವಶಂಕರಪ್ಪರಿಂದ 25 ಲಕ್ಷ ಸಾಲವಾಗಿತ್ತು.

ಮಗಳ ಮದುವೆಗೆ ಸಾಲ, ಮಗನ ಶೋಕಿಗೆ ಸಾಲ, ಗಂಡನ ಕಾಯಿಲೆಗೆ ಸಾಲ, ಮನೆ ಖರ್ಚಿಗೆ ಸಾಲ-ಹೀಗೆ ಪ್ರತಿಯೊಂದಕ್ಕೂ, ಶಾಮನೂರು ಧಣಿಯೆದುರು ಕೈಚಾಚಬೇಕಾದ ದುರ್ಗತಿಗೆ ಅರಸು ಕುಟುಂಬ ಬಂದಾಗಿತ್ತು. ಮತ್ತೊಂದೆಡೆ ತಂಗಿ ಭಾರತಿ ಅರಸು ಕೂಡ ಸುಖಕ್ಕೆ ಬಿದ್ದೇ ದಿವಾಳಿಯಂಚಿಗೆ ಬಂದಿದ್ದಳು. ಭಾರತಿ ಅರಸರ ಪತಿ ನಾಗರಾಜ್ ಅರಸು ಕೂಡ ಕುಡಿತ, ಜೂಜು, ಶೋಕಿಗೆ ಬಿದ್ದು ಹಾಸಿಗೆ ಹಿಡಿದ. 2003 ರ ಹೊತ್ತಿಗೆ ಚಂದ್ರಪ್ರಭಾ ಶಾಮನೂರು ದೊರೆಯಿಂದ ಮಾಡಿದ ಸಾಲದ ಒಟ್ಟು ಮೊತ್ತ 50 ಲಕ್ಷಕ್ಕೇರಿತ್ತು.


ಇದೇ ಹೊತ್ತಿಗೆ ಹರಿ ಖೋಡೆ ತಮ್ಮ ನಾರಾಯಣಸಾ, ಮನೆ ಹಿಂದಿದ್ದ ಇಂಡಿಯನ್ ಎಕ್ಸ್‌ಪ್ರೆಸ್ ಧಣಿ ಗೋಯೆಂಕಾ, ತಮಿಳುನಾಡಿನ ಹಾರ್ಸ್ ಬ್ರೀಡರ್ ನಟರಾಜ್ ಚೆಟ್ಟಿಯಾರ್ ಮುಂತಾದವರಿಂದಲೂ ಚಂದ್ರಪ್ರಭಾ ಲಕ್ಷಗಟ್ಟಲೆ ಸಾಲ ಎತ್ತಿದ್ದರು. ಮೊದಲೇ 50 ಲಕ್ಷ ಸಾಲ ಪಡೆದಿದ್ದ ಶಾಮನೂರು ಧಣಿಗೆ ಮತ್ತೆ 35 ಲಕ್ಷದ ಬೇಡಿಕೆಯಿತ್ತು ಸಾಲದ ಮೊತ್ತವನ್ನು 85 ಲಕ್ಷವಾಗಿಸಿಕೊಂಡಾಗಲೇ ಅರಸರ ಬಂಗಲೆ ಕೈ ತಪ್ಪುವ ಹಂತಕ್ಕೆ ಬಂದಂತಾಗಿತ್ತು.

ಸರಿಸುಮಾರು 3 ಸಾವಿರ ಕೋಟಿಗೆ ಬೆಲೆಬಾಳುವ, ಮಗನಿಗೊಂದು ತನಗೊಂದು ಓಡಾಟಕ್ಕೆಂದೇ ಎರಡೆರಡು ಖಾಸಗಿ ವಿಮಾನಗಳುಳ್ಳ ಶಾಮನೂರುಗೆ ಗುರುವಿನ ಮಗಳಿಗೆಂದು ಕೊಟ್ಟಿದ್ದ 85 ಲಕ್ಷ ಯಾವ ಲೆಕ್ಕ?

ಆದರೆ ಬಂಗಲೆಯ ಮೇಲೆ ಕಣ್ಣಿತ್ತಲ್ಲ, ಕೊಟ್ಟ ಸಾಲಕ್ಕೆ ಮಗ ಮಲ್ಲಿಕಾರ್ಜುನನನ್ನು ಬಿಟ್ಟು ಪದೇಪದೇ ಒತ್ತಡ ತಂದರು. ಅದಕ್ಕೆಂದು ಮಲ್ಲಿಕಾರ್ಜುನ್ ಛೂಬಿಟ್ಟಿದ್ದು ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಬ್ಬಾರ್ ಮತ್ತು ದಾವಣಗೆರೆಯ ಯುವ ಕಾಂಗ್ರೆಸ್ ನಾಯಕ ಮತ್ತು ಮಾಜಿ ನಗರಸಭಾಧ್ಯಕ್ಷ ದಿನೇಶ್ ಶೆಟ್ಟಿಯನ್ನು. ಮಂಗಳೂರು ಮೂಲದ ಬೆಂಗಳೂರಿನ ಮಾಜಿ ಭೂಗತ ದೊರೆಯೊಬ್ಬನನ್ನು ಮುಂದಿಟ್ಟುಕೊಂಡೇ ಕೊಟ್ಟ ಸಾಲಕ್ಕೆ ಸದಾಶಿವನಗರದ ಬಂಗಲೆಯನ್ನು ಖರೀದಿಗೆ ಕೇಳಿದ ದಿನೇಶ್ ಶೆಟ್ಟಿ ಅಂತಿಮವಾಗಿ ಮೂವತ್ತು ಕೋಟಿಗೆ ಬಂಗಲೆ ಬಿಟ್ಟು ಕೊಡುವಂತೆ ಒಪ್ಪಿಸಿಬಿಟ್ಟ. ಕೊಟ್ಟ ಸಾಲವಾದ 85 ಲಕ್ಷವನ್ನೇ ಮುಂಗಡವೆಂದು ಪರಿಗಣಿಸಿ ಮಲ್ಲಿಯ ಪತ್ನಿ ಪ್ರಭಾರ ಹೆಸರಿಗೊಂದು ಕ್ರಯ ಕರಾರುಪತ್ರವನ್ನೂ ಮಾಡಿಸಿಕೊಟ್ಟ.

ಮಗನ ದುರಂತ

ಇದಿಷ್ಟೇ ಆಗಿದ್ದರೆ ಚಂದ್ರಪ್ರಭಾ ಜಗ್ಗುತ್ತಿರಲಿಲ್ಲ. 2007 ರ ಹೊತ್ತಿಗೆ ಅವರ ಪತಿ ಮೋಹನ್ ವಿಪರೀತ ಕುಡಿತದ ಫಲವಾಗಿ ಹಾಸಿಗೆ ಹಿಡಿದವರು ಇಲಸಲ್ಲದ ವ್ಯಾಧಿಗೆ ಬಿದ್ದು ಕೊನೆಯುಸಿರೆಳೆದರು. ಇದಾಗಿ ಕೆಲದಿನಕ್ಕೇ ಹುಣಸೂರಿನಲ್ಲಿ ಚುನಾವಣಾ ತಯಾರಿಗೆಂದು ಹೋದ ಚಂದ್ರಪ್ರಭಾರ ಕಾರಿಗೆ ನಿಗೂಢ ಲಾರಿಯೊಂದು ಬಂದು ಡಿಕ್ಕಿ ಹೊಡೆದು ಅವರ ಎರಡೂ ಕಾಲಿನ ಮೂಳೆ ಮುರಿದಿತ್ತು. ಮೈಸೂರಿನ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ತಿಂಗಳಾನುಗಟ್ಟಲೇ ಚಿಕಿತ್ಸೆ ಪಡೆದು ಮುರಿದ ಕಾಲು ಸರಿ ಹೋಯಿತಾದರೂ ವಿಪರೀತ ಬೊಜ್ಜು ಮತ್ತು ಮೈತೂಕದಿಂದಾಗಿ ಅವರ ಕಾಲುಗಳೇ ತೂಕ ತಡೆಯಲಾರದೇ ನಿತ್ರಾಣಗೊಂಡವು.



ಎದ್ದರೆ ಕೂರಲಾಗದೆ, ಕುಂತರೆ ನಿಲ್ಲಲಾಗದೆ ದೇಹದ ತೂಕ ತಾಳಲಾರದೇ ಹಾಸಿಗೆ ಹಿಡಿದ ಚಂದ್ರಪ್ರಭಾಗೆ ಚಿತ್ರಲೇಖಾ ಅರಸು ಕೊಲೆ ಕೇಸಿನಲ್ಲಿ ತಂಗಿ ಭಾರತಿ ಅರಸು ಜೈಲುಪಾಲಾಗಿದ್ದು ಒಂದು ಆಘಾತವಾದರೆ, ಶೋಕಿ, ಸುಖ, ಡ್ರಗ್ಸ್, ಕುಡಿತಕ್ಕೇ ಬಿದ್ದೇ ಕೊನೇ ಮಗ ಅಜಯ್ ಅರಸು ನಿಗೂಢ ವ್ಯಾಧಿಗೆ ಸಿಲುಕಿ ಸತ್ತದ್ದು ಸಹಿಸಲಸಾಧ್ಯ ಪೆಟ್ಟಾಯಿತು. ಮಗಳು ಮದುವೆಯಾಗಿ ಮೈಸೂರು ಸೇರಿಕೊಂಡಳು. ಹಿರಿಮಗ ಮಂಜುನಾಥ್ ತನಗಿಂತ ಹತ್ತು ವರ್ಷ ಹಿರಿಯಳಾಗಿದ್ದ ಚೈನೀಸ್ ಮಹಿಳೆಯ ಜೊತೆಬಿದ್ದು ತಮಿಳುನಾಡಿಗೆ ವಲಸೆಹೋದ. ತಂಗಿ ಜೈಲು ಪಾಲಾದಳು. ಪತಿ ತೀರಿಕೊಂಡರು. ಕೊನೇ ಮಗನನ್ನು ಸುಖವೇ ತಿಂದು ಹಾಕಿತು. ಆದಾಯವಿಲ್ಲ, ವ್ಯಾಪಾರವಿಲ್ಲ, ಅಧಿಕಾರವಂತೂ ಸಾಧ್ಯವೇ ಇಲ್ಲ. ಇಂಥ ದುರ್ಗತಿಯಲ್ಲೇ ಚಂದ್ರಪ್ರಭಾ ಶಾಮನೂರು ಸಾಲದ ಹೊರೆ ತಾಳದೆ ತಂದೆಯ ಸದಾಶಿವನಗರದ ಬಂಗಲೆ ಮಾರಿಹಾಕಲು ನಿರ್ಧರಿಸಿದ್ದು.

ಮಲ್ಲೇಶ್ವರದ ಸಬ್ ರಿಜಿಸ್ಟ್ರಾರ್ ಕಚೇರಿಯ ದಾಖಲೆಗಳೇ ಹೇಳುವಂತೆ 130x85 ಅಳತೆಯ ಹನ್ನೊಂದೂವರೆ ಸಾವಿರ ಚದುರ ಅಡಿಗಳ ಶ್ರೀಶಕ್ತಿ ಬಂಗಲೆಯನ್ನು ಮಲ್ಲಿಕಾರ್ಜುನ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಖರೀದಿಸಿದ್ದು 30 ಕೋಟಿಗೆ. ಇದು ಮಾರುಕಟ್ಟೆ ರೇಟಾದರೆ ಸಬ್ ರಿಜಿಸ್ಟ್ರಾರ್ ಕಚೇರಿಯ ದಾಖಲೆಗಳಲ್ಲಿ ಹದಿನೆಂಟೂವರೆ ಕೋಟಿ ತೋರಿಸಲಾಗಿದೆ. ಅದರರ್ಥ ಸರ್ಕಾರಕ್ಕೆ 18.5 ಕೋಟಿ ತೋರಿಸಿ ಉಳಿಕೆ 11.5 ಕೋಟಿಯನ್ನು ಬ್ಲಾಕ್ ಆಗಿ ನೀಡಲಾಗಿದೆ. ಹಾಸಿಗೆಯಿಂದ ಏಳಲಾಗದ ಸ್ಥಿತಿಯಲ್ಲಿ ಚಂದ್ರಪ್ರಭಾ ಇರುವುದರಿಂದ ಮಗ ಮಂಜುನಾಥ್ ಮತ್ತು ಮಗಳು ಅನುಪಮಾರೇ ತಾಯಿಯ ಪವರ್ ಆಫ್ ಅಟಾರ್ನಿ ಪಡೆದು ಪ್ರಭಾ ಮಲ್ಲಿಕಾರ್ಜುನ್ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿದ್ದಾರೆ.

ಮೊನ್ನೆ ಆಗಸ್ಟ್ 27 ರಂದು ಮಲ್ಲೇಶ್ವರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಆಸ್ತಿ ಪರಭಾರೆಯಾಗಿದ್ದೇ ತಡ, ಚಂದ್ರಪ್ರಭಾ ಮನೆ ಖಾಲಿ ಮಾಡಿಕೊಂಡು ಮೈಸೂರು ಸೇರಿಕೊಂಡರೆ ಶಾಮನೂರು ಮಲ್ಲಿಕಾರ್ಜುನರ ಸಿಬ್ಬಂದಿ ಬಂದಿದ್ದೇ ಅರಸರ ಅಳಿದುಳಿದ ಪಳೆಯುಳಿಗೆಗಳನ್ನೆಲ್ಲ ಖಾಲಿ ಮಾಡಿದ್ದಾರೆ.

ರಾಜಧಾನಿ ಬೆಂಗಳೂರಿನ ಮಟ್ಟಿಗಿನ್ನು ಅರಸು ನೆನಪು ಮಾತ್ರ. ಅವರು ಬಳಿ ಬದುಕಿದ ಬಂಗಲೆ 'ಶ್ರೀ ಶಕ್ತಿ' ಅಂತಿಮವಾಗಿ ಪ್ರಬಲ ಲಿಂಗಾಯತ ನಾಯಕ ಶಾಮನೂರು ಕೈವಶವಾಗುವುದಕ್ಕೂ, ಅರಸು ಕುಟುಂಬ ಬೆಂಗಳೂರನ್ನೇ ತೊರೆದು ಹೋಗುವುದಕ್ಕೂ, ಕೇಸರಿ ಸರ್ಕಾರಕ್ಕೂ, ಮತ್ತು ಹಿಂದುಳಿದ ವರ್ಗಗಳ ದುರ್ಗತಿಗೂ ಒಂದಕ್ಕೊಂದು ಎಂಥಾ ಸಂಬಂಧವಲ್ಲವೆ?

● ರಾ.ಸೋಮನಾಥ್


ಶಂಕಿತರನ್ನು ಬಂಧಿಸಿದ್ದು ಈ ಮನೆಯಿಂದ, ಮಾರುತಿ ನಗರದಿಂದಲ್ಲ

ಉಗ್ರರ ಬಂಧನ
ಜಿತೇಂದ್ರನ ಸಾಹಸವೂ ಉತ್ತರವಿಲ್ಲದ ಪ್ರಶ್ನೆಗಳೂ

● ಪಾರ್ವತೀ


ಮೊಹಮ್ಮದ್ ಅಕ್ರಂ, ಒಬೈದುದ್ ರಹಮಾನ್, ಸಿದ್ದಿಕ್ಕಿ, ವಾಹೀದ್ ಹುಸೇನ್

ಒಟ್ಟಾರೆ ಹದಿನೆಂಟು ಬಂಧನ!

ಬೆಂಗಳೂರು ಪೊಲೀಸರು ನೀರಿನ ಹೂಜಿಯಿಂದ ಮೀನನ್ನು ಹಿಡಿದಷ್ಟೇ ಸಲೀಸಾಗಿ ಹೂಜಿ ಭಯೋತ್ಪಾದಕ ಸಂಘಟನೆಯ ಒಂದೂವರೆ ಡಜನ್ ಉಗ್ರಗಾಮಿಗಳನ್ನು ಅರೆಸ್ಟ್ ಮಾಡಿದ್ದಾರೆ.

ಇದರ ಒಳಗಿನ ಹೂರಣ ಅದೇನೇ ಇರಲಿ, ಪೊಲೀಸರ ಈ ಸಾಹಸ ಕಾರ್ಯಕ್ಕೆ ಮೆಚ್ಚುಗೆ ಸೂಚಿಸಿ ಅರೆಸ್ಟಾಗಿರುವ ಶಂಕಿತ ಆರೋಪಿಗಳ ಬಗ್ಗೆ ಸರಿಯಾದ ತನಿಖೆಯಾಗಿ ತಪ್ಪಿತಸ್ಥರೆಂದು ಸಾಬೀತಾದವರಿಗೆ ತಕ್ಕ ಶಿಕ್ಷೆಯಾಗುತ್ತದೆ ಎಂದೇ ಆಶಿಸೋಣ.

ಹಾಗೆ ನೋಡಿದರೆ ಕರ್ನಾಟಕದಲ್ಲಿ ಕಳೆದ ಐದಾರು ವರ್ಷಗಳಿಂದ ಅದರಲ್ಲೂ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದಾಗಿನಿಂದ ಇಸ್ಲಾಮಿಕ್ ಟೆರರಿಸಂ ನೆಟ್‌ವರ್ಕ್ ಅನ್ನು ಹುಡುಕುವ, ಶಂಕಿತರನ್ನು ಬಂಧಿಸಿ ಜೈಲಿಗೆ ತಳ್ಳುವ ಕೆಲಸ ಯಶಸ್ವಿಯಾಗಿ ನಡೆಯುತ್ತಿದೆ. ಅದೇ ಸಮಯದಲ್ಲಿ ಸಂಘ ಪರಿವಾರದ ಭಯೋತ್ಪಾದಕರು ನಡೆಸಿದ ಚರ್ಚ್ ದಾಳಿ, ಬಾಂಬ್ ದಾಳಿಗಳು, ಹಲ್ಲೆ ದೌರ್ಜನ್ಯದ ಪ್ರಕರಣಗಳ ಕೇಸ್‌ಗಳನ್ನು ಕ್ಯಾಬಿನೆಟ್ ಸಭೆಗಳಲ್ಲೇ ರದ್ದುಪಡಿಸಿ ಹಿಂಪಡೆಯುವ ತೀರ್ಮಾನಗಳೂ ಜಾರಿಯಾಗುತ್ತಿವೆ.

ಈಗ ಬಂಧನಕ್ಕೊಳಗಾಗಿರುವ ಇಂಗ್ಲಿಷ್ ಪತ್ರಕರ್ತ ಮಾತೂರ್ ರೆಹಮಾನ್ ಸಿದ್ದಿಖಿ, ಪ್ರಮುಖ ಆರೋಪಿಗಳಾದ ಅಬ್ದುಲ್ ಹಕೀಂ ಜಮಾದಾರ್, ಶೋಯಬ್ ಅಹಮದ್ ಮಿರ್ಜಾ ಹಾಗೂ ನಾಪತ್ತೆಯಾಗಿರುವ ಡಾ|| ಜಾಕೀರ್ ಅಲಿಯಾಸ್ ಉಸ್ತಾದ್ ಮುಂತಾದವರು ಪೊಲೀಸರ ಶಂಕೆಯ ಪ್ರಕಾರ ಕರ್ನಾಟಕದಲ್ಲಿ ಬಹಳ ದೊಡ್ಡ ಅನಾಹುತಗಳನ್ನೇ ಸೃಷ್ಟಿಸಲು ತಯಾರಾಗಿದ್ದಂತೆ ಕಾಣುತ್ತದೆ. ಅಂತಹ ಸಂಭವನೀಯ ಅನಾಹುತವನ್ನು ತಪ್ಪಿಸಿದ್ದಕ್ಕಾಗಿ ರಾಜ್ಯ ಪೊಲೀಸರನ್ನು ಅಭಿನಂದಿಸೋಣ.

ಆದರೆ,

ಈ ಇಡೀ ಕಾರ್ಯಾಚರಣೆ ನಡೆದಿರುವ ರೀತಿ, ಬಂಧಿತರ ಬಳಿ ಸಿಕ್ಕಿರುವ ವಸ್ತುಗಳು, ಮತ್ತವರ ಉದ್ದೇಶಗಳ ಬಗ್ಗೆ ಇನ್ನಷ್ಟು ಹೆಚ್ಚಿನ ವಿವರಗಳನ್ನು ಕೇಳುತ್ತಿವೆ.

ಸಿಟಿ ಪೊಲೀಸರು ಈ ಬಗ್ಗೆ ಗಮನಹರಿಸಿ ಸರಿಯಾದ ಸಾಕ್ಷಿ ಪುರಾವೆಗಳನ್ನು ಸಂಗ್ರಹಿಸಿಕೊಂಡರೆ ಮಾತ್ರ ದುಷ್ಕರ್ಮಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗಲು ಸಾಧ್ಯ. ಅಲ್ಲಿ ನಡೆದಿರುವುದು ಒಂದಾದರೆ ಪೊಲೀಸರು ಎರಡಾಗಿಸಿ ಕೊನೆಗೆ ಮೀಡಿಯಾಗಳು ಅದನ್ನೇ ನಾಲ್ಕಾಗಿಸಿ ಪ್ರಚಾರ ಮಾಡುತ್ತಿರುವುದರಿಂದ ಪೊಲೀಸರು ಕೊಂಚ ಎಚ್ಚರಿಕೆಯಿಂದ ಮುಂದುವರೆಯುವುದು ಈ ಹಂತದಲ್ಲಿ ಉತ್ತಮ ಎನಿಸುತ್ತದೆ.

ಉದಾಹರಣೆಗೆ ಪ್ರತಾಪ ಸಿಮ್ಮನೆಂಬ ಕರ್ನಾಟಕದ ಪತ್ರಕರ್ತ ಬಾಲಕನನ್ನು ಮುಗಿಸಿಬಿಡಲು ದೂರದ ಪಾಕಿಸ್ತಾನದ ಐಎಸ್‌ಐ ಉನ್ನತ ಅಧಿಕಾರಿಯೊಬ್ಬ ಮೀಟಿಂಗ್ ನಡೆಸುತ್ತಾನೆ ಎಂದರೆ ಅದು ಕೊಂಚ ಉತ್ಪ್ರೇಕ್ಷೆ. ಮತ್ತದೇ ವೇಳೆ ಈ ಶಂಕಿತರ ಬಳಿ ಕುರಾನ್, ಜಿಹಾದಿ ಸಾಹಿತ್ಯ ಗುಜರಾತ್ ಮುಸ್ಲಿಮರ ಹತ್ಯಾಕಾಂಡದ ವೀಡಿಯೊ ಕ್ಲಿಪಿಂಗ್‌ಗಳಿದ್ದವು ಎಂಬುದು ವಾಸ್ತವವಾಗಿರಲಿಕ್ಕೂ ಸಾಕು.

ಇನ್ನೂ ಬಂಧಿತರ ಬಳಿ ಸಿಕ್ಕಿತೆನ್ನಲಾಗಿರುವ ಪಿಸ್ತೂಲಿನ ಅಪ್ಪ-ಅಮ್ಮ ಯಾರೆಂಬುದನ್ನು ಪೊಲೀಸರೇ ಪತ್ತೆಹಚ್ಚಬೇಕಿದೆ.

ಉಳಿದಂತೆ ಶಂಕಿತ ಉಗ್ರರನ್ನು ಎಸಿಪಿ ಜಿತೇಂದ್ರನಾಥ್ ಬಸವೇಶ್ವರ ನಗರದ ರಸ್ತೆಯಲ್ಲಿ ಮಧ್ಯಾಹ್ನ 12.30ಕ್ಕೆ ಸರಿಯಾಗಿ ಜಂಪ್ ಮಾಡಿ ಹಿಡಿದು ಹೆಡೆ ಮುರಿ ಕಟ್ಟಿದರೆಂಬ ಮಾತು ತೀರಾ ಉತ್ಪ್ರೇಕ್ಷೆಯದು. ಇವರ ಬಂಧನವಾದದ್ದು ಆಗಸ್ಟ್ 29ರ ಬೆಳಿಗ್ಗೆ 9ಕ್ಕೆ ಜೆಪಿ ನಗರದಲ್ಲೇ ಎಂಬುದು ವಾಸ್ತವ ಸಂಗತಿ.

ಜಿತೇಂದ್ರನ ಸಾಹಸಗಳು

ಸಿಸಿಬಿಯಲ್ಲಿ ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್ ಆಗಿರುವ ಕೆ.ಎನ್. ಜಿತೇಂದ್ರನಾಥ್ ಓರ್ವ ದಕ್ಷ ಅಧಿಕಾರಿ ಎಂಬುದಾಗಿ ಹೆಸರು ಪಡೆದಿದ್ದಾರೆ. ಅವರಿಗೆ ಆಗಸ್ಟ್ 26ನೇ ತಾರೀಖು ಯಾರೋ ಮಾಹಿತಿದಾರರು ಫೋನ್ ಮಾಡಿ "...ಹೀಗೀಗೆ ಲಷ್ಕರ್-ಎ-ತೋಯ ಹಾಗೂ ಬಾಂಗ್ಲಾದೇಶದ ಹೂಜಿ ಉಗ್ರ ಸಂಘಟನೆಗಳೊಂದಿ ಸಂಪರ್ಕ ಸಾಧಿಸಿರುವ ಕೆಲವರು ಬೆಂಗಳೂರಿನ ಜ ನಗರದಲ್ಲಿದ್ದು ರಾಜ್ಯದ ಕೆಲ ಪ್ರಮುಖರನ್ನು ಹತ್ಯೆ ಮಾಡು ಸಂಚು ನಡೆಸಿದ್ದಾರೆ" ಎಂದು ಸುದ್ದಿ ನೀಡಿದ್ದಾರೆ.

ಇದು ಈ ಪ್ರಕರಣದ ಮೊದಲ ಎಪಿಸೋಡ್.

ಎಸಿಪಿ ಜಿತೇಂದ್ರನಾಥ್ ಶಂಕಿತರನ್ನು ಅರೆಸ್ಟ್ ಮಾಡಿ ನಂತರ ಅವರನ್ನು ಹೆಚ್ಚಿನ ತನಿಖೆಗಾಗಿ ಪೊಲೀಸರ ಕಸ್ಟಡಿ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡುವಾಗ



ವಿಚಾರ ಪ್ರಸ್ತಾಪಿಸಿ "ತಮಗೆ ಆಗಸ್ಟ್ 26ರಂದು ಸಿ ಪಿತೂರಿಯ ಮಾಹಿತಿಯನ್ನು ಆಗಸ್ಟ್ 29ನೇ ತಾರೀಖ ತಮ್ಮ ಮೇಲಧಿಕಾರಿಗಳ ಗಮನಕ್ಕೆ ತಂದಿದ್ದಾಗಿ" ಲಿಖಿ ಹೇಳಿಕೆ ನೀಡಿದ್ದಾರೆ.

ಅಂದರೆ ಮಾಹಿತಿ ಸಿಕ್ಕ ಮೂರು ದಿನದ ನಂತ ಹೈಯರ್ ಆಫೀಸರ್‌ಗಳ ಗಮನಕ್ಕೆ ತಂದರೆಂಬ ಮಾತಿದ ಇದು ಸ್ವಲ್ಪ ಗೊಂದಲಕಾರಿಯಾಗಿದೆ. ಏಕೆಂದ ಲಷ್ಕರ್-ಎ-ತೋಯ್ಬಾ ಆಗಲಿ, ಹೂಜಿ ಉಗ್ರ ಸಂಘಟನೆ ಬಗ್ಗೆಯಾಗಲಿ ಕೇಳಿ ತಿಳಿದಿರುವವರಿಗೆ ಅವರ ಕಾರ್ಯಾಚರ ವಿಧಾನಗಳ ಬಗ್ಗೆ ಸ್ವಲ್ಪವಾದರೂ ತಿಳಿದಿರುತ್ತದೆ. ಅವರೊಮ್ಮೆ ತೀರ್ಮಾನಿಸಿ ಹೊರಟರೆಂದರೆ ಪಾಕಿಸ್ತಾನದ ಸೇನೆಯೆ ಅಡ್ಡ ಬಂದರೂ ಕೇರ್ ಮಾಡದೆ ನುಗ್ಗುತ್ತಾರೆ. ಪಾಕ್‌ನಲ್ಲಿರು ಅಮೆರಿಕಾದ ಕಮಾಂಡೋಗಳನ್ನೇ ತಡವಿ ಸಂಘರ್ಷ ನಿಲ್ಲುತ್ತಾರೆ. ಅಂತಹ ಉಗ್ರರೊಂದಿಗೆ ಸಂಪರ್ಕ ಹೊಂದಿದ್ದಾರೆಂಬ ಶಂಕೆಯಿದ್ದ ಬೆಂಗಳೂರಿನ ಉಗ್ರರನ ಜಿತೇಂದ್ರನಾಥ್ ಸಲೀಸಾಗಿ ಭಾವಿಸಿದ್ದು ಆಶ್ಚರ್ಯಕರವಾಗಿದ

ಪ್ರತಾಪ ಸಿಮ್ಮನನ್ನು ಕೊಲ್ಲಲು ಆಗಸ್ಟ್ 29ರ ಬೆಳ ಉಗ್ರರು ಬಸವೇಶ್ವರ ನಗರದ ಮಾರುತಿ ನಗರದ 3ನೆ ಮೈನ್ ರೋಡಿನ, 3ನೇ ಕ್ರಾಸಿಗೆ ಬರುತ್ತಾರೆಂಬುದ ಜಿತೇಂದ್ರನಿಗೆ ತಿಳಿದಿತ್ತು. ಅವತ್ತು ಅರೆಸ್ಟಾದ ಶೋಯಬ ಅಹ್ಮದ್ ಅಲಿಯಾಸ್ ಚೋಟು ಹತ್ತಿರ 7.65 ಎಂಎಂ ಆಟೋ ಪಿಸ್ತೂಲ್ ಸಹ ಸಿಕ್ಕಿದೆ.

ಅಂದರೆ ಉಗ್ರರು ಶಸ್ತ್ರಾಸ್ತ್ರಗಳೊಂದಿಗೇ ಅಲ್ಲಿ ಬಂದಿದ್ದರು ಎಂದಾಯಿತು.

ಅವತ್ತು ಅಕಸ್ಮಾತ್ ಅಲ್ಲೇನಾದರೂ ಪೊಲೀಸರ ಹಾಗೂ ಉಗ್ರರ ನಡುವೆ ಗುಂಡಿನ ಚಕಮ ನಡೆದೇಹೋಗಿದ್ದರೆ ಸುತ್ತಮುತ್ತಲಿದ್ದ ನಾಗರಿಕರ ಗ ಏನಾಗಬಹುದಿತ್ತು ಯೋಚಿಸಿ?

ಏಕೆಂದರೆ ಮುಂಬೈ ದಾಳಿಯಲ್ಲಿ ಉಗ್ರರ ಗುಂಡಿ ಬಲಿಯಾದವರಲ್ಲಿ ಬಹುತೇಕರು ನಾಗರಿಕರೇ ಆಗಿದ್ದರು

ತೇಜಸ್ವಿಯ ಮಿಸ್ಸಿಂಗ್ ಪ್ರಕರಣವು!
ಸಿಟಿ ಪೊಲೀಸರ ಟೆರರಿಸ್ಟ್ ಕಲ್ಪನೆಯು!!



'ಅಂಜಿದವರ ಮೇಲೆ ಹಾವೆಸೆದಂತೆ' ಬೆಂಗಳೂರು ಸಿಟಿ ಪೊಲೀಸರು ಅತಿರೇಕದಿಂದ ವರ್ತಿಸಿರುವ ಘಟನೆ ಇದು.

ಎಸಿಪಿ ಜಿತೇಂದ್ರನಾಥ್ ವೀರಾವೇಶದಿಂದ ಹೋರಾಡಿ ಲಷ್ಕರ್ ಉಗ್ರಗಾಮಿಗಳನ್ನು ಅರೆಸ್ಟ್ ಮಾಡಿದರೆಂಬ ಕತೆಗಳು ಬಿತ್ತರಗೊಂಡ ನಂತರ ಸೆಪ್ಟೆಂಬರ್ 3ರ ಬೆಳಗ್ಗೆ ಪೂರ್ಣಚಂದ್ರ ತೇಜಸ್ವಿ ಎಂಬ ಹದಿಮೂರು ವರ್ಷದ ಶಾಲಾ ಬಾಲಕ ಕಾಣೆಯಾದ.

ಆದರೆ ಇದೊಂದು ಮಾಮೂಲಿ ಮಿಸ್ಸಿಂಗ್ ಕೇಸ್ ಎಂಬಂತೆ ಯಾರೂ ಪರಿಗಣಿಸಲಿಲ್ಲ, ಏಕೆಂದರೆ ಪೊಲೀಸ್ ಕಮೀಷನರ್ ಜ್ಯೋತಿ ಪ್ರಕಾಶ್ ಮಿರ್ಜಿಯವರ ಪರ್ಸನಲ್ ವಾಕಿಟಾಕಿ ಅಸಿಸ್ಟೆಂಟ್ ಆಗಿರುವ ಜನಾರ್ದನ್ ಎಂಬುವರ ಮಗನೇ ಈ ತೇಜಸ್ವಿ.

ಹೆಬ್ಬಾಳದ ಪೊಲೀಸ್ ಕ್ವಾಟ್ರಸ್‌ನಲ್ಲಿ ವಾಸವಿದ್ದ ತೇಜಸ್ವಿ ಸೋಮವಾರ ಬೆಳಗ್ಗೆ ಪೆನ್ಸಿಲ್ ಕೊಳ್ಳಬೇಕೆಂದು ಮನೆಯಿಂದ ಹೊರಟವನು ವಾಪಸ್ ಬರಲಿಲ್ಲ. ಯಾವಾಗ ಈ ಸುದ್ದಿ ಹರಡಿ ಜನಾರ್ದನ್ ಮಿಸ್ಸಿಂಗ್ ಕಂಪ್ಲೆಂಟು ಕೊಟ್ಟರೊ ಸಿಟಿ ಪೊಲೀಸರು ಥಟ್ಟನೆ ಎದ್ದರು. ತಮ್ಮ ನಾಯಕ ಭಯೋತ್ಪಾದಕರ ವಿರುದ್ಧ ಯುದ್ಧ ಘೋಷಿಸಿರುವಾಗಲೇ ಅವರ ಸಹಾಯಕನ ಮಗ ಕಾಣೆಯಾಗಿರುವುದು ಅವರಿಗೆಲ್ಲಾ ಆಕಸ್ಮಿಕವೆಂದು ಅನಿಸಲಿಲ್ಲ.

ನೇರವಾಗಿ ಹೇಳಬೇಕೆಂದರೆ

ಮುಸಲ್ಮಾನ್ ಭಯೋತ್ಪಾದಕರು ಮಿರ್ಜಿ ಸಾಹೇಬರ ಸಹಾಯಕನ ಮಗನನ್ನೇ ಕಿಡ್‌ನ್ಯಾಪ್ ಮಾಡಿದ್ದಾರೆಂಬ ರೂಮರ್ ಒಂದನ್ನು ತೇಲಿಬಿಡಲಾಯಿತು. ಇದರ ಬಗ್ಗೆ ಮಿರ್ಜಿ ಸಾಹೇಬರು ಅರ್ಜೆಂಟಾಗಿ ಒಂದು ಪತ್ರಿಕಾಗೋಷ್ಠಿಯನ್ನು ನಡೆಸಲಿಲ್ಲವಾದರೂ 'ತೇಜಸ್ವಿ ಕಿಡ್‌ನ್ಯಾಪ್' ಎಂಬ ಸುದ್ದಿ ಮಾತ್ರ ಪೊಲೀಸ್ ವಲಯಗಳಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು.

ಈ ಹುಡುಗನಿಗೆ ವಿಪರೀತ ಕ್ರಿಕೆಟ್ ಹುಚ್ಚಿತ್ತಾದ್ದರಿಂದ ಅವನು ಕಾಣೆಯಾದ ದಿನ ಬೆಂಗಳೂರಿನಲ್ಲಿ ಇಂಡಿಯಾ-ನ್ಯೂಜಿಲೆಂಡ್ ನಡುವೆ ಕ್ರಿಕೆಟ್ ಮ್ಯಾಚ್ ನಡೆಯುತ್ತಿದ್ದರಿಂದ ಅಕಸ್ಮಾತ್ ಸ್ಟೇಡಿಯಂನಲ್ಲೇನಾದರೂ ಇದ್ದಾನೆಯೇ ಎಂದೂ ಹುಡುಕಲಾಯಿತು. ಆದರೆ ಪೊಲೀಸರಿಗೆ ತೇಜಸ್ವಿ ಅಲ್ಲೂ ಕಾಣಲಿಲ್ಲ.

ಇನ್ನೇನು ಅಲ್ ಕೈದಾ ಉಗ್ರರೇ ತೇಜಸ್ವಿಯನ್ನು ಕಿಡ್‌ನ್ಯಾಪ್ ಮಾಡಿದ್ದಾರೆಂದು ಸಿಟಿ ಪೊಲೀಸರು ಒಂದು FIR ರೆಡಿ ಮಾಡೇ ಬಿಡುತ್ತಿದ್ದರೇನೊ...!

ಅಷ್ಟರಲ್ಲಿ ಸಂಜೆಯ ವೇಳೆಗೆ ಸ್ವತಃ ತೇಜಸ್ವಿಯೇ ತನ್ನ ತಂದೆ ಜನಾರ್ದನರ ಮೊಬೈಲ್ 9480801024 ಗೆ ಕಾಯಿನ್ ಬೂತ್ ಒಂದರಿಂದ ಫೋನ್ ಮಾಡಿದ.

'ಎಲ್ಲಿದ್ದೀಯಪ್ಪ?"

ಅಂತಾ ಕೇಳಿದಾಗ ತೇಜಸ್ವಿ ಹೇಳಿದ್ದು

'ತಿರುಪತಿಲಿ' ಎಂದು!

ತಕ್ಷಣ ತಿರುಮಲದಲ್ಲಿದ್ದ ಆ ಕಾಯಿನ್ ಬೂತ್‌ನ ಅಂಗಡಿ ಮಾಲಿಕನಿಗೆ ಇತ್ತಲಿಂದ ಪುನಃ ಫೋನ್ ಮಾಡಿ, ನಂತರ ಸ್ಥಳೀಯ 210 ಸ್ಟೇಷನ್ನಿನ ಪೊಲೀಸರ ನೆರವಿನೊಂದಿಗೆ ತೇಜಸ್ವಿಯನ್ನು ಬೆಂಗಳೂರಿಗೆ ಕರೆತಂದಿದ್ದಾರೆ. ಮನೆಯಲ್ಲಿದ್ದ ಗೋಲಕದ ಹುಂಡಿ ಒಡೆದು ಕೊಂಚ ಹಣ ಜೇಬಿಗೆ ಹಾಕಿಕೊಂಡು 'ಪೆನ್ಸಿಲ್ ತರುತ್ತೇನೆ' ಎಂದು ಹೇಳಿ ಮನೆ ಬಿಟ್ಟಿದ್ದ ತೇಜಸ್ವಿ ಯಾರಿಗೂ ಹೇಳದೆ ಸೀದಾ ತಿರುಪತಿಗೆ ಹೋಗಿಬಿಟ್ಟಿದ್ದ. ಅಲ್ಲಿ ದಿನವಿಡೀ ಸುತ್ತಾಡಿ ಕೊನೆಗೆ ಸಂಜೆಯಾದಂತೆ ಹೆದರಿ ತಾನೇ ತಂದೆಗೆ ಫೋನ್ ಮಾಡಿದಾಗ ಈ ಮಿಸ್ಸಿಂಗ್ ಪ್ರಕರಣ ಸುಖಾಂತ್ಯಗೊಂಡಿತ್ತು.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಏನೆಂದರೆ ಯಾರದ್ದೇ ಮನೆಯಲ್ಲಿ ಮಕ್ಕಳು ಸೃಷ್ಟಿಸಬಹುದಾದ ಇಂತಹ ಅವಾಂತರಗಳಲ್ಲೂ ಕೂಡ ಈಗ ಬೆಂಗಳೂರು ಪೊಲೀಸರ ಕಣ್ಣಿಗೆ ಅಲ್ ಕೈದಾ 'ಕೈವಾಡ' ಕಾಣುತ್ತಿರುವುದು!

...ನಲ್ ಇನ್ವೆಸ್ಟಿಗೇಷನ್ ಏಜನ್ಸಿಯಿಂದ ತನಿಖೆಯಾಗಲಿ

...ಗಳೂರಿನಲ್ಲಿ ಶಂಕಿತ ಉಗ್ರರ ಬಂಧನದ ಬೆನ್ನಿಗೇ ಹುಬ್ಬಳ್ಳಿಯಲ್ಲಿ ಐವರು, ಹೈದರಾಬಾದಿನಲ್ಲಿ ಇಬ್ಬರು ಮಹಾರಾಷ್ಟ್ರದ ನಾಂದೇಡ್‌ನಲ್ಲೂ ಹಲವು ಮುಸ್ಲಿಂ ಯುವಕರ ಬಂಧನಗಳಾಗಿವೆ.

...ನರ್ಥ ಇವರೆಲ್ಲಾ ಒಂದೇ ಜಾಲದ ಸದಸ್ಯರಾಗಿದ್ದರೆಂದೇನಲ್ಲ. ಏಕೆಂದರೆ ಹೈದರಾಬಾದ್‌ನಲ್ಲಿ ಬಂಧಿತರಾಗಿರುವ ...ರ್ ರೆಹಮಾನ್ ಹಾಗೂ ಅಕ್ರಂ ಪಾಶ ಎಂಬುವರನ್ನು ಮಾಹಿತಿ ಪಡೆಯಲಿಕ್ಕಾಗಿ ಬೆಂಗಳೂರು ...ರು ಕರೆ ತಂದಿದ್ದಾಗಲೂ ಮೀಡಿಯಾಗಳು ಮಾತ್ರ ಅವರನ್ನು ಉಗ್ರರ ಪಟ್ಟಿಗೆ ಸೇರಿಸಿಬಿಟ್ಟಿದೆ. ಇವರಿಬ್ಬರೂ ...ವರ್ಷಗಳ ಹಿಂದೆ ಮೆಕ್ಕಾ ಮಸೀದಿ ಸ್ಫೋಟದ ಆರೋಪದಲ್ಲಿ ಬಂಧಿತರಾಗಿ ನಂತರ ಕೋರ್ಟ್‌ನಲ್ಲಿ ...ಪಿಗಳೆಂದು ಬಿಡುಗಡೆಯಾಗಿದ್ದವರು.

...ತೂಹಲಕಾರಿ ಸಂಗತಿ ಏನೆಂದರೆ ಬೆಂಗಳೂರು ಪೊಲೀಸರ ಬಂಧನ ಕಾರ್ಯಾಚರಣೆ ಹಾಗೂ ತನಿಖಾ ...ಗಳ ಬಗ್ಗೆ ಕೇಂದ್ರ ಗೃಹ ಸಚಿವಾಲಯದ ಉನ್ನತ ತನಿಖಾ ಸಂಸ್ಥೆಗಳು ಅತೃಪ್ತಿ ಅಸಮಾಧಾನ ವ್ಯಕ್ತಪಡಿಸಿವೆ. ...ತರ ಬಳಿ ಕುರಾನ್ ಇತ್ತು, ಪೆನ್ ಡ್ರೈವ್ ಸಿಕ್ಕಿತು. ಅದರೊಳಗೆ ಜಿಹಾದಿ ಸಾಹಿತ್ಯವಿತ್ತು, ಕುರಾನಿನ 8 ನೇ ... ಪ್ರಕಾರ ದುಷ್ಕೃತ್ಯ ನಡೆಸಲು ತಾವು ಹುಬ್ಬಳ್ಳಿಯಲ್ಲಿ ಬೈಕ್ ಕದ್ದಿದ್ದೆಂದು ಆಪಾದಿತರು ಹೇಳಿಕೆ ನೀಡಿದ್ದಾರೆ" ಈ ರೀತಿಯ ಆರೋಪಗಳನ್ನಷ್ಟೇ ಮಾಡಿದರೆ ಅದು ಕೋರ್ಟ್‌ಗಳಲ್ಲಿ ಟೆರರಿಸಂ ಸಂಚು ಎನಿಸಿಕೊಳ್ಳುವುದಿಲ್ಲ, ... ಮಾತನ್ನು ಹೇಳಿದವರು ಯಾರೂ ಅಲ್ಲ,

... ರಮಣ್ ಎಂಬಾತ. ಇವರು ಭಾರತ ಸರ್ಕಾರದ ಕ್ಯಾಬಿನೆಟ್ ಸೆಕ್ರೆಟರಿಯಾಗಿದ್ದವರು. ಹಾಲಿ ಚೆನ್ನೈನಲ್ಲಿ ...tute for topical studies ಸಂಸ್ಥೆಯ ನಿರ್ದೇಶಕರಾಗಿದ್ದಾರೆ.

...ಯಾಲಯಗಳಲ್ಲಿ ಆರೋಪಿಗಳ ವಿರುದ್ಧ ಸಾಕ್ಷಿ ಪುರಾವೆ ಒದಗಿಸಿ ನೀಡುವಾಗ ಫೊರೆನ್ಸಿಕ್ ಎವಿಡೆನ್ಸ್‌ಗಳ ...ಮಹತ್ವದಾಗಿರುತ್ತದೆ.

...ಂದರೆ ಸ್ಫೋಟಕ ಪದಾರ್ಥಗಳು, ಶಸ್ತ್ರಾಸ್ತ್ರಗಳು ಹಾಗೂ ನಿಷೇಧಿತ ಉಗ್ರ ಸಂಘಟನೆಗಳೊಂದಿಗೆ ನೇರಸಂಪರ್ಕ ...ದ್ದ ಬಗ್ಗೆ ಖಚಿತ ಪುರಾವೆಗಳು ಬೇಕಾಗುತ್ತವೆ. ಆದರೆ ಕಮೀಷನರ್ ಮಿರ್ಜಿ ಸಾಹೇಬರೇ ಆರಂಭ ... ವೀರಾವೇಶವನ್ನು ಈಗ ಬದಿಗಿಟ್ಟು "ಬಂಧಿತರು Let ಅಥವಾ Huji ಯ ಸದಸ್ಯರಲ್ಲ, ಇವರೆಲ್ಲಾ ...ತವಾಗಿ ಕೆಲವು ದುಷ್ಕೃತ್ಯಗಳನ್ನು ನಡೆಸುವ ಉದ್ದೇಶ ಹೊಂದಿದ್ದರು" ಎಂದು ಹೇಳುತ್ತಿದ್ದಾರೆ.

...ಸ್ಥಿತಿ ಹೀಗಿದ್ದದ್ದೇ ಆದರೆ ಅವರನ್ನು ಭಯೋತ್ಪಾದಕ ಸಂಚಿನವರೆಂದು ಹೇಳುವ ಅನಿವಾರ್ಯತೆ ಇಲ್ಲ ...ೂ ತಜ್ಞ ರಮಣ್ ಹೇಳಿದ್ದಾರೆ.

...ದೇನೇ ಇರಲಿ,

... ವಿಚಾರ ಈಗ ಅನೇಕ ರಾಜ್ಯಗಳ ವ್ಯಾಪ್ತಿಗೆ ಬರುತ್ತಿರುವ ಕಾರಣದಿಂದಾಗಿ ರಾಜ್ಯ ಪೊಲೀಸರ ಬದಲಾಗಿ ...ದ ಉನ್ನತ ತನಿಖಾ ತಂಡಗಳೇ ಮುಂದಿನ ತನಿಖೆ ನಡೆಸುವುದು ಉತ್ತಮ ಎನಿಸುತ್ತದೆ.

...ನಿಷ್ಠ ಪಕ್ಷ ಅವರಾದರೂ ರಸ್ತೆಯ ನಡುವೆ ಗನ್ ಹಿಡಿದು ಬರುವ ಟೆರರಿಸ್ಟ್‌ಗಳನ್ನು ಜಂಪ್ ಮಾಡಿ ...ಕಲ್ ಕಳ್ಳರನ್ನು ಬಂಧಿಸುವಂತೆ ವರ್ತಿಸಲಾರರೇನೊ?

...ದಿನ ಘಟನೆಗಳ ಅರಿವು ಜಿತೇಂದ್ರನಾಥರಿಗೆ ಇರಲಿಲ್ಲ ...ದೀತೆ?

...ಗಿದ್ದಲ್ಲಿ ಅಂತಹ ಸಂಭವನೀಯ ಅನಾಹುತವನ್ನು



...ು ಹಾಗೂ ನಾಗರಿಕರ ಸುರಕ್ಷತೆ ಬಗ್ಗೆ ಅವರೇನು ...ಜಾಗರೂಕತಾ ಕ್ರಮ ವಹಿಸಿದ್ದರೆಂಬುದು ...ಗುತ್ತಿಲ್ಲ! ಅಷ್ಟೆ ಅಲ್ಲದೆ ಈ ಕಾರ್ಯಾಚರಣೆಯಲ್ಲಿ ...ದಾಗಿದ್ದಾರೆಂದು ಹೇಳಲಾಗಿರುವ ಇನ್ಸ್‌ಪೆಕ್ಟರ್ ...ಚ್. ರಾಮಚಂದ್ರ, ವೇಣುಗೋಪಾಲ್, ಬಿ.ಎನ್. ...ಪಾಸ್, ಕೆ.ಎಂ. ರಮೇಶ್, ಕಬ್ಬೂರಿ ಮತ್ತವರ ...ಗಳೆಲ್ಲರೂ ಬುಲೆಟ್ ಪ್ರೂಫ್ ಜಾಕೆಟ್ ಧರಿಸಿದ್ದರೆ? ...ದಲ್ಲೇನಾದರೂ ಆಂಬುಲೆನ್ಸ್ ರೆಡಿಯಾಗಿತ್ತೆ? ...ಚರಣೆ ನಡೆದ ಸ್ಥಳದ ಅಕ್ಕಪಕ್ಕದ ಕಟ್ಟಡಗಳ ... ಪೊಲೀಸ್ ಶಾರ್ಪ್ ಶೂಟರ್‌ಗಳು ತಯಾರಾಗಿ ...ದ್ದರೆ?

ಈ ಭಯಾನಕ ಸಾಹಸಿ ಕಾರ್ಯಾಚರಣೆಯಲ್ಲಿ ಕಮಾಂಡೊಗಳೇಕೆ ಭಾಗಿಯಾಗಿರಲಿಲ್ಲ?

ಈ ರೀತಿಯ ಪ್ರಶ್ನೆಗಳೆಲ್ಲ ಯಾಕೆ ಬರುತ್ತವೆಂದರೆ ಲಷ್ಕರ್ ಉಗ್ರರನ್ನು ಆಯುಧ ಸಮೇತ ಬಂಧಿಸುವುದೆಂದರೆ ಅದು ನಲ್ಲಿ ಕಳ್ಳರನ್ನು ಹಿಡಿಯುವಷ್ಟು ಸಲೀಸಾದ ವಿಷಯವೇನಲ್ಲ ಎಂಬ ಕಾರಣಕ್ಕೆ!

ಆದರೆ ಎಸಿಪಿ ಜಿತೇಂದ್ರನಾಥ್ "ಬೆಳಗ್ಗೆ 12-30 ಗಂಟೆಗೆ ಮಾರುತಿ ನಗರದಲ್ಲಿ ಏಂ-27-ಇ 1085 ನಂಬರಿನ ಮೋಟಾರ್ ಬೈಕ್‌ನಲ್ಲಿ ಬಂದ ಉಗ್ರರನ್ನು ನಾನು ಜಂಪ್ ಮಾಡಿ ಹಿಡಿದೆ. ಇನ್ನೊಬ್ಬನನ್ನು ತಮ್ಮ ಸಿಬ್ಬಂದಿ ಹಿಡಿದರು" ಎಂದು ಹೇಳಿಕೊಂಡಿದ್ದಾರೆ. ಪಿಸ್ತೂಲ್ ಸಿಕ್ಕಿದ್ದು ಇಲ್ಲೇ ಎನ್ನಲಾಗಿದೆ.

ಅದರ ನಂತರ ಬಂಧಿತರ ಹೇಳಿಕೆ ಆಧರಿಸಿ ಜೆಸಿ ನಗರದ ಕೆಂಪಯ್ಯ ಬ್ಲಾಕ್‌ನಲ್ಲಿದ್ದ ಉಳಿದ ನಾಲ್ವರು ಉಗ್ರರಾದ ಸಿದ್ದಿಕಿ, ರಿಯಾಜ್, ಯೂಸೂಫ್, ಏಜಾಜ್ ಅಹಮದ್ ಮಿರ್ಜಾನನ್ನು ಬಂಧಿಸಲಾಯಿತು ಎನ್ನಲಾಗಿದೆ.

ಅರೆಸ್ಟಾಗಿದ್ದು ಎಲ್ಲಿ? ಯಾವಾಗ?

ಎಸಿಪಿ ಜಿತೇಂದ್ರನಾಥ್ ತಾವು ಹಾಗೂ ತಮ್ಮ ತಂಡ ಆಗಸ್ಟ್ 29ರ ಮಧ್ಯಾಹ್ನ 12-30ಕ್ಕೆ ಬಸವೇಶ್ವರ ನಗರದಲ್ಲಿ ಜಂಪ್ ಮಾಡಿ ಈ ಉಗ್ರರನ್ನು ಅರೆಸ್ಟ್ ಮಾಡಿದ್ದಾಗಿ ಹೇಳಿಕೊಂಡರೂ ಕೂಡ ಈ ಬಂಧನಗಳು ಅದೇ ಆಗಸ್ಟ್ 29ರ ಬೆಳಗ್ಗೆ 9-00ಕ್ಕೆ ನಡೆದಿದ್ದವು. ಮತ್ತದು ನಡೆದದ್ದು ಬಸವೇಶ್ವರ ನಗರದಲ್ಲಿ ಅಲ್ಲ, ಬದಲಾಗಿ ಜೆಸಿ ನಗರದ ಕೆಂಪಯ್ಯ ಬ್ಲಾಕಿನ 1ನೇ ಮೈನ್ ರೋಡಿನ ಮನೆ ನಂಬರ್ 22ರಲ್ಲಿ ಎಂಬ ಬಗ್ಗೆ ಅನೇಕ ಪುರಾವೆಗಳಿವೆ.

ಪೊಲೀಸರು ಹನ್ನೆರಡೂವರೆಗೆ ಅರೆಸ್ಟ್ ಮಾಡಿದೆವು ಎಂದು ಹೇಳಿದ್ದರೂ ಅವತ್ತು ಬೆಳಗ್ಗೆ ಹತ್ತು ಗಂಟೆಯ ಸುಮಾರಿಗೇ ಈ ಶಂಕಿತರ ಬಂಧನದ ಬಗ್ಗೆ ಮೀಡಿಯಾ ಕಚೇರಿಗಳಲ್ಲಿ ಸುದ್ದಿ ಹರಿದಾಡುತ್ತಿತ್ತು. ಅಷ್ಟೇ ಅಲ್ಲ, ಅವತ್ತು ಬೆಳಗ್ಗೆ ಬೂದು ಬಣ್ಣದ ಇನ್ನೋವಾ ಕಾರಿನಲ್ಲಿ ಬಂದಿಳಿದ ಮಫ್ತಿಯಲ್ಲಿದ್ದ ಪೊಲೀಸರು ಈ ಶಂಕಿತರನ್ನು ಕರೆದೊಯ್ಯುವಾಗ ನೋಡಿದ್ದ ಕೆಲವರು ಬೇರೆಯವರಿಗೂ ಮಾಹಿತಿ ಕೊಟ್ಟಿದ್ದಾರೆ. ಮುಸ್ಲಿಂ ಮಾನವ ಹಕ್ಕು ಸಂಘಟನೆಯೊಂದರ ಮುಖಂಡರು ಈ ಬಗ್ಗೆ ರಾಜ್ಯ ಹೈಕೋರ್ಟ್ ನ್ಯಾಯಾಧೀಶರಿಗೆ ಟೆಲಿಗ್ರಾಂ ಕಳುಹಿಸಿ "ಕೆಲ ಯುವಕರನ್ನು ಅಪಹರಿಸುವುದಾಗಿ"ಯೂ ಮಾಹಿತಿ ನೀಡಿದ್ದಾರೆ.

ಹೀಗೆ ಶಂಕಿತರ ಬಂಧನ ಜೆಸಿ ನಗರದ ಮನೆಯೊಳಗೇ ನಡೆದಿರುವ ಸಾಧ್ಯತೆಗಳು ನಿಚ್ಚಳವಾಗಿದ್ದರೂ ಎಸಿಪಿ ಜಿತೇಂದ್ರನಾಥ್ ಬಸವೇಶ್ವರ ನಗರದ ರಸ್ತೆಯಲ್ಲಿ ಜಂಪ್ ಮಾಡುವ ಅಗತ್ಯವೇನಿತ್ತೊ?

ಏನಿವರ ಮಸಲತ್ತು?

ಅಂತಾರಾಷ್ಟ್ರೀಯ ಉಗ್ರಗಾಮಿ ಸಂಘಟನೆಯಾಗಿರುವ ಆಲ್ ಕೈದಾಗೆ ವಿಶ್ವವ್ಯಾಪಿ ಸಂಪರ್ಕಗಳಿರುವುದು ಸುಳ್ಳೇನಲ್ಲ. ಅದೇರೀತಿ ವಿಶ್ವದ ನಂಬರ್ ಒನ್ ಭಯೋತ್ಪಾದಕ ಅಮೆರಿಕದ ಸರ್ಕಾರದ ವಿರುದ್ಧ ಹಾಗೂ ಅಮೆರಿಕದ ಚೇಲಾಗಿರಿ ಮಾಡುತ್ತಿರುವ ಪಾಕಿಸ್ತಾನ, ಇರಾಕ್, ಅಫ಼ಘಾನಿಸ್ತಾನ ಹಾಗೂ ಕೆಲ ಅರಬ್ ದೇಶಗಳ ಸರ್ಕಾರಗಳ ವಿರುದ್ಧವೂ ಮುಸ್ಲಿಂ ಉಗ್ರ ಸಂಘಟನೆಗಳು ಯುದ್ಧ ಘೋಷಿಸಿವೆ.

ತಮ್ಮದೊಂದು 'ಜಿಹಾದಿ'(ಧರ್ಮಯುದ್ಧ)ವೆಂದು ಘೋಷಿಸಿಕೊಳ್ಳುವ ಈ ಉಗ್ರರು ಇತರರನ್ನು ತಮ್ಮೊಂದಿಗೆ ಸೇರಿಸಿಕೊಳ್ಳಲು ಪ್ರಚಾರ ಕಾರ್ಯವನ್ನು ನಡೆಸುತ್ತಿರುತ್ತಾರೆ.

ಇಂಟರ್‌ನೆಟ್ ಕೂಡ ಅದರಲ್ಲೊಂದು. ಯೆಮೆನ್ ದೇಶದ ನೆಲೆಯ `Inspirer' ಎಂಬ ವೆಬ್‌ಸೈಟೊಂದು ಈ ತರದ ಉಗ್ರ ಚಟುವಟಿಕೆಗಳಿಗೆ ಪ್ರಚೋದನೆ ನೀಡುವ ಕೆಲಸ ಮಾಡುತ್ತಿದೆ.

ವಿಶ್ವಾದ್ಯಂತ ಮುಸ್ಲಿಮರ ಮೇಲೆ ನಡೆಯುತ್ತಿರುವ ದಾಳಿ, ದೌರ್ಜನ್ಯಗಳ ಬಗ್ಗೆ ಈ ವೆಬ್‌ಸೈಟ್‌ನಲ್ಲಿ ರಾಶಿ ರಾಶಿ ಮಾಹಿತಿಗಳಿವೆ. ಇರಾಕ್, ಅಫ಼ಘಾನಿಸ್ತಾನಗಳಲ್ಲಿ, ಇತ್ತೀಚೆಗೆ ಮ್ಯಾನ್ಮಾರ್ ದೇಶದಲ್ಲಿ ಮುಸ್ಲಿಮರನ್ನು ಹೇಗೆ ಕೊಲ್ಲಲಾಗುತ್ತಿದೆಯೆಂದೂ ಇದು ಹೇಳಿದೆ. ಅದೇರೀತಿ ಭಾರತದ ಗುಜರಾತ್‌ನಲ್ಲಿ ಸಾವಿರಾರು ಮುಸ್ಲಿಮರ ನರಮೇಧ ನಡೆಸಿದ ಹಿಂದೂ ಫ್ಯಾಸಿಸ್ಟರ ಬಗ್ಗೆಯೂ ವಿವರಗಳಿವೆ ಎನ್ನಲಾಗಿದೆ.

ಇಂಡಿಯಾದೊಳಗಿನ ಮುಸ್ಲಿಮರ ಸ್ಥಿತಿಗತಿಗಳ ಬಗ್ಗೆ ಯೋಚಿಸಿ ಘಾಸಿಗೊಳ್ಳುವ ಯುವಕರೇನಾದರೂ ಇಂಟರ್‌ನೆಟ್‌ನಲ್ಲಿ ಇದನ್ನೆಲ್ಲ ಹುಡುಕುತ್ತಾ ಕುಳಿತರೆ ಒಂದಲ್ಲ ಒಂದು ಬಾರಿ ಈ `Inspirer' ವೆಬ್‌ಸೈಟಿನೊಂದಿಗೆ ಮುಖಾಮುಖಿಯಾಗುವ ಛಾನ್ಸ್ ಇದ್ದೇ ಇರುತ್ತದೆ.

ಬಹುತೇಕ ಮೊನ್ನೆ ಬಂಧಿತರಾಗಿರುವ ಯುವಕರಲ್ಲಿ ಕೆಲವರಾದರೂ ಈ ಪ್ರಚೋದನಕಾರಿ ವೆಬ್‌ಸೈಟ್‌ಗೆ ಭೇಟಿ ನೀಡಿ ತಮ್ಮ ಅಸಹನೆ ಸಿಟ್ಟನ್ನೆಲ್ಲ ಕಾರಿಕೊಂಡಿರಲಿಕ್ಕೂ ಸಾಕು. ಅದು ನಂತರ ಈ-ಮೇಲ್‌ಗಳ ವಿನಿಮಯದವರೆಗೂ ಮುಂದುವರೆದಿದ್ದರೆ ಅದು ಖಂಡಿತಾ...IB ಗಮನಕ್ಕೆ ಬಂದಿರುತ್ತದೆ.

ಕೇಂದ್ರ ಸರ್ಕಾರದ ಗುಪ್ತಚರ್ಯೆ ಸಂಸ್ಥೆಯಾಗಿರುವ ಇಂಟಲಿಜೆನ್ಸ್ ಬ್ಯುರೋ (IB) Inspirer ನಂತಹ ಪ್ರಚೋದನಕಾರಿ ವೆಬ್‌ಸೈಟ್‌ಗಳ ಬಗ್ಗೆ ನಿಗಾ ಇಟ್ಟಿರುತ್ತದೆ.

ವಾಸ್ತವವಾಗಿ ಬಂಧಿತ ಉಗ್ರರ ಬಗ್ಗೆ ರಾಜ್ಯ ಪೊಲೀಸರಿಗೆ ಮೊದಲು ಮಾಹಿತಿ ನೀಡಿ ಎಚ್ಚರಿಸಿದ್ದೇ IB ಎಂಬ ಸುದ್ದಿಗಳಿವೆ. ಇದೇ ಮುಂದಿನ ಘಟನೆಗಳಿಗೆ ದಾರಿ ಮಾಡಿಕೊಟ್ಟಿತು. ಬಂಧಿತರಿಗೆ ಸಿಕ್ಕಿರುವ ಪಿಸ್ತೂಲಿನ ಮೂಲದ ಬಗ್ಗೆ ಈಗ ಪೊಲೀಸರು ಏನೂ ಹೇಳುತ್ತಿಲ್ಲ ಹಾಗೂ ಬಂಧಿತರಿಂದ ಅದರ ಕುರಿತಂತೆ ಯಾವ ಹೇಳಿಕೆಯನ್ನು ಪಡೆದು ದಾಖಲಿಸಿಲ್ಲ. ಅದೇರೀತಿ ಶಂಕಿತರನ್ನು ಡಾ|| ಜಾಕೀರ್ ಅಲಿಯಾಸ್ ಉಸ್ತಾದ್ ಎಂಬುವನು ಇರಾನಿಗೆ ಕರೆದೊಯ್ದಿದ್ದು, ನಂತರ ಪಾಕಿಸ್ತಾನದ ಕರಾಚಿಯಲ್ಲಿ ಐಎಸ್ಐ ಉನ್ನತಾಧಿಕಾರಿಯಾಗಿರುವ ಅಬ್ದುಲ್ ವಹಾಬ್, ಹೇಮು, ಮುಸ್ತಫಾ ಎಂಬುವರನ್ನು ಭೇಟಿ ಮಾಡಿಸಿದ್ದರ ಬಗ್ಗೆಯೂ ಖಚಿತವಾದ ಪುರಾವೆಗಳು ಬೇಕಾಗುತ್ತವೆ.

ಪೊಲೀಸರಿಗೆ ಇವೆಲ್ಲಾ ಸಾಕ್ಷ್ಯಗಳು ಸಿಗಲಿ ಎಂದು ಆಶಿಸೋಣ

ಅಂದಹಾಗೆ

ಈ ಗದ್ದಲದಲ್ಲಿ ರಾಜ್ಯದ ಬರ ಪರಿಸ್ಥಿತಿ, ಬಿಜೆಪಿ ಸರ್ಕಾರದ ರಾಕ್ಷಸ ಭ್ರಷ್ಟಾಚಾರ, ದುರಾಡಳಿತಗಳೆಲ್ಲಾ ಬದಿಗೆ ಸರಿದು ಮುಸ್ಲಿಂ ಉಗ್ರರ ವಿಚಾರವೇ ವಿಜೃಂಭಿಸುತ್ತಿದೆ.

ಬಹುಶಃ ಇನ್ನೇನು ಚುನಾವಣೆಗಳು ಹತ್ತಿರ ಬರುತ್ತಿರುವಂತೆ ಕಾಣುತ್ತಿದೆ.

ಮುಸ್ಲಿಂ ಯುವಜನರು ಮಾಡಬೇಕಾದ್ದೇನು?

ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿರುವರೆಂಬ ಶಂಕೆ ಅಥವಾ ಆರೋಪದ ಮೇಲೆ ಕರ್ನಾಟಕದಲ್ಲಿ ಅನೇಕ ಬಾರಿ ಮುಸ್ಲಿಂ ಯುವಕರು ಬಂಧನಕ್ಕೊಳಗಾಗಿದ್ದಾರೆ.



ಇಂತಹ ಘಟನೆಗಳು ನಡೆದಾಗ ನಿಜ-ಸುಳ್ಳುಗಳ ನಡುವೆ ವಾಸ್ತವ-ಉತ್ಪ್ರೇಕ್ಷೆಗಳ ನಡುವಿನ ಗೆರೆ ತಕ್ಷಣ ಅಳಿಸಿಹೋಗುತ್ತದೆ. ಪೊಲೀಸರು ಹಾಗೂ ಮೀಡಿಯಾಗಳು ಪೈಪೋಟಿಗೆ ಬಿದ್ದವರಂತೆ ಸುದ್ದಿಗಳನ್ನು ಹಬ್ಬಿಸುತ್ತಾರೆ. ಈ ಗದ್ದಲದಲ್ಲಿ ಆಪಾದಿತರು ಮತ್ತು ಅಮಾಯಕರ ನಡುವೆ ವ್ಯತ್ಯಾಸವಿರುತ್ತದೆಯೆಂಬ ವಿಚಾರವೇ ಪಕ್ಕಕ್ಕೆ ಸರಿದು ಒಂದಿಡೀ ಸಮುದಾಯವನ್ನೇ ಗುರಿ ಮಾಡುವ ಕೆಲಸ ಆಗೇ ಹೋಗಿರುತ್ತದೆ.

ಕರ್ನಾಟಕದಲ್ಲಿ ಕಳೆದ ಐದಾರು ವರ್ಷಗಳಿಂದ ಇಂತಹ ಹತ್ತಾರು ಬಂಧನಗಳಾಗಿವೆ. ಅವರೆಲ್ಲ ಈಗ ಎಲ್ಲಿದ್ದಾರೆ? ಹೇಗಿದ್ದಾರೆ? ಅವರ ಮೇಲೆ ಹೊರಿಸಲಾಗಿದ್ದ ಆರೋಪಗಳು ನಂತರ ಸಾಬೀತಾದವೇ ಅಥವಾ ಇಲ್ಲವೆ ಎಂಬ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ.

ಅದು ಒಂದೆಡೆ ಇರಲಿ, ಹಿಂದೂತ್ವ ಕೋಮುವಾದಿಗಳು ಮುಸ್ಲಿಮರ ವಿರುದ್ಧ ಬಿಟ್ಟೂಬಿಡದೆ ನಡೆಸುತ್ತಿರುವ ದೌರ್ಜನ್ಯ, ಹಲ್ಲೆಗಳನ್ನು ನೋಡುತ್ತಾ ಇದ್ದರೆ ಯಾರಿಗಾದರೂ ವ್ಯಗ್ರತೆ ಉಂಟಾದರೆ ಅದು ಅಸಹಜವೇನಲ್ಲ.

ಆದರೆ ಹಾಗೆ ವ್ಯಗ್ರಗೊಳ್ಳುವರೊಬ್ಬರು 'ಜಿಹಾದಿ'ಯೇ ಇದಕ್ಕೆ ಪರಿಹಾರ ಎಂದು ಹೊರಟರೆ ಈ ಸಮಸ್ಯೆ ಬಗೆಹರಿಯಲಾರದು.


ಬಹಳ ಮುಖ್ಯವಾಗಿ RSS ಪ್ರಚೋದಿತ ಗಲಭೆಗಳನ್ನು ಯಾರೋ ತಲೆಕೆಟ್ಟ ನಾಲ್ಕಾರು ಜನರ ದುಷ್ಕೃತ್ಯಗಳೆಂಬಂತೆ ಯಾರೂ ಗ್ರಹಿಸಬಾರದು. ಇದು ಒಂದು ರಾಜಕೀಯ ಸಿದ್ಧಾಂತ. ಈ ಐಡಿಯಾಲಜಿಗೆ ಕೇವಲ ಮುಸ್ಲಿಮರನ್ನು ಮಾತ್ರವಲ್ಲ, ಈ ನಾಡಿನ ಶೂದ್ರ, ದಲಿತ ಹಾಗೂ ಇಡೀ ಮಹಿಳಾ ಸಮುದಾಯವನ್ನೇ ದಮನಿಸಿ ತುಳಿದು ತನ್ನ ರಾಜ್ಯಭಾರ ನಡೆಸಬೇಕೆಂಬ ಗುರಿ ಇದೆ. ಇಂತಹವರಿಗೆ ಅಂತಾರಾಷ್ಟ್ರೀಯ ಭಯೋತ್ಪಾದಕ ದೇಶ ಅಮೆರಿಕಾದೊಂದಿಗೆ ಸ್ನೇಹವಿದ್ದರೆ ಹಿತ. ಹಿಟ್ಲರ್ ಇವರ ಆದರ್ಶ ಪುರುಷ.

ಬಲವಾದ ಸಂಘಟನೆ, ಹಣಕಾಸು, ಪ್ರಚಾರದ ನೆಟ್‌ವರ್ಕ್ ಹೊಂದಿರುವ ಈ ಫ್ಯಾಸಿಸ್ಟರ ವಿರುದ್ಧ ಕರ್ನಾಟಕ ಸೇರಿದಂತೆ ಇಡೀ ದೇಶಾದ್ಯಂತ ಪ್ರತಿರೋಧ ವ್ಯಕ್ತವಾಗುತ್ತಿದೆ.

ಮುಸ್ಲಿಂ ಸಮುದಾಯಕ್ಕೆ ಮುಖ್ಯ ಪಾತ್ರವಿರುವುದು ಇಲ್ಲೆ. ಹಿಂದೂ ಫ್ಯಾಸಿಸ್ಟರ ವಿರುದ್ಧದ ಜನಸಾಮಾನ್ಯರ ಹೋರಾಟದಲ್ಲಿ ತನ್ನ ಪೂರ್ಣ ಸಾಮರ್ಥ್ಯದೊಂದಿಗೆ ಮುಸ್ಲಿಂ ಯುವಜನತೆ ಪಾಲ್ಗೊಳ್ಳಬೇಕು. ರಾಜ್ಯದ ಪ್ರತಿ ಮೂಲೆಮೂಲೆಗಳಲ್ಲೂ ಬಲಿಷ್ಠವಾದ ಪ್ರಗತಿಪರ ಪ್ರಜಾತಾಂತ್ರಿಕ ಸಂಘಟನೆಗಳನ್ನು ರೂಪಿಸಿಕೊಳ್ಳಬೇಕು ಅಥವಾ ಈಗಾಗಲೇ ಅಸ್ತಿತ್ವದಲ್ಲಿರುವ ಪ್ರಗತಿಪರ ಗುಂಪುಗಳೊಂದಿಗೆ ಸೇರಬೇಕು. ಪ್ರತಿಭಟನೆ, ಸಂಘಟನೆ, ಸೆಮಿನಾರ್‌ಗಳಲ್ಲಿ ಭಾಗಿಯಾಗಿ ತಮ್ಮ ರಾಜಕೀಯ ತಿಳಿವಳಿಕೆಗಳನ್ನು ಬೆಳೆಸಿಕೊಳ್ಳಬೇಕು.

ಈ ಕೆಲಸಗಳು ನಿರಂತರವಾಗಿ ನಡೆದಲ್ಲಿ ನಿಜಕ್ಕೂ ಅಲ್ಪಸಂಖ್ಯಾತರಾಗಿರುವ ಹಿಂದೂತ್ವವಾದಿ ಫ್ಯಾಸಿಸ್ಟರನ್ನು ಸೋಲಿಸುವುದು ಕಷ್ಟವಾಗಲಾರದು.

...ಟ್‌ಲಿಸ್ಟ್‌ನಲ್ಲಿದ್ದವರ ಬಗ್ಗೆ!



...ವಿಶ್ವೇಶ್ವರ ಭಟ್, ಪ್ರತಾಪ್ ಸಿಮ್ಹ ಮುಂತಾದವರು ಕರ್ನಾಟಕದಲ್ಲಿ ಹಿಂದೂ ...ಮುವಾದಕ್ಕೆ ನೀರು ಗೊಬ್ಬರ ಹಾಕಿ ಪೋಷಿಸಿದ ಮಹಾನುಭಾವರೆಂಬುದು ...ಗೂ ಗೊತ್ತಿರುವ ಸಂಗತಿ. ಅದೇರೀತಿ ವಿಜಯ ಸಂಕೇಶ್ವರ್ ವಿಜಯ ...ಕ ಪತ್ರಿಕೆಯ ಮಾಲೀಕರಾಗಿದ್ದಾಗ ಅವರ ಪತ್ರಿಕೆಯ ಪ್ರತಿ ಪುಟವೂ ... ದ್ವೇಷಕಾರಿಕೊಳ್ಳುತ್ತಿದ್ದದ್ದೂ ಸುಳ್ಳಲ್ಲ. ಇಂತವರ ಬಗ್ಗೆ ಜನತೆಯೇ ನಿರ್ಲಕ್ಷ್ಯ ...ಬೇಕೆ ವಿನಃ ಹಿಂಸೆಯ ಮಾರ್ಗ ಸಮರ್ಥನೀಯವಲ್ಲ.

...ಅದಿರಲಿ,

...ಈ ಗಣ್ಯರೆಲ್ಲ ಹಿಟ್‌ಲಿಸ್ಟ್‌ನಲ್ಲಿ ಇದ್ದಿದ್ದು ನಿಜವೇ ಆಗಿದಿದ್ದರೆ ಪೊಲೀಸರು ಅವರನ್ನೆಲ್ಲ ಎಚ್ಚರಿಸಿ, ...ಷ ಸೆಕ್ಯೂರಿಟಿ ನೀಡಿರಬೇಕಿತ್ತಲ್ಲವೆ.

...ಎಸಿಪಿ ಜಿತೇಂದ್ರರಿಗೆ ಉಗ್ರರ ಹತ್ಯಾ ಸಂಚಿನ ಬಗ್ಗೆ ಆಗಸ್ಟ್ 26 ಕ್ಕೆ ಮಾಹಿತಿ ಸಿಕ್ಕರೂ ...ಲಿಸ್ಟ್‌ನಲ್ಲಿದ್ದವರಿಗೆ ಶಂಕಿತರ ಅರೆಸ್ಟ್ ಆಗುವವರೆಗೂ ಅದರ ಮಾಹಿತಿಯೇ ಇರಲಿಲ್ಲ!

...ಸಿದರ ಅರ್ಥ?



ಹೊಸಕೋಟೆ ಪುರಸಭೆಯ ಗೆದ್ದಲು ಭ್ರಷ್ಟ ರಾಮ್‌ಪ್ರಕಾಶ್

ಹೊಸಕೋಟೆ ಪುರಸಭೆಗೆ ಚೀಫ್ ಆಫೀಸರ್ ಆಗಿ ವಕ್ಕರಿಸಿಕೊಂಡಿರುವ ಎಸ್.ಎ.ರಾಮ್‌ಪ್ರಕಾಶ್ ಪರಮ ಭ್ರಷ್ಟ. ಅಷ್ಟೇ ದರ್ಪಿಷ್ಟನೂ ಹೌದು.

ಕೈಕೆಳಗಿರುವ ಸಿಬ್ಬಂದಿಯಿಂದ ಹಿಡಿದು ಸಾರ್ವಜನಿಕರವರೆಗೆ ಎಲ್ಲರನ್ನು ಮುಕ್ಕಿ ತಿನ್ನಲೆಂದೇ ಬಂದು ಕೂತಂತಿರುವ ಈತನಿಗೆ ಪೊಲಿಟಿಕಲ್ ಆಸಾಮಿಗಳನ್ನು, ಮೇಲಧಿಕಾರಿಗಳನ್ನು ಪಳಗಿಸಿಟ್ಟುಕೊಳ್ಳುವ ಕಲೆ ಕರಗತವಾಗಿ ಹೋಗಿದೆ. ಹಾಗಾಗಿಯೇ ಭಾರೀ ಹಗರಣದಲ್ಲಿ, ಒಂದೆರಡು ಲೈಂಗಿಕ ಸ್ಕ್ಯಾಮ್‌ಗಳಲ್ಲಿ ತಗುಲಿಕೊಂಡು ಸಸ್ಪೆಂಡ್ ಆದರೂ 'ಒನ್ಸ್ ಎಗೇನ್' ಗದ್ದುಗೆ ಏರಿ ವಿಜೃಂಭಿಸುತ್ತಿದ್ದಾನೆ. ವೃತ್ತಿಜೀವನದ ಬಹುಪಾಲು ದಿನಗಳನ್ನು ಹೊಸಕೋಟೆ ಪುರಸಭೆಯಲ್ಲೇ ಕಳೆದಿರುವ ರಾಮ್‌ಪ್ರಕಾಶ್ ಅಲ್ಲಿಗೀಗ ಅನಭಿಷಕ್ತ ದೊರೆಯಂತೆ ಮೆರೆದಾಡುತ್ತಿರುವುದು ಮಾತ್ರವಲ್ಲದೆ ಸರ್ಕಾರಿ ಸೌಲತ್ತುಗಳನ್ನೆಲ್ಲ 'ಪರ್ಸನಲ್ ಪ್ರಾಪರ್ಟಿ'ಗಳನ್ನಾಗಿಸಿಕೊಂಡು ಭರ್ಜರಿ ಅಕ್ರಮ ಸಾಮ್ರಾಜ್ಯವೊಂದನ್ನು ಸೃಷ್ಟಿಸಿಕೊಂಡಿದ್ದಾನೆ.

ಅಸಲಿಗೆ ಈತ ಸರ್ಕಾರಿ ಕೆಲಸಕ್ಕೆ ಸೇರಿಕೊಂಡಿರುವುದೇ ಹತ್ತಾರು ಅನುಮಾನಗಳನ್ನು ಮೂಡಿಸುತ್ತದೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿಯೋ ಅಥವಾ ಪೊಲಿಟಿಕಲ್ ಪ್ರಭಾವ ಇಲ್ಲವೆ ಭಾರೀ ಲಂಚದ ಮರೆಯಲ್ಲಿ ನೌಕರಿ ಗಿಟ್ಟಿಸಿಕೊಂಡಿರಬಹುದೆನ್ನುವ ಸಂಶಯಗಳನ್ನು ಸ್ವತಃ ಸರ್ಕಾರಿ ದಾಖಲೆಗಳೇ ಹುಟ್ಟಿಸುತ್ತವೆ. ಈ ವಿಚಾರದಲ್ಲಿ ಮೊದಲನೇ ಆಹಾರವಾಗುವುದೇ ಆತನ ಡೇಟ್ ಆಫ್ ಬರ್ತ್. ಪೌರಾಡಳಿತ ನಿರ್ದೇಶನಾಲಯ ಪ್ರಕಟಿಸಿರುವ ವಿವಿಧ ಪುರಸಭೆಯ ಮುಖ್ಯಾಧಿಕಾರಿಗಳ ಜ್ಯೇಷ್ಠತಾ ಪಟ್ಟಿಯಲ್ಲಿ ತನ್ನ ಜನ್ಮ ದಿನಾಂಕವನ್ನು 03.08.1962 ಎಂಬುದಾಗಿ ನೀಡಿದ್ದರೆ ಹೊಸಕೋಟೆ ಪುರಸಭೆ ಸಿಬ್ಬಂದಿ ಮಾಹಿತಿ ಕಡತದಲ್ಲಿ 03.08.1960 ಎಂದು ನಮೂದಿಸಿಕೊಂಡಿದ್ದಾನೆ. ಅಲ್ಲಿಗೆ ಎರಡು ವರ್ಷಗಳ 'ಗ್ರೇಸ್' ಸೃಷ್ಟಿಸಿಕೊಂಡಿರುವುದು ಖಾತ್ರಿಯಾಗುತ್ತದೆ. ಇನ್ನು ವಿದ್ಯಾರ್ಹತೆಯಲ್ಲೂ ಅಂತಹದೇ ಗೊಂದಲವಿದೆ. ಪೌರಾಡಳಿತ ನಿರ್ದೇಶನಾಲಯದ ಜ್ಯೇಷ್ಠತಾ ಪಟ್ಟಿಯಲ್ಲಿ ಈತ ಬಿ.ಎಸ್ಸಿ ಮುಗಿಸಿಕೊಂಡಿದ್ದಾನೆ ಎಂದು ನಮೂದಾಗಿದ್ದರೆ ಸಿಬ್ಬಂದಿ ಮಾಹಿತಿ ಕಡತದ ಪ್ರಕಾರ ಈತ ಜಸ್ಟ್ ಪಿಯುಸಿ ಪಾಸ್ ಅಷ್ಟೆ!

ಹೀಗೆ ವಯೋಮಿತಿ ಮತ್ತು ವಿದ್ಯಾರ್ಹತೆ ಎರಡರಲ್ಲೂ ವ್ಯತ್ಯಾಸ ಬರುತ್ತಿರುವುದು ನೋಡಿದರೆ ಎಂತವರಿಗೆ ಆದರೂ ಗೋಲ್‌ಮಾಲ್ ನಡೆದಿರಬಹುದೆನ್ನುವ ಸಂಶಯ ಖಂಡಿತ ಮೂಡುತ್ತೆ. ಆತನ ಅಧಿಕಾರದ ದರ್ಪ, ದೌಲತ್ತುಗಳೂ ಇದನ್ನು ಪುಷ್ಟೀಕರಿಸುತ್ತಿವೆ.



ಇನ್ನೀತ ಚಕ್ಕಮಕ್ಕಳ ಹಾಕಿ ಸರ್ಕಾರಿ ಸೌಲತ್ತುಗಳನ್ನು ತಿನ್ನಲು ಕೂತನೆಂದರೆ ಯಾರ ಮುಲಾಜಿಗೂ ಜಗ್ಗುವ, ಬಗ್ಗುವ ಆಸಾಮಿಯೇ ಅಲ್ಲ. ಶಾಲಾ ಬ್ಯಾಗ್‌ಗಳ ಅವ್ಯವಹಾರದಿಂದ ಹಿಡಿದು ಸೈಟು ಹಂಚಿಕೆಯವರೆಗೆ ಪ್ರತಿಯೊಂದರಲ್ಲೂ ಈತನ ಹೆಸರು ತೇಲಿಬರುತ್ತಲೇ ಇರುತ್ತದೆ. ತನ್ನ ಸ್ವಂತ ಊರು ಶಿಡ್ಲಘಟ್ಟದ ಸುಗಟೂರಿನಲ್ಲಿ ಸಂಬಂಧಿಕರ, ತಮ್ಮನ, ತಂದೆ, ತಾಯಿಯ ಹೆಸರಿನಲ್ಲಿ ಈತ ಮಾಡಿಟ್ಟಿರುವ ಖಾಲಿ ಸೈಟು, ಮನೆ, ಆಸ್ತಿ-ಪಾಸ್ತಿಗಳು ಕೋಟಿಗಟ್ಟಲೆ ಬೆಲೆಬಾಳುವುದರಲ್ಲಿ ಸಂಶಯವೇ ಇಲ್ಲ. ಅವೆಲ್ಲ ರಾಮ್‌ಪ್ರಕಾಶ್‌ನ ಬೇನಾಮಿ ಗಳಿಕೆಗಳೆಂಬ ಗುಮಾನಿ ಇದೆ. ಇನ್ನು 1995ರಲ್ಲಿ ಹೊಸಕೋಟೆ ಪುರಸಭೆ ನಿವೇಶನಗಳ ಹರಾಜು ಸಮಯದಲ್ಲಿ ತನ್ನ ತಂಗಿ ರೇಣುಕಾ ಬಿನ್ ಅಶ್ವತಪ್ಪ ಹೆಸರಿಗೆ ಎರಡೆರಡು ಸೈಟು ಹಂಚಿಕೆ ಮಾಡಿರುವುದೂ ಬಯಲಾಗಿದೆ. ಅನವಶ್ಯಕ ಅನುಮಾನ ಬರಬಾರದೆಂದು ಮುತುವರ್ಜಿ ವಹಿಸಿರುವ ರಾಮ್‌ಪ್ರಕಾಶ್ ಒಬ್ಬ ರೇಣುಕಾ ಚಿಕ್ಕೊಂಡನಹಳ್ಳಿಯವಳು ಮತ್ತೊಬ್ಬ ರೇಣುಕಾ ಹೊಸಕೋಟೆಯ ವಿಶ್ವೇಶ್ವರಯ್ಯ ಬಡಾವಣೆಯವಳು ಎಂಬ ಬೋಗಸ್ ದಾಖಲೆಗಳನ್ನು ಸೃಷ್ಟಿಸಿ ವಂಚಿಸಿದ್ದಾನೆ. ಅಂದಹಾಗೆ ಈ ಎರಡು ವಿಳಾಸಗಳಲ್ಲಿ ಯಾವುದರಲ್ಲೂ ಆತನ ತಂಗಿ ರೇಣುಕಾ ಇಲ್ಲ, ಆಕೆ ಇರುವುದು ಮಾಲೂರಿನ ಚಿಕ್ಕತಿರುಪತಿಯಲ್ಲಿ.

ಇದು ರಾಮ್‌ಪ್ರಕಾಶ್‌ನ ಕಬಳಿಕೆಯ ಸ್ಯಾಂಪಲ್ ಮಾತ್ರ. ಇಂತಹ ಹತ್ತಾರು ಹಗರಣಗಳ ಮೂಲಕ ಕಮಾಯಿಗೆ ನಿಂತಿರುವ ಇವನ ವಿರುದ್ಧ ಅನೇಕ ಸಂಘ ಸಂಸ್ಥೆಗಳು ಬೀದಿಗಿಳಿದು ಹೋರಾಡಿದ್ದೂ ಇದೆ. ಅಂತದೇ ಒಂದು ಒತ್ತಡಕ್ಕೆ ಮಣಿದ ಪೌರಾಡಳಿತ ಇಲಾಖೆಯು 2010ರ ಜನವರಿಯಲ್ಲಿ ಈತನ ಮೇಲೆ ತನಿಖೆಯೊಂದನ್ನು ನಡೆಸಿತ್ತು. ಅವತ್ತು ರಾಮ್‌ಪ್ರಕಾಶ್ ಹಗರಣಗಳ ಸರಮಾಲೆಯ ನಡುವೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದ. 4,53,600 ರೂಪಾಯಿ ಮೌಲ್ಯದ ಚಮ್ ಕುರೀರ ಬಾಕ್ಸ್‌ಗಳನ್ನು ಫಲಾನುಭವಿಗಳಿಗೆ ವಿಲೇವಾರಿ ಮಾಡದೆ ಇರುವುದು, ಎಸ್ಸಿ/ಎಸ್ಟಿ ವಿದ್ಯಾರ್ಥಿಗಳಿಗೆ ಶಾಲಾಬ್ಯಾಗ್‌ಗಳನ್ನು ನೀಡದೆ ಇರುವುದು, ವೃತ್ತಿ ತರಬೇತಿ ಮತ್ತು ಸ್ನಾತಕೋತ್ತರ ವ್ಯಾಸಂಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವಂತೆ ಸರ್ಕಾರದಿಂದ ಆದೇಶವಿದ್ದರೂ ಅದನ್ನು ನಿರ್ಲಕ್ಷಿಸಿ ಅಪವ್ಯಯ ಮಾಡಿದ್ದು, 2008ನೇ ಸಾಲಿನ ದರಪಟ್ಟಿಯ ಟೆಂಡರ್‌ನಲ್ಲಿ ಅವ್ಯವಹಾರ ನಡೆಸಿದ್ದು, 2009ನೇ ಸಾಲಿನ 64.79 ಲಕ್ಷದ ಕ್ರಿಯಾ ಯೋಜನೆಯಲ್ಲಿ ಲೋಪವೆಸಗಿರುವುದು, ಅಕ್ರಮ ಒತ್ತುವರಿದಾರರಿಗೆ ಕಾನೂನುಬಾಹಿರ ಪರವಾನಗಿ ನೀಡಿದ್ದು, ಜಿಲ್ಲಾಧಿಕಾರಿಗಳಿಂದ ಭೂಪರಿವರ್ತನೆಯಾದ ಎಕರೆಗಟ್ಟಲೆ ಜಾಗದಲ್ಲೂ ನಿವೇಶನ ಕಟ್ಟಲು ಖಾಸಗಿಯಾಗಿ ಅನುಮತಿ ನೀಡಿದ್ದು, ಇವೇ ಮೊದಲಾದ ಸಾಲು ಸಾಲು ಅಕ್ರಮಗಳನ್ನು ಬಯಲಿಗೆಳೆದ ತನಿಖಾ ತಂಡ ರಾಮ್‌ಪ್ರಕಾಶನನ್ನು ನೇರ ಆರೋಪಿಯನ್ನಾಗಿಸಿ ಈ ಕೂಡಲೇ ಅಮಾನತು ಮಾಡುವಂತೆ ಶಿಫಾರಸ್ಸು ಮಾಡಿತ್ತು. ಅದರಂತೆ ಈತನನ್ನು 22.01.2010 ರಂದು ಸಸ್ಪೆಂಡ್ ಕೂಡ ಮಾಡಲಾಗಿತ್ತು.

ಆದರೆ ಪಾಪಿ ಚಿರಾಯು ಎನ್ನುವಂತೆ ತನಗಿದ್ದ ಪೊಲಿಟಿಕಲ್ ಪ್ರಭಾವವನ್ನೆಲ್ಲ ಪಣಕ್ಕಿಟ್ಟು, ಎರಡೇ ತಿಂಗಳಿಗೆ ಅಂದರೆ 31.03.2010 ಕ್ಕೆ ಸಸ್ಪೆಂಡ್ ಆದೇಶವನ್ನ ವಜಾಮಾಡಿಸಿ ಸೀಟಿಗೆ ಎಗರಿದ್ದ. ಇದಾದ ಮೇಲಂತೂ ತಾನಿನ್ನು ಯಾರಿಗೂ ಕೇರ್ ಮಾಡುವ ಹಂಗೇ ಇಲ್ಲವೆನ್ನುವಂತೆ ಹದ್ದು ಮೀರಿಹೋಗಿದ್ದಾನೆ.

ಲೈಂಗಿಕ ಕಿರುಕುಳದ ಕೇಸೂ ಇದೆ

ತನಗಿಂತ ಕಿರಿಯ ಅಧಿಕಾರಿಗಳೆಂದರೆ ಈತನಿಗೆ ಕಿಂಚಿತ್ತೂ ಕಾಳಜಿಯಿಲ್ಲ, ತಾನಿರುವುದೇ ಕೈಕೆಳಗಿನ ಸಿಬ್ಬಂದಿಗಳ ಮೇಲೆ ಸವಾರಿ ಮಾಡಲು ಎಂಬ ಭ್ರಮೆಯಲ್ಲಿರುವ ಮಹಾನ್ ದರ್ಪಿಷ್ಟ. ಬೇಕುಬೇಕೆಂತಲೇ ಕಿರುಕುಳ ನೀಡಿ ಸತಾಯಿಸುವುದು, ತನ್ನ ಪ್ರಭಾವದ ಪುರಕು ಹೇಳಿಕೊಂಡು ಬೆದರಿಸುವುದೆ ಅವನ ಡ್ಯೂಟಿ. ಅವಶ್ಯಕತೆ ಇಲ್ಲದಿದ್ದರೂ ಬೆಳಗ್ಗೆ ಬೇಗನೆ ಬಂದು ಕಚೇರಿಯಲ್ಲಿ ಕೂತಿರಬೇಕು, ರಾತ್ರಿ ಎಂಟಾದರೂ ಮನೆಗೆ ಹೋಗಬಾರದು, ಐದು ನಿಮಿಷ ತಡವಾದರೆ ಹಾಜರಾತಿಯಲ್ಲಿ ಗೈರುಹಾಜರಿಯ ಮಾರ್ಕ್ ಮಾಡುವುದು, ರಜಾ ದಿನಗಳಲ್ಲೂ ಕೆಲಸಕ್ಕೆ ಬರಬೇಕೆನ್ನುವುದು, ಇತ್ಯಾದಿ ತುಘಲಕ್ ರೂಲ್ಸ್‌ಗಳ ಮೂಲಕ ಖುಷಿ ಪಡುವ ವಿಕೃತ ಆಸಾಮಿ ಈತ. ಇನ್ನು ಬಾಯಿಬಿಟ್ಟನೆಂದರೆ ಸಭ್ಯತೆಗೆ ಆಸ್ಪದವೇ ಇರುವುದಿಲ್ಲ. ತನ್ನ ಸ್ಥಾನಕ್ಕೂ ಬೆಲೆಯಿಲ್ಲದಂತೆ ಮಹಿಳಾ ಸಿಬ್ಬಂದಿಗಳನ್ನೂ ಏಕವಚನದಲ್ಲಿ ನಿಂದಿಸುವ ರಾಮ್‌ಪ್ರಕಾಶ್‌ನ ಕಿರುಕ[ುಳ] ತಾಳದೆ ಈಗಾಗಲೆ ಸುಮಾರು ಮಂದಿ ಇಲ್ಲಿಂದ ತಾವಾಗಿಯೇ ವರ್ಗ ಮಾಡಿಸಿಕೊಂಡು ಹೋಗಿದ್ದ[ಾರೆ]. ಒಬ್ಬಾಕೆಯಂತು ಇವನ ಕಾಟ ಸಹಿಸಲಾಗದೆ ಕೆಲಸ[ಕ್ಕೆ] ರಾಜೀನಾಮೆ ಕೊಟ್ಟು ಹೋಗಿದ್ದೂ ಉಂಟು.

ಪ್ರೊಬೆಷನರಿ ಅವಧಿಯ ಹೊಸ ಕೆಲಸಗಾರರು ಸಿಕ್ಕಿಬಿಟ್ಟರೆ ಈತ ವಿಜೃಂಭಿಸಿಬಿಡುತ್ತಾನೆ. ಕೆಲಸ ಬರುವುದಿಲ್ಲವೆಂಬ ನೆಪವನ್ನೆ ಇಟ್ಟುಕೊಂಡು ಅವರ[ನ್ನು] ಹೀನಾಯವಾಗಿ ಬಳಸಿಕೊಳ್ಳುತ್ತಾನೆ. ಇಲ್ಲಿಯೇ ಎನ್ವಿರಾನ್‌ಮೆಂಟಲ್ ಇಂಜಿನಿಯರ್ ಆಗಿರುವ ಶೋ[...] ಎಂಬಾಕೆಗೂ ಇದೇ ರೀತಿ ಮಾನಸಿಕ, ಲೈಂಗಿಕ ಕಿರುಕುಳ ನೀಡಲು ಹೋಗಿ ತಗುಲಿಕೊಂಡಿದ್ದ. ತನ್ನ ಕೊಠಡಿಗೆ ಕರೆಸಿಕೊಂಡು ಡ್ರೆಸ್ ಬಗ್ಗೆ ಕಮೆಂಟ್ ಮಾಡುವುದು, ಸುಖಾಸುಮ್ಮನೆ ಎದುರು ನಿಲ್ಲಿಸಿಕೊಳ್ಳುವುದು, ಅಸಹ್ಯವಾಗಿ ಬಯ್ಯುವುದು, ಮುಜುಗರವಾಗುವಂತಹ ಸನ್ನಿವೇಶಗಳನ್ನು ಸೃಷ್ಟಿಸುವುದು, ಫೀಲ್ಡ್ ವರ್ಕ್‌ನ ನೆಪ ಹೇಳಿ ತನ್ನ ಕಾರಿನಲ್ಲಿ ಕೂರಿಸಿಕೊಂಡು ಬೆಂಗಳೂರಿಗೆ ಕರೆತರುವ[ುದು] ಹೀಗೆ ತರಹೇವಾರಿಯಾಗಿ ಬಳಸಿಕೊಂಡಿದ್ದ ಆತನ ವಿರುದ್ಧ ಆಕೆ ಮೇಲಧಿಕಾರಿಗಳಿಗೆ ದೂರು ನೀಡಿದ್ದ[ಳು]. ಮಹಿಳಾ ಲೈಂಗಿಕ ಕಿರುಕುಳ ತಡೆಯುವ ದೂರು ನಿವಾರಣ ಸಮಿತಿಯೂ ತನಿಖೆ ನಡೆಸಿ ರಾಮ್‌ಪ್ರಕಾಶ್‌ನದ್ದೇ ತಪ್ಪಿರುವುದನ್ನು ವರದಿಯಲ್ಲಿ ಸ್ಪಷ್ಟವಾಗಿ ಹೇಳಿತ್ತು. ಆದರು ಮೇಲಧಿಕಾರಿಗಳು ಇ[ವನ] ಮೇಲೆ ಕ್ರಮಕೈಗೊಳ್ಳಲು ಇದುವರೆವಿಗೂ ಮುಂದಾಗಿಲ್ಲ.

ಒಟ್ಟಿನಲ್ಲಿ ಹೊಸಕೋಟೆ ಪುರಸಭೆಗೆ ಗೆದ್ದಲು ಮೆತ್ತಿದಂತೆ ಅಂಟಿಕೊಂಡಿರುವ ರಾಮ್‌ಪ್ರಕಾಶ್ ಇಡ[ೀ] ಕಚೇರಿಯ ವಾತಾವರಣವನ್ನೆ ಗಬ್ಬೆಬ್ಬಿಸಿ ತಾನು ಮಾ[...] ಪುರುಸೊತ್ತಿಲ್ಲದಂತೆ ಮೇಯಲು ಕೂತಿದ್ದಾನೆ. ಇವ[ನ] ಮೇಲೆ ಈಗಾಗಲೇ ಲೋಕಾಯುಕ್ತದವರೆಗೆ ಕಂಪ್ಲೇ[ಂಟ್] ಹೋಗಿದ್ದು ಶೀಘ್ರದಲ್ಲೆ ಗ್ರಹಚಾರ ಮೈಮೇಲೆರಗುವ ಲಕ್ಷಣಗಳು ದಟ್ಟವಾಗಿವೆ.

● ಗಿರೀ[...]

ಕಚೇರಿ ಕಡತಗಳಿಗೇ ಬೆಂ[ಕಿ]

ಕಳೆದ ವರ್ಷ ಫೆಬ್ರವರಿ 18 ರಂದು ರಾತ್ರಿ ಸು[ಮಾರು] ಎಂಟು ಗಂಟೆಯ ಸುಮಾರಿಗೆ ಹೊಸಕೋಟೆ ಪು[ರಸಭೆ] ಕಾರ್ಯಾಲಯದ ಕೊಠಡಿಯಲ್ಲಿ ಇದ್ದಕ್ಕಿದ್ದಂತೆ ಕಾಣಿಸಿ[ಕೊಂಡ] ಬೆಂಕಿ ಸುಮಾರು ಎರಡು ಲಕ್ಷ ಬೆಲೆಬಾ[ಳುವ] ಪೀಠೋಪಕರಣಗಳ ಜೊತೆಗೆ ಇಪ್ಪತ್ತು ವರ್ಷಗಳ ಅತ್ಯ[...] ಕಡತಗಳನ್ನು ಸುಟ್ಟು ಭಸ್ಮ ಮಾಡಿತ್ತು. ಅಲ್ಲಿಗೆ ಈ ಸುದ[ೀರ್ಘ] ಕಾಲಾವಧಿಯ ಹಗರಣಗಳೆಲ್ಲ ಕಿಂಚಿತ್ತೂ ಸುಳಿವಿಲ್ಲ[ದೆ] ನಿರಾಯಾಸವಾಗಿ ನಾಶವಾಗಿದ್ದವು. ಪೊಲೀಸ್ ಕಂಪ್ಲೇ[ಂಟ್] ಪ್ರಕಾರ ಯಾರೊ ಕಿಡಿಗೇಡಿಗಳು ಕಿಟಕಿಯಿಂದ ಗ[...] ಬೆಂಕಿಯಿಂದಾಗಿ ಅನಾಹುತ ಸಂಭವಿಸಿರುವುದು ಸ್ಪಷ್ಟ[...] ಲಾಭ ಇಲ್ಲದ ಹೊರತು ಕಚೇರಿ ಕಡತಗಳನ್ನು ಸು[ಡುವ] ಜರೂರತ್ತು ಯಾರಿಗಾದರೂ ಯಾಕಿರುತ್ತೆ...?

ಶ್ರೀ ರಾಮನೇ ಬಲ್ಲ!


ಶಿಕ್ಷಕರ ದಿನಾಚರಣೆಯಲ್ಲೂ ಜಾತಿ ಭೇದವೇ?

ಬಂದು ಪತ್ರ

ಡಾ.ರಾಧಾಕೃಷ್ಣನ್ ಅವರ ಜನ್ಮದಿನವನ್ನೇ ಇಲ್ಲಿಯವರೆಗೆ ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಅದಕ್ಕೆ ಕೊಟ್ಟ ಕಾರಣ ರಾಧಾಕೃಷ್ಣನ್ ಅವರು ಆದರ್ಶ ಶಿಕ್ಷಕರಾಗಿದ್ದರು ಎಂಬುದು.

ಆದರೆ ರಾಧಾಕೃಷ್ಣನ್ ಅವರು ಹುಟ್ಟುವುದಕ್ಕಿಂತ 40 ವರ್ಷಗಳ ಮುಂಚೆಯೇ ಎರಡು ಮಹಾನ್‌ಚೇತನಗಳು ನೋವು, ಅಪಮಾನ ಅನುಭವಿಸಿಯೂ ಭಾರತ ದೇಶದ ಎಲ್ಲ ನಿವಾಸಿಗಳಿಗೆ ಶಿಕ್ಷಣದ ಬಾಗಿಲನ್ನು ತೆರೆದು ಮಹದುಪಕಾರ ಮಾಡಿದ್ದರು. ಅವರು ಜೋತಿಬಾ ಫುಲೆ ಮತ್ತು ಅವರ ಪತ್ನಿ ಸಾವಿತ್ರಿಬಾ ಫುಲೆ.

ಸಾಮ್ರಾಟ ಅಶೋಕನ ಏಳನೇ ತಲೆಮಾರಿನ ಮೊಮ್ಮಗ, ಮೌರ್ಯ ಸಾಮ್ರಾಜ್ಯದ ಕೊನೆಯ ಅರಸ ಬೃಹದ್ರಥ ಮೌರ್ಯನನ್ನು ಪುಷ್ಯಮಿತ್ರ ಸುಂಗ ಎಂಬಾತ ಸಂಚಿನಿಂದ ಕೊಲ್ಲಿಸಿದ. ಆನಂತರ ಸುಮತಿ ಭಾರ್ಗವ ಎಂಬುವವನ ಕೈಯಿಂದ ಮನುಶಾಸ್ತ್ರ ಎಂಬುದನ್ನು ಬರೆಸುವುದರ ಮೂಲಕ ನಾಲ್ಕು ವರ್ಣಗಳನ್ನು ಸೃಷ್ಟಿಸಲಾಯಿತು. ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದವರೆಲ್ಲರಿಗೂ ಶಿಕ್ಷಣ ಪಡೆಯುವುದನ್ನು ನಿರಾಕರಿಸಲಾಯಿತು. ಇದು ನಡೆದಿದ್ದು ಕ್ರಿಪೂ. 185 ರಲ್ಲಿ. ಮತ್ತೆ ಭಾರತದ ನಿವಾಸಿಗಳು ಶಾಲೆಗೆ ಹೋಗಲು ಪ್ರಾರಂಭಿಸಿದ್ದು, ಶಿಕ್ಷಣ ಪಡೆದುಕೊಂಡಿದ್ದು 2000 ವರ್ಷಗಳ ನಂತರ ಕ್ರಿ.ಶ. 1835 ರಲ್ಲಿ, ಅದು ಬ್ರಿಟಿಷ್ ಲಾರ್ಡ್ ಮೆಕಾಲೆಯ 'ಸಾರ್ವಜನಿಕ ಶಿಕ್ಷಣ ನೀತಿ' ಎಂಬ ಕಾಯ್ದೆಯಿಂದಾಗಿ!



ಹಿಂದುಳಿದ ಜಾತಿಗೆ ಸೇರಿದ ಮಹಾತ್ಮ ಜ್ಯೋತಿಬಾ ಫುಲೆ ಅ[ವರು] ಆಗಸ್ಟ್ 1848 ರಲ್ಲಿ ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ಪೂನಾ[ದಲ್ಲಿ] ಎಲ್ಲಾ ಜಾತಿ, ಜನಾಂಗದವರಿಗಾಗಿ, ಮಹಿಳೆಯರಿಗಾಗಿ, ಶಾಲೆಯನ್ನು ತೆರೆದ[ು] ತಮ್ಮ ಪತ್ನಿ ಸಾವಿತ್ರಿಬಾ ಫುಲೆ ಅವರನ್ನೇ ಶಿಕ್ಷಕಿಯನ್ನಾಗಿ ನಿಯೋಜಿಸಿ[ದರು]. ಇದಿಷ್ಟು ಇತಿಹಾಸದಲ್ಲಿ ದಾಖಲಾಗಿರುವ ವಾಸ್ತವಾಂಶ. ಅಂದರೆ, ಐತಿಹಾ[ಸಿಕ] ದಾಖಲೆಗಳನ್ನು ಆಧಾರವಾಗಿಟ್ಟುಕೊಂಡರೆ ಭಾರತದಲ್ಲಿ ಮೊಟ್ಟಮೊ[ದಲ] ಶಾಲೆಯನ್ನು ತೆರೆದವರು ಮಹಾತ್ಮ ಜ್ಯೋತಿಬಾ ಫುಲೆ (ಬ್ರಿಟಿಷ್ ಮಿಷನರಿಗ[ಳನ್ನು] ಹೊರತುಪಡಿಸಿ) ಮತ್ತು ಮೊದಲ ಶಿಕ್ಷಕಿ ಸಾವಿತ್ರಿಬಾ ಫುಲೆ.

'ಸಾರ್ವಜನಿಕ ಶಿಕ್ಷಣ ನೀತಿ' ಕಾಯ್ದೆ ಜಾರಿಯಾದಾಗ (1835) ಸಾವಿ[ತ್ರಿಬಾ] ಫುಲೆಯವರು ಶಿಕ್ಷಕಿಯಾಗಿ ಕೆಲಸ ಮಾಡಿದಾಗ ಡಾ. ರಾಧಾಕೃಷ್ಣನ್ ಅವರಿ[...] 1848 ರಲ್ಲಿ ಭಾರತದಲ್ಲಿ ಪ್ರಥಮವಾಗಿ ಶಾಲೆ ತೆರೆದಾಗಲೂ ಅವರಿ[...] ಅವರು ಹುಟ್ಟಿದ್ದೇ 1888 ಸೆಪ್ಟೆಂಬರ್ 5 ರಂದು! ಇಲ್ಲಿ ನನಗೊ[ಂದು] ಅನುಮಾನ: ಯಾರ ಹೆಸರಿನ ಮೇಲೆ ಶಿಕ್ಷಕರ ದಿನಾಚರಣೆ ಆಚರಿಸಲ್ಪಡಬೇ[ಕು]? ಮಹಾತ್ಮ ಜ್ಯೋತಿಬಾ ಫುಲೆ? ಸಾವಿತ್ರಿಬಾ ಫುಲೆ? ಡಾ. ರಾಧಾಕೃಷ್ಣ[ನ್]? ಲಾರ್ಡ್ ಮೆಕಾಲೆ? ಶಿಕ್ಷಕರ ದಿನಾಚರಣೆಯಲ್ಲಿಯೂ [...] ಮಾನದಂಡವಾಯಿತೆ? ಸಾವಿತ್ರಿಬಾ ಫುಲೆಯವರು 'ಮಹಿಳೆ' ಎನ್ನುವ ಕಾ[ರಣಕ್ಕೆ] ಕಡೆಗಣಿಸಲ್ಪಟ್ಟಿದ್ದರೆ?

ಈ ಕುರಿತು ಮುಸುಕಾಗಿದ್ದ ಸತ್ಯ ಮೆಲ್ಲನೆ ಸರಿದು ಬೆಳಕಾಗಲಿ.

● ಜಗನ್ನಾಥ. ಎಸ್.ಚಿಂಗಟಾ, ಗುಲ್ಬ[ರ್ಗಾ]

ಮಾರ್ಜಿನ್ ಸ್ಪೀಕ್: ಮಾನೇಸರ್‌ನಲ್ಲಿ ಮಾವೋವಾದಿಗಳು

ಊಹಿಸಿದಂತೆ, ಜುಲೈ 18ರಂದು ಹರಿಯಾಣದ ಸರ್‌ನ ಮಾರುತಿ ಸುಜುಕಿ ಕಾರ್ಖಾನೆಯ ಚಾರದಲ್ಲಿ ಕಾರ್ಮಿಕರು ಮತ್ತು ಆಡಳಿತ ವರ್ಗದ ನ ಗಲಭೆಗಳ ಹಿಂದೆ ಮಾವೋವಾದಿಗಳ ಕೈವಾಡ ಲಾಗಿದೆ. ದುಃಖದ ಸಂಗತಿಯೆಂದರೆ ಕಂಪನಿಯ ಮ್ಯಾನೇಜರ್ ಅವಿನಾಶ್ ಕುಮಾರ್ ದೇವ್ ತ್ತು, 93 ಜನ ಇತರರು ಗಾಯಗೊಂಡರು. ವ್ಯವಸ್ಥೆ ತ್ತ ನಿರ್ಮಿಸಿಕೊಂಡ ಹಲವು ಸುತ್ತಿನ ಗೋಡೆಗಳನ್ನು ಆಕ್ರೋಶಗೊಂಡ ಜನಸಮುದಾಯ ತನ್ನ ಅಸಂತೃಪ್ತಿ ಸಿದಾಗಲೆಲ್ಲ ಸರ್ಕಾರ ಅವರಿಗೆ ಮಾವೋವಾದಿಗಳೆಂಬ ಟ್ಟಿ ಹಚ್ಚುವುದು ಹೊಸತೇನಲ್ಲ. ದಲಿತರು ಮತ್ತು ಟಿಗರು ಸುಲಭದಲ್ಲಿ ಈ ಚೌಕಟ್ಟಿನಲ್ಲಿ ಸಿಕ್ಕಿಬೀಳುತ್ತಾರೆ. ದ ಆಜ್ಞೆಯಿದ್ದಾಗ್ಯೂ ತಮ್ಮ ಮೂಲನೆಲೆ ಬಿಡಲು ಬಸ್ತಾರ್‌ನ ಬುಡಕಟ್ಟು ಜನರನ್ನು ೋವಾದಿಗಳೆಂದು ಹೆಸರಿಸಿ ಸರ್ಕಾರವೇ ಅವರ ಮೇಲೆ ಮಾಡಿತು. ಖೈರ್ಲಾಂಜಿ ಹತ್ಯಾಕಾಂಡದ ವಿರುದ್ಧ ರು ಸ್ವಯಂಸ್ಫೂರ್ತಿಯಿಂದ ಪ್ರತಿಭಟನೆಗಿಳಿದಾಗಲೂ ನ್ನ ಮಾವೋವಾದಿಗಳೆಂದು ಹೆಸರಿಸಿ ಹತ್ತಿಕ್ಕಲಾಯಿತು. ನಾಯಕರ ಆರ್ಥಿಕ ನೀತಿಗಳಿಂದ ಪ್ರಭಾವಿತರಾದ ಕರನ್ನು ಇತ್ತೀಚಿನವರೆಗೂ ಮಾವೋವಾದಿಯೆಂಬ ಟ್ಟಿಯಿಂದ ಹೊರಗಿಡಲಾಗಿತ್ತು. ಆದರೆ ದೆಹಲಿಯ ಬಳಿಯೇ ಇರುವ ಮುಖ್ಯ ಕೈಗಾರಿಕಾ ನೆಲೆಯಲ್ಲಿ ರ್ಷದ ಹಿಂದೆ ಹೊಂಡಾ ಕಾರ್ಖಾನೆಯ ಕಾರ್ಮಿಕರು ಈಗ ಒಂದು ವರ್ಷದಿಂದ ಮಾರುತಿ ಕಂಪನಿಯ ಕರು ಹಿಂಸಾತ್ಮಕ ಪ್ರತಿಭಟನೆಗಿಳಿದಿರುವಾಗ ಅವರನ್ನೂ, ೋಹನ್ ಸಿಂಗ್ ಕರೆಯುವಂತೆ, 'ಆಂತರಿಕ ಭದ್ರತೆಗೆ ಡ್ಡ ಅಪಾಯ'ವಾದ ಮಾವೋವಾದಿಗಳ ಸಾಲಿಗೆ ಲಾಯಿತು.

ಹುಚ್ಚುತನದ ವಿಧಗಳು

ಮಾವೋವಾದಿಗಳಿಗಿರುವ ಬೆಂಬಲದ ಬಗ್ಗೆ ಅತಿರಂಜಿತ ಗಳನ್ನು ಹರಡುವುದಷ್ಟೇ ಅಲ್ಲ, ಭಾರತ ಸರ್ಕಾರ ೋವಾದಿಗಳ ಬಗ್ಗೆ ಅನಗತ್ಯ ಭ್ರಾಂತಿ ಹೊಂದಿದೆ. ತಿಕವಾಗಿ ಅವರೇನೋ ಸರ್ಕಾರಕ್ಕೆ ಸವಾಲಾಗಿರುವುದು . ಮಾವೋ ಸಿದ್ಧಾಂತವನ್ನು ಜನಸಮುದಾಯ ದರೂ ಅಳವಡಿಸಿಕೊಂಡರೆ ಅದು ರಾಷ್ಟ್ರಕ್ಕೆ ಂತರಕಾರಿಯಾಗಿ ಪರಿಣಮಿಸುವುದೂ ಹೌದು. ಆದರೆ ವೆಂದರೆ ಅದು 'ರೆ' ರಾಜ್ಯದ ಕನಸಷ್ಟೇ. ಸೂಕ್ಷ್ಮವಾಗಿ ಶೆ ನಡೆಸಿದರೆ ತಿಳಿಯುತ್ತದೆ, ಮಾವೋವಾದಿಗಳು ತ ಸರ್ಕಾರವನ್ನು ಉರುಳಿಸುವ ಅಥವಾ ಆ ದಿಕ್ಕಿನಲ್ಲಿ ದುವರೆಯುತ್ತಿರುವ ಯಾವ ಲಕ್ಷಣಗಳೂ ಕಾಣುವುದಿಲ್ಲ. ಅವರು ಛತ್ತೀಸ್‌ಘಡ್, ಜಾರ್ಖಂಡ್, ಒರಿಸ್ಸಾ ಮಹಾರಾಷ್ಟ್ರಗಳ ದಟ್ಟ ಕಾಡುಗಳಿಗೆ ಒತ್ತಲ್ಪಟ್ಟಿದ್ದಾರೆ. ಮುಖ್ಯ ನಾಯಕರಲ್ಲಿ ಹಲವರು ಜೈಲಿನಲ್ಲಿದ್ದಾರೆ. ತಿಕವಾಗಿ ಅವರ ಪ್ರಭಾವ ಈ ದಾರಿಗಿಂತಲೂ ಚಾಚಿಕೊಂಡಿದೆ, ಆದರೆ ಅದು ಸರ್ಕಾರ ಊಹಿಸುವಷ್ಟು ತ ಅಲ್ಲ, ಉಳ್ಳವರ ಪರವಾದ ತನ್ನ ನವ ಉದಾರವಾದಿ ರಣೆಯಿಂದ ಅಪಾರ ಜನಸಮುದಾಯವನ್ನು ಘಗೊಳಿಸಿ; 'ತೆರವುಗೊಳಿಸುವ' ನೆಪದ ದುರ್ವರ್ತನೆ ದ ಮುಗ್ಧ ಜನರನ್ನು ತೊಂದರೆಗೀಡುಮಾಡಿ; ಪ್ರಭುತ್ವದ ಪೊಳ್ಳುತನವನ್ನು ಪ್ರಭುತ್ವ ತಾನೇ ಬಯಲು ಡದಿದ್ದರೆ ಮಾವೋವಾದಿಗಳು ಈಗ ಎಷ್ಟು ದ್ದಾರೋ ಅಷ್ಟೇ ಸಂಖ್ಯೆಯ ಜನರನ್ನೂ ಚಳವಳಿಗೆ ಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹೀಗೆ ಪ್ರಭುತ್ವವು ನಿರ್ಲಕ್ಷ್ಯ ಮತ್ತು ದಮನಕಾರಿ ಧೋರಣೆಗಳಿಂದ ವೋವಾದದತ್ತ ಜನಸಮುದಾಯ ಮತ್ತಷ್ಟು ತಗೊಳ್ಳುವಂತೆ ಮಾಡುತ್ತಿದೆ.

ಪ್ರಭುತ್ವ ತನ್ನ ಗೋರಿ ತಾನೇ ಏಕೆ ತೋಡಿಕೊಳ್ಳುತ್ತಿದೆ? ಉತ್ತರ ಅದು ಅಳವಡಿಸಿಕೊಂಡಿರುವ ಅತಾರ್ಕಿಕ ಉದಾರವಾದಿ ಧೋರಣೆಗಳಲ್ಲಿದೆ. ಈ ಧೋರಣೆ ಸ್ಪರ್ಧೆಯ ಹೆಸರಿನಲ್ಲಿ ಮಾನವನ ಅತಿಯಾಸೆಯನ್ನು ೀಕರಿಸುವ, ಕೊಳ್ಳುಬಾಕತನವನ್ನು ಪವಿತ್ರೀಕರಿಸುವ, ಜಿಕ ಡಾರ್ವಿನಿಸಂ ಅನ್ನು ಎತ್ತಿಹಿಡಿಯುವುದೇ ಅಲ್ಲದೇ; ರೆಕೆಯಷ್ಟು ಅವಕಾಶ ಪಡೆದವರು ಬಹುಸಂಖ್ಯಾತರ ಸ್ಕೂಲ ಮತ್ತು ಅವಕಾಶವನ್ನು ಕಸಿದುಕೊಳ್ಳಲು ಅನುವು ಕೊಡುತ್ತದೆ. ಇದು ಎಷ್ಟು ಅಸಂಬದ್ಧವಾಗಿದೆಯೆಂದರೆ ನ ಗೋರಿಯನ್ನೂ ಅದೇ ತೋಡುತ್ತಿದೆ. ಈ ಬದ್ಧತೆಯೇ ಕ್ಯಾನ್ಸರಿನಂತೆ ಹಬ್ಬುತ್ತಿರುವ ಆರ್ಥಿಕ ಬಿಕ್ಕಟ್ಟಿಗೆ ವಾಗಿ ಜಗತ್ತನ್ನು ಕುಸಿದುಬೀಳುವ ಅಂಚಿಗೆ ತಂದು ದೆ. ಈ ಅಸಂಬದ್ಧತೆಯೇ ಅದರ ಪ್ರತಿಪಾದಕರಿಗೆ ಷ ದೃಷ್ಟಿಯನ್ನೂ ನೀಡಿರುವುದರಿಂದ, ದೀರ್ಘಕಾಲದಲ್ಲಿ ತಿಯೆಗಳು ತಮಗೇ ಮುಳುವಾಗುವುದೆನ್ನುವುದನ್ನು ಹಿಸಲು ಅವರು ವಿಫಲವಾಗಿದ್ದಾರೆ. ತಮ್ಮ ಪಾದಕ ಅಸ್ತ್ರಗಳನ್ನು 'ಭಯೋತ್ಪಾದನೆಯ ವಿರುದ್ಧ ದ್ಧ' ಅಥವಾ 'ಆಂತರಿಕ ಭದ್ರತೆ' ಅಥವಾ



'ಮಾವೋವಾದಿಗಳ ವಿರುದ್ಧ ಕಾರ್ಯಾಚರಣೆ'ಯ ಹೆಸರಿನಲ್ಲಿ ಎಗ್ಗಿಲ್ಲದೇ ಬಳಸುತ್ತಿದ್ದಾರೆ. ಪ್ರಭುತ್ವವು ಜನರನ್ನು ಶರಣಾಗುವಷ್ಟು ಭಯಗೊಳಿಸುತ್ತಿದೆ. ಅಲ್ಲದೇ ಹೆಚ್ಚುತ್ತಿರುವ ಅಸಮಾನತೆ, ತಳಸಮುದಾಯಗಳು ಮತ್ತಷ್ಟು ಅಂಚಿಗೆ ಸರಿಯುತ್ತಿರುವುದು, ಉಳ್ಳವರ ಪರವಾದ ನೀತಿಯ ಬಗೆಗೆ ಪೂರ್ವಗ್ರಹ ಮತ್ತು ವ್ಯವಸ್ಥಿತವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಶಿಥಿಲಗೊಳ್ಳುತ್ತಿರುವುದು - ಇವು ಜನಸಮುದಾಯದಲ್ಲಿ ಪ್ರತಿರೋಧವನ್ನು ಉದ್ದೀಪಿಸುತ್ತಿವೆ. ಮಾನೇಸರ್‌ನಲ್ಲಿ ಮಾರುತಿ ಸುಜುಕಿ ಕಾರ್ಮಿಕರ ಪ್ರತಿರೋಧವು ದೆಹಲಿ ಆಸುಪಾಸಿನ ಕೈಗಾರಿಕಾ ವಲಯದಲ್ಲಿ ವರ್ಗ ಸಂಘರ್ಷವನ್ನು ಹುಟ್ಟುಹಾಕುವ ಎಲ್ಲ ಲಕ್ಷಣಗಳನ್ನೂ ತೋರಿಸುತ್ತಿರುವಾಗ ಸರ್ಕಾರವು ಅದನ್ನು ಮಾವೋವಾದಿಗಳ ಕೃತ್ಯ ಎಂದು ಹೆದರಿಸಿ ಅದನ್ನು ಹತ್ತಿಕ್ಕಲು ಲಭ್ಯವಿರುವ ಹೆಚ್ಚುವರಿ ಬಲವನ್ನು ಬಳಸಿಕೊಳ್ಳುತ್ತಿದೆ.



ಮಾನೇಸರ್‌ನ ಆಶಾವಾದ

ಕುಖ್ಯಾತ ಖಾಪ್ ಪಂಚಾಯತ್‌ಗಳು ಕಾರ್ಯ ನಡೆಸುವ, ಸಾಂಪ್ರದಾಯಿಕ ಹಿಂದಿ ಹೃದಯಭೂಮಿಯಲ್ಲಿರುವ ಮಾನೇಸರ್ ಭಾರತದ ಭಾಗಶಃ ಜಮೀನ್ದಾರೀ ವ್ಯವಸ್ಥೆಯ ಪ್ರತಿನಿಧಿಯಂತಿದೆ. ಅದು ಕಾರು ಕಾರ್ಖಾನೆಗಳ ನೆಲೆಯಾಗಿ ಬಂಡವಾಳಶಾಹಿಯು ಜಾಗತೀಕರಣಗೊಂಡು ಭಾರತಕ್ಕೂ ವಿಸ್ತರಿಸಿದ್ದನ್ನು ಪ್ರತಿನಿಧಿಸುವಂತಿದೆ. ಮಾನೇಸರ್‌ನ ಎರಡು ಪ್ರಮುಖ ಕಾರು ತಯಾರಿಕಾ ಘಟಕಗಳಲ್ಲಿ ನಡೆದ ಸಂಘರ್ಷ ಈ ಎರಡು ವೈರುಧ್ಯಗಳೂ ಪರಸ್ಪರ ಸಂಧಿಸುವಂತೆ ಮಾಡಿತು. ಸಾಮಾಜಿಕ ಅವನತಿ ಮತ್ತು ಆರ್ಥಿಕ ಅಭಿವೃದ್ಧಿ ಈ ಎರಡನ್ನೂ ಸ್ವಲ್ಪವೂ ಹಿಂಜರಿಕೆಯಿಲ್ಲದೆ ಉತ್ತೇಜಿಸುವ ಹರಿಯಾಣ ರಾಜ್ಯ ಸರ್ಕಾರದ ನಿಜಮುಖವೂ ಈ ಹೊತ್ತಿನಲ್ಲಿ ಬಯಲಿಗೆ ಬಂತು. ಜುಲೈ 23ರಂದು ಎಲ್ಲಾ ರಾಜಕೀಯ ಪಕ್ಷಗಳಿಗೆ ಸೇರಿದ ಸ್ಥಳೀಯ ನಾಯಕರು ಖಾಪ್ ಪಂಚಾಯ್ತಿ ಸೇರಿಸಿ ಮಾರುತಿ ಸುಜುಕಿ ಫ್ಯಾಕ್ಟರಿಯ ಕಾರ್ಮಿಕ ಸಂಘವನ್ನು ಬಲಪ್ರಯೋಗಿಸಿಯಾದರೂ ಹತ್ತಿಕ್ಕಬೇಕು ಹಾಗೂ ಯಾವ ಬೆಲೆ ತೆತ್ತಾದರೂ ಸರಿ, ಕಾರ್ಖಾನೆ ನಡೆಯಬೇಕು ಎಂಬ ನಿರ್ಣಯ ಅಂಗೀಕರಿಸಿದರು. ಅದೇ ವೇಳೆಗೆ ಹೊಂಡಾ ಮೋಟಾರ್ಸ್ ಕಾರ್ಮಿಕರ ವಾರ್ಷಿಕ ಕಾರ್ಮಿಕ ಒಕ್ಕೂಟದ ಸಮ್ಮೇಳನವನ್ನೂ ನಿಲ್ಲಿಸಬೇಕೆಂದು ತಾಕೀತು ಮಾಡಲಾಯಿತು. ಜಾಗತೀಕರಣ ಮತ್ತು ಅರೆಜಮೀನ್ದಾರೀ ವ್ಯವಸ್ಥೆಗಳು ಯಶಸ್ವಿಯಾಗಿ ಒಗ್ಗೂಡಿದ್ದರೂ ಮಾರುತಿ ಸುಜುಕಿ ಕಾರ್ಮಿಕರು ಅಭೂತಪೂರ್ವ ಹೋರಾಟ ಕಟ್ಟಿದರು. ಸಾಧಾರಣವಾಗಿ ಕಾರ್ಮಿಕ ಸಂಘಗಳು ಕಾಯಂ ಕಾರ್ಮಿಕರನ್ನಷ್ಟೇ ಪ್ರತಿನಿಧಿಸುತ್ತಿದ್ದರೆ ಮಾರುತಿ ಸುಜುಕಿ ಕಾರ್ಮಿಕ ಸಂಘವು ಸಾಮಾನ್ಯ ಹಾಗೂ ಗುತ್ತಿಗೆ ಕಾರ್ಮಿಕರನ್ನೂ ತನ್ನೊಟ್ಟಿಗೆ ಸೇರಿಸಿಕೊಂಡು ವರ್ಗಐಕ್ಯತೆಯನ್ನು ತೋರಿಸಿತು. ಹಾಗೆ ನೋಡಿದರೆ ಕಾಯಂ ನೌಕರರಿಗೆ ವೇತನ ಪರಿಷ್ಕರಣೆಯಾಗುತ್ತಿದ್ದ ಸಮಯದಲ್ಲಿ ಯೂನಿಯನ್‌ನ ಮುಖ್ಯ ಬೇಡಿಕೆ ಗುತ್ತಿಗೆ ಕಾರ್ಮಿಕರ ವೇತನ ಪರಿಷ್ಕರಣೆಯಾಗಬೇಕೆನ್ನುವುದಾಗಿತ್ತು. ಹೀಗೆ ಸಂಘವು ಐಕ್ಯತೆಯ ತತ್ವದ ಮೇಲೆ ತನ್ನ ಹೋರಾಟ ರೂಪಿಸಿ, ಕಾರ್ಮಿಕ ಹೋರಾಟಗಳನ್ನು ಒಡೆಯಲು ಇರುವ ಸಿದ್ಧ ಮಾರ್ಗವಾದ ಆರ್ಥಿಕ ಆಮಿಷಗಳಿಗೆ ಬಲಿಯಾಗದೇ ಉಳಿಯಿತು.

ತನ್ನ ಸದಸ್ಯರಿಗೆ ಉತ್ತಮ ಪಾಲು ಕೊಡಿಸಲು ಸಂಘವು ಕಳೆದ ಹಲವು ವರ್ಷಗಳಿಂದ ಪ್ರಯತ್ನ ನಡೆಸುತ್ತ ಬಂದಿತ್ತು. ಕಳೆದ ವರ್ಷ ಆಡಳಿತ ಮಂಡಳಿಯ ಕಠಿಣ ನಿಲುವಿಗೆ ವಿರುದ್ಧವಾಗಿ ಮೂರು ಮುಷ್ಕರಗಳನ್ನು ಆಯೋಜಿಸಿತ್ತು. ಇಂತಹ ಆತಂಕ ತುಂಬಿದ ವಾತಾವರಣದಲ್ಲಿ ಒಬ್ಬ ಮೇಲ್ವಿಚಾರಕ ದಲಿತ ಕಾರ್ಮಿಕನಿಗೆ ಜಾತಿನಿಂದನೆಯ ಮಾತುಗಳನ್ನು ಹೇಳಿದ. ಕಾರ್ಮಿಕ ಸಂಘವು ಆ ಮೇಲ್ವಿಚಾರಕನ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಡಳಿತ ಮಂಡಳಿಯನ್ನು ಒತ್ತಾಯಿಸಿದರೆ ಮಂಡಳಿಯು ದಲಿತ ಕಾರ್ಮಿಕನನ್ನೇ ದುರ್ನಡತೆಯ ಹಣೆಪಟ್ಟಿ ಅಂಟಿಸಿ ಕೆಲಸದಿಂದ ತೆಗೆದು ಹಾಕಿತು. ಸಂಘವು ಈ ವಿಷಯ ಇತ್ಯರ್ಥವಾಗಲೇಬೇಕೆಂದು ಪಟ್ಟುಹಿಡಿಯಿತು ಮತ್ತು ಸಂಧಾನ ಮಾತುಕತೆಯನ್ನು ಬಯಸಿತು. ಆದರೆ ಆಡಳಿತ ಮಂಡಳಿಯ ಯೋಜನೆ ಬೇರೆಯೇ ಇತ್ತು. ಜುಲೈ 18ರಂದು ಒಂದು ಸಭೆ ಕರೆಯಿತು. ಎರಡೂ ಕಡೆಯವರು ತಮ್ಮತಮ್ಮ ನಿಲುವಿಗೇ ಅಂಟಿಕೊಂಡಿದ್ದರ ಪರಿಣಾಮ ಅದು ಮಧ್ಯಾಹ್ನ ಮೂರು ಗಂಟೆಯ ನಂತರವೂ ಮುಂದುವರೆಯಿತು. ಇದ್ದಕ್ಕಿದ್ದಂತೆ ಮಧ್ಯಾಹ್ನದ ಶಿಫ್ಟ್‌ನ ಕಾರ್ಮಿಕರ ಜೊತೆ 100-150 ಜನ ಗೂಂಡಾಗಳೂ ಒಳಬಂದು ಮನಬಂದಂತೆ ಹೊಡೆಯತೊಡಗಿದರು.


ನಿಜ ಏನೆಂದು ಹೊರಜಗತ್ತಿಗೆ ಯಾವತ್ತೂ ತಿಳಿಯದೇ ಹೋಗಬಹುದು ಆದರೆ ಆವತ್ತು ಗಾಯಗೊಂಡವರ ಮೈಮೇಲಿನ ಗಾಯ ನೋಡಿದರೆ ಹೊಡೆತ ಹೇಗಿದ್ದಿರಬಹುದೆಂದು ತಿಳಿಯುತ್ತದೆ. ದೇವ್ ಮರಣವನ್ನೂ ಸೇರಿಸಿ ಈ ಇಡೀ ಘಟನೆಯ ನಿಜವಾದ ಜವಾಬ್ದಾರಿ ಆಡಳಿತ ಮಂಡಳಿಯ ಮೇಲೆ ಬೀಳುತ್ತದೆ. ಏಕೆಂದರೆ ಅದು ಯೋಜಿಸಿ, ಹಿಂಸೆಯನ್ನು ಉದ್ರೇಕಿಸಿ, ಗಲಭೆ ಹಿಂಸೆಗೆ ತಿರುಗುವಂತೆ ಕೋರಿ ಕೊಂಡಿತು.

ಸಂಘವು ಹೀಗೆ ವರ್ಗ ಐಕ್ಯತೆಯನ್ನು ಕಟ್ಟುವುದು ಹೇಗೆಂದು, ದಲಿತ ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸುವುದು ವರ್ಗ ಸಂಘರ್ಷ ಹೋರಾಟದಲ್ಲಿ ಎಷ್ಟು ಮುಖ್ಯವೆಂದು, ಎಲ್ಲ ಅಡೆತಡೆ-ಆರ್ಥಿಕ ಆಮಿಷಗಳ ನಡುವೆಯೂ ಸೈದ್ಧಾಂತಿಕ ಹೋರಾಟ ಮುಂದುವರೆಸಿಕೊಂಡು ಹೋಗುವುದು ಹೇಗೆಂದು ತೋರಿಸಿಕೊಟ್ಟಿದೆ.

ಹಿಂಸಾಚಾರದ ವಿರುದ್ಧ ಬೊಬ್ಬೆ

ಕಮ್ಯುನಿಸ್ಟ್ ಕಾರ್ಮಿಕ ಸಂಘದ ಮುಖಂಡರನ್ನೂ ಸೇರಿಸಿ ಹಲವು ಜನ ಹಿಂಸೆಯನ್ನು ಖಂಡಿಸಿದ್ದಾರೆ. ಕಾರ್ಪೋರೇಟ್ ಜನರ ಖಂಡನೆ ಇನ್ನೂ ಗಟ್ಟಿ ದನಿಯದು. ವಿಪ್ರೋ ಮುಖ್ಯಸ್ಥ ಅಜೀಂ ಪ್ರೇಂಜಿ ಆ ಘಟನೆಗೆ ಕಾರಣವು ತಮಗೆ ಸರಿಯಾಗಿ ಅರ್ಥವಾಗಲಿಲ್ಲವೆಂದೂ, ಆದರೂ ಸರ್ಕಾರ ನಿರ್ದಾಕ್ಷಿಣ್ಯವಾಗಿ ವರ್ತಿಸಬೇಕೆಂದು ಕರೆ ಕೊಟ್ಟರು. ವಾಣಿಜ್ಯ ಕ್ಷೇತ್ರದ ಜನರೆಲ್ಲ ಈ ಆರ್ಥಿಕ ಹಿಂಜರಿಕೆಯ ಕಾಲದಲ್ಲಿ ಭಾರತ ಪ್ರಮುಖ ಮತ್ತು ಸುರಕ್ಷಿತ ಉತ್ಪಾದನಾ ನೆಲೆಯಾಗುವುದರ ಮೇಲೆ ಇದು ಕರಾಳ ಪರಿಣಾಮ ಬೀರಬಹುದೆಂದು ಆತಂಕಪಟ್ಟರು. ಪೋಲೀಸರು 100ಕ್ಕೂ ಅಧಿಕ ಕಾರ್ಮಿಕರನ್ನು ಬಂಧಿಸಿದರು. ಆಡಳಿತ ಮಂಡಳಿಯ ಒಬ್ಬನನ್ನೂ ಬಂಧಿಸಲಿಲ್ಲ. ಈ ಘಟನೆ ಆಡಳಿತ ಮಂಡಳಿ ಹಾಗೂ ಕಾರ್ಮಿಕರು ಇಬ್ಬರಿಗೂ ಗಂಭೀರ ಸ್ವರೂಪದ ಗಾಯವನ್ನುಂಟುಮಾಡಿತ್ತು. ಅದರರ್ಥ ಮಾಧ್ಯಮಗಳು ವರದಿ ಮಾಡಿರುವಂತೆ ದಂಗೆಯು ಏಕಮುಖವಾಗಿರಲಿಲ್ಲ ಅಥವಾ ಅದು ಕಾರ್ಮಿಕರಿಂದಷ್ಟೇ ಆದದ್ದೂ ಆಗಿರಲಿಲ್ಲ. ಆಡಳಿತ ಮಂಡಳಿಯೂ ತನ್ನ ಮ್ಯಾನೇಜರುಗಳ ರೂಪದಲ್ಲೋ ಅಥವಾ ಹೊರಗಿನ ಗೂಂಡಾಗಳನ್ನು ಕರೆಸುವುದರ ಮೂಲಕವೋ ತಾನೂ ಹಿಂಸಾಚಾರದಲ್ಲಿ ತೊಡಗಿತ್ತು. ಈ ಘಟನೆಯ ಮೂಲ ನೋಡಿದಾಗ ಗೊತ್ತಾಗುವುದೇನೆಂದರೆ ತನ್ನ ಜವಾಬ್ದಾರಿ ನಿಭಾಯಿಸುವಲ್ಲಿ ಸೋತ ಆಡಳಿತ ಮಂಡಳಿ ಪ್ರಾಥಮಿಕ ಅಪರಾಧಿಯಾಗಿದೆ. ಹಾಗಿರುವಾಗ ಹಿಂಸೆಯ ಜವಾಬ್ದಾರಿಯನ್ನು ಕಾರ್ಮಿಕರ ಹೆಗಲ ಮೇಲೆ ಹೊರಿಸುವುದು ಯಾವ ನ್ಯಾಯ?

ಹಿಂಸೆಯ ಕುರಿತು ಕೇಳಿಬರುವ ಗಟ್ಟಿ ಗಂಟಲಿನ ವಿರೋಧ ಯಾವತ್ತೂ ಪಕ್ಷಪಾತಿ ಧೋರಣೆ ತಳೆದಿರುತ್ತದೆ. ಯಾವತ್ತೂ ದುರ್ಬಲವಾದ ಪಕ್ಷದ ಮೇಲೆ ಹಿಂಸೆಯ ಆರೋಪ ಹೊರಿಸಲ್ಪಡುತ್ತದೆ. ನಿಜ ಏನೆಂದರೆ ಮತ್ತೊಂದು ಪಕ್ಷ ಆಡಳಿತ ವರ್ಗವಾಗಿದ್ದು ಹೆಚ್ಚು ಬಲ ಪಡೆದಿರುತ್ತದೆ ಮತ್ತು ಅದು ಯಥಾಸ್ಥಿತಿ ಕಾಯ್ದುಕೊಳ್ಳಬಯಸುತ್ತದೆ. ವ್ಯವಸ್ಥೆಯ ಬಲಿಪಶುಗಳು ತಮ್ಮ ನ್ಯಾಯಬದ್ಧ ಪಾಲು ಪಡೆಯಲಷ್ಟೇ ಬಯಸುತ್ತಿರುತ್ತಾರೆ. ಬಲಶಾಲಿ ವರ್ಗವು ಅವರನ್ನು ದಮನಿಸುವ ಪ್ರಯತ್ನ ಮಾಡಿದಾಗ ಸಂಘರ್ಷ ಶುರುವಾಗುತ್ತದೆ. ಆದರೆ ಈ ಅಂಶವನ್ನು ಮರೆಮಾಚಿ ಹಿಂಸೆಯ ಹಿಂದೆ ಬಲಿಪಶುಗಳಿರುತ್ತಾರೆಂಬುದನ್ನು ಅಲಕ್ಷಿಸಲಾಗುತ್ತದೆ. ಹಲವು ಕೋಟಿ ಜನರನ್ನು ದಟ್ಟದಾರಿದ್ರ್ಯದಲ್ಲಿಟ್ಟಿರುವ ಹಾಗೂ ಸತ್ವಯುತ ಆಹಾರವಿಲ್ಲದೇ ಪ್ರಾಣಬಿಡುವಂತೆ ಮಾಡಿರುವ ಪ್ರಭುತ್ವದ ವ್ಯವಸ್ಥಿತ ಹಿಂಸೆ ಯಾರ ಗಮನಕ್ಕೂ ಬಾರದೇ ಹೋಗುತ್ತದೆ. ಪ್ರಭುತ್ವವೇ ಜನರನ್ನು ನೇರ ಕೊಂದಾಗಲೂ ಅದು ಕಾನೂನುಬದ್ಧ ಎನಿಸಿಕೊಳ್ಳುತ್ತದೆ. ಮಾನೇಸರ್ ಘಟನೆ ನಡೆಯುವುದಕ್ಕೆ 20 ದಿನ ಮೊದಲು (28 ಜೂನ್) ಛತ್ತೀಸ್‌ಘಡ್‌ನ ಬಿಜಾಪುರ್ ಜಿಲ್ಲೆಯ ಕೊತ್ತೇಗುಡ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಂದೆಡೆ ಸೇರಿದ್ದ 60 ಬುಡಕಟ್ಟು ಜನರ ಮೇಲೆ ಸುಮಾರು ನೂರು ಸಿಆರ್‌ಪಿಎಫ್ ಯೋಧರು ದಾಳಿ ನಡೆಸಿ 17 ಜನರನ್ನು ಕೊಂದರು. ಅವರಲ್ಲಿ ಆರು ಮಕ್ಕಳು, ಆರು ಜನ ಗಾಯಗೊಂಡರು. ಐವರು ಹೆಣ್ಣುಮಕ್ಕಳು ಮಾನಭಂಗಕ್ಕೊಳಗಾದರು. ಸಮವಸ್ತ್ರ ಧರಿಸಿದವರ ಈ ಕೃತ್ಯವು ಕೇಂದ್ರ ಗೃಹ ಮಂತ್ರಿ ಪಿ.ಚಿದಂಬರಂ ಹಾಗೂ ಛತ್ತೀಸ್‌ಘಡ್‌ನ ಮುಖ್ಯಮಂತ್ರಿ ರಮಣ್ ಸಿಂಗ್ ಅವರ ಪ್ರಶಂಸೆಗೊಳಗಾಯಿತು. ಮಾನೇಸರ್‌ನ ಒಬ್ಬ ಮ್ಯಾನೇಜರ್ ಸತ್ತ ಕೂಡಲೇ ಕೂಗಿ ಕಿರುಚುವ ಅಜೀಂ ಪ್ರೇಂಜಿಗಳೂ, ನಾರಾಯಣ ಮೂರ್ತಿಗಳೂ ಮತ್ತವರಂಥವರೂ ಮಾವೋವಾದಿಗಳ 'ಫ್ಲಶಿಂಗ್ ಔಟ್' ನೆಪದಲ್ಲಿ ಮುಗ್ಧ ಆದಿವಾಸಿಗಳ ಹತ್ಯೆಯಾಗುವಾಗ ಎಲ್ಲಿ ಹೋಗಿದ್ದರು? ಕಾರ್ಮಿಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಅವರು ಒತ್ತಾಯಿಸಿದರು. ಆದರೆ ಮನಮೋಹನ್ ಸಿಂಗ್, ಚಿದಂಬರಂ, ರಮಣ್ ಸಿಂಗ್, ಸಿಆರ್‌ಪಿಎಫ್ ಮುಖ್ಯಸ್ಥ ಕೆ. ವಿಜಯ್ ಕುಮಾರ್ ಮುಂತಾದವರು ಬಿಜಾಪುರ್ ಹತ್ಯೆ ಪ್ರಕರಣದಲ್ಲಿ ವಿಚಾರಣೆ ಎದುರಿಸಲಿ ಎಂದು ಅವರು ಒತ್ತಾಯಿಸಿಯಾರೆ? ●




ಡಾ.ಆನಂದ್ ತೇಲ್ತುಂಬ್ಡೆ

ಡಾ.ಎಚ್.ಎಸ್.ಅನುಪಮಾ

ಲಂಕೇಶ್

ಮೂಲ: ಕೆನೆತ್ ಆಂಡರ್ಸನ್

ಜೇಡರ ಕಣಿವೆಯಲ್ಲಿ ಒಂದು ರಾತ್ರಿ 2





ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್



ಮದಗಜಗಳ ಮಧ್ಯೆ

ನಾವು ನಮ್ಮ ರಾತ್ರಿ ಚಾರಣಕ್ಕೆ ಪೂರ್ಣ ಕತ್ತಲಿನ ರಾತ್ರಿಯನ್ನು ಆರಿಸಿಕೊಂಡಿದ್ದಕ್ಕೆ ಬಲವಾದ ಕಾರಣಗಳಿದ್ದವು. ಹುಣ್ಣಿಮೆಯ ರಾತ್ರಿಯಲ್ಲಿ ಕಾಡು ಮನೋಹರವಾಗಿ ಕಾಣಬಹುದಾದರೂ, ವನ್ಯಮೃಗಗಳ ಕಣ್ಣಿಗೆ ನಾವು ಬೀಳುವ ಸಾಧ್ಯತೆ ಹೆಚ್ಚು. ಅದೂಅಲ್ಲದೆ ಚಂದ್ರನ ಬೆಳಕಿನಲ್ಲಿ ನಮ್ಮ ಟಾರ್ಚ್‌ನ ಕಿರಣಗಳು ಬಹುದೂರ ಚಲಿಸಲಾರವು ಮತ್ತು ಪ್ರಾಣಿಗಳ ಕಣ್ಣಿನಿಂದ ಬರುವ ಪ್ರತಿಫಲನ ದುರ್ಬಲವಾಗಿ ಅವುಗಳನ್ನು ಗುರುತು ಹಚ್ಚುವುದು ಕಷ್ಟವಾಗುತ್ತಿತ್ತು.

ಹೊರಡುವುದಕ್ಕೆ ಮೊದಲೇ ನಾವು ಚಾರಣದಲ್ಲಿ ಅತಿ ಕಡಿಮೆ ಮಾತನಾಡಬೇಕೆಂದು ನಿರ್ಧರಿಸಿದ್ದೆವು. ನಮ್ಮ ಸಮೀಪದಲ್ಲಿದ್ದ ಆನೆಯ ಬಗೆಗೆ ಸ್ಪಷ್ಟ ವಿವರಗಳನ್ನು ಊಹಿಸಲಾಗದೆ ನಾನು ಟಾರ್ಚನ್ನು ನಂದಿಸಿ ಎರಿಕ್‌ನನ್ನು ಎಳೆದುಕೊಂಡು ಹೊರಟೆ. ಸ್ವಲ್ಪ ಸಮಯದಲ್ಲಿ ಕತ್ತಲಿಗೆ ಕಣ್ಣು ಹೊಂದಿಕೊಂಡು ಸುತ್ತಲಿನ ವನ ಗೋಚರಿಸತೊಡಗಿತು. ಆದರೆ ಕಾಡಿನ ಮೌನ ಮುಂದುವರೆಯುತ್ತಾ ಹೋದಾಗ ನಮ್ಮನ್ನು ಯಾವುದೋ ಮೃಗಗಳು ಗಮನಿಸುತ್ತವೆ ಎನ್ನುವುದು ಖಾತ್ರಿಯಾದಂತೆ ನಮ್ಮ ನರನಾಡಿಗಳು ಚುರುಕಾದವು.

ದೂರದಿಂದ ಗುಡುಗಿನ ಸದ್ದು, ಆದರೆ ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿವೆ. ಅಂದರೆ ಮಳೆಯ ಸಾಧ್ಯತೆಗಳೇನಿಲ್ಲ.

ಮತ್ತದೇ ಸದ್ದು. ಎರಿಕ್ ನನ್ನ ಕಿವಿಯ ಮೇಲೆ ಬಾಯನ್ನಿರಿಸಿ ಉಸುರಿದ, "ಸದ್ದು ಕೇಳಿಸಿತಾ, ಹುಲಿಗಳಿರಬಹುದಾ." ನಾನು ಅವನಿಗೆ ಸುಮ್ಮನಿರುವಂತೆ ಸನ್ನೆ ಮಾಡಿ, ಸದ್ದು ಆನೆಯ ಹೊಟ್ಟೆಯಲ್ಲಿ ಆಹಾರ ಜೀರ್ಣವಾಗುತ್ತಿರುವಾಗ ಬರುತ್ತಿರುವುದು ಎಂದು ಕೈಯಿಂದ ಸನ್ನೆ ಮಾಡಿ ಸೂಚಿಸಿದೆ!

ವನ್ಯಮೃಗ ವೀಕ್ಷಣೆಗೆ ಅಥವಾ ಯುದ್ಧ ಸಂಬಂಧಿಯಾಗಿ ಕಾಡಿನಲ್ಲಿ ರಾತ್ರಿ ನಡೆಯಬೇಕಾದರೆ ಐದು ನಿಯಮಗಳನ್ನು ಪಾಲಿಸಲೇಬೇಕಾಗುತ್ತದೆ. ಮೊದಲನೆಯದು ಯಾವುದೇ ಕಾರಣಕ್ಕೂ ಪಿಸುಪಿಸು ಕೂಡ ಮಾಡದೆ ಸಂಪೂರ್ಣ ಮೌನವಾಗಿರಬೇಕು. ಎರಡನೆಯದು ಯಾವುದೇ ಶತ್ರುವಿನ ಸೂಚನೆ ಸಿಕ್ಕೊಡನೆ ಹಿಮಗಟ್ಟಿದಂತೆ ಸ್ತಬ್ಧವಾಗಬೇಕು. ಮೂರನೆಯದು ಮರೆಯಲ್ಲಿಯೇ ನಡೆಯುತ್ತಾ ಬಯಲು ಪ್ರದೇಶಗಳನ್ನು ತಪ್ಪಿಸಬೇಕು. ನಾಲ್ಕನೆಯದು ಪ್ರತಿ ಹೆಜ್ಜೆಯಿಡುವಾಗಲೂ ಯಾವುದೇ ಶಬ್ದವಾಗದಂತೆ ಎಚ್ಚರ ವಹಿಸುವುದು. ಇದಕ್ಕೆ ಸಾಕಷ್ಟು ಅಭ್ಯಾಸ ಮತ್ತು ಮುಂದಾಲೋಚನೆಯ ಅಗತ್ಯವಿರುತ್ತದೆ. ಕೊನೆಯದಾಗಿ ಸ್ತಬ್ಧವಾಗುವುದು ಎಂದರೆ ಸಂಪೂರ್ಣ ಮರಗಟ್ಟಿದಂತೆ ಇರಬೇಕು, ಅಂದರೆ ಸೊಳ್ಳೆ ಓಡಿಸುವುದು, ತುರಿಸುವುದು ಮುಂತಾದವನ್ನೂ ಮಾಡಬಾರದು. ಅತಿಸಣ್ಣ ಶಬ್ದವೂ ಕಾಡಿನ ಆ ಮೌನ ರಾತ್ರಿಯಲ್ಲಿ ಪ್ರಾಣಿಗಳಿಗೆ ಎಚ್ಚರಿಕೆಯ ದೊಡ್ಡ ಗಂಟೆಯಾಗುತ್ತದೆ.


ಎರಿಕ್ ನನ್ನ ಕಿವಿಯಲ್ಲಿ ಪಿಸಪಿಸ ಮಾಡಿ ಇದೇ ತಪ್ಪನ್ನೆಸಗಿದ್ದ. ಕೆಲವೇ ಕ್ಷಣಗಳಲ್ಲಿ ಭೂಮಿಯನ್ನೇ ನಡುಗಿಸುವಂತೆ ಹೆಣ್ಣಾನೆಯೊಂದು ಭಯದಿಂದ "ಟ್ರ್-ಆ-ಆಂಕ್" ಎಂದು ಘರ್ಜಿಸಿತು. ಅನಂತರ ಕೆಲಕ್ಷಣಗಳು ಸಂಪೂರ್ಣ ಗೊಂದಲವೆದ್ದಿತು. "ಕಾಕ್ ಕಾಕ್" ಎಂದು ಹೆಣ್ಣಾನೆ ಮರಿಗಳನ್ನು ತನ್ನ ಹತ್ತಿರ ಕರೆಯಿತು. ತಕ್ಷಣ "ಕ್ವಿಂಕ್ ಕ್ವಿಂಕ್" ಎನ್ನುತ್ತಾ ಅವೆಲ್ಲಾ ತಾಯಿಯ ದೈತ್ಯ ದೇಹದಡಿ ಆಸರೆ ಪಡೆದವು. ಇನ್ನೂ ಭಯಾನಕವಾಗಿದ್ದೆಂದರೆ ಆನೆಯೊಂದರ ಸುದೀರ್ಘ ಕೂಗು ನಮ್ಮಿಂದ ಕೆಲವೇ ಗಜ ಮುಂದಿನಿಂದ ಕೇಳಿಬಂತು. ಇದು ಬಹುಶಃ ಗುಂಪಿನ ನಾಯಕ ತನ್ನ ಸಂಗಾತಿಗಳಿಗೆ ಎಚ್ಚರಿಕೆಗಾಗಿ ನೀಡಿದ ಕರೆಯಾಗಿತ್ತು, ಇದೇ ಧ್ವನಿ ನಮ್ಮ ಎಡದಿಕ್ಕಿನಿಂದಲೂ ಕೇಳಿಬರುವಷ್ಟರಲ್ಲಿ ಎದುರಿಗಿದ್ದ ಆನೆ ಹಳ್ಳವನ್ನು ಹಾದು ನಮ್ಮ ಕಡೆ ಬರುತ್ತಿದ್ದ ಸೂಚನೆ ಸಿಕ್ಕಿತು. ಬಂದೂಕು ಕೂಡ ಇಲ್ಲದೆ ಬರಿಗೈಯಲ್ಲಿ ನಡೆದೇಬಂದಿದ್ದ ನಮಗೆ ಯೋಚಿಸಲು ಸಮಯವೇ ಇರಲಿಲ್ಲ. ನಾನು ತಕ್ಷಣ ಎರಿಕ್‌ನ ಕೈಹಿಡಿದು ಹಿಂತಿರುಗಿ ಓಡತೊಡಗಿದೆ.

ಇಷ್ಟರಲ್ಲಿ ಆನೆಗಳೆಲ್ಲ ಒಟ್ಟಾದಂತೆ ಅನ್ನಿಸಿತು. ಮರಿಯಾನೆಗಳ ಕೂಗಾಟ ಮಾತ್ರ ಕೇಳಿಸುತ್ತಿತ್ತು. ಇನ್ನು ಮುಂದೆ ಆನೆಗಳು ನಮ್ಮ ಮೇಲೆ ಆಕ್ರಮಣ ಮಾಡುವುದಾದರೆ ನಿಃಶಬ್ದವಾಗಿ ಹತ್ತಿರ ಬಂದು ನಮ್ಮ ವಾಸನೆ ಅಥವಾ ನೋಟದ ಸುಳಿವು ಸಿಕ್ಕೊಡನೆ ಸಿಟ್ಟಿನಿಂದ ದೊಡ್ಡ ಧ್ವನಿಯಲ್ಲಿ ದೀರ್ಘವಾಗಿ ಕೂಗುತ್ತಾ ಮುನ್ನುಗ್ಗಬೇಕಿತ್ತು. ಆಕ್ರಮಣದ ಕೂಗು, ಎಚ್ಚರಿಕೆಯ ಅಥವಾ ಭಯದ ಕೂಗಿಗಿಂತ ಭಿನ್ನವಾಗಿರುವುದರಿಂದ ಗುರುತಿಸಲು ಸುಲಭ. ನಮಗೆ ಆ ಥರದ ಯಾವುದೇ ಧ್ವನಿ ಬರದಿದ್ದುದರಿಂದ ಕುಳಿತು ಸುಧಾರಿಸಿಕೊಳ್ಳತೊಡಗಿದೆವು. ಅಷ್ಟರಲ್ಲಿ ಆನೆಗಳು ಹಳ್ಳ ದಾಟುವ ಶಬ್ದ ಕೇಳಿಸಿತು. ನಂತರ ಸಂಪೂರ್ಣ ಮೌನ ಆವರಿಸಿತು. ದೂರದಲ್ಲೆಲ್ಲೋ ಸಾಂಬಾರ್ ಜಿಂಕೆಯ "ಪೂಂಕ್ ಪೂಂಕ್" ಕೂಗು ಕೇಳಿಸಿತು. ಇಲ್ಲಿ ನಡೆಯುತ್ತಿದ್ದ ಗಲಾಟೆಯನ್ನು ಕೇಳಿದ ಅದು ತನ್ನ ಎಚ್ಚರಿಕೆಯ ಗಂಟೆಯನ್ನು ಬಾರಿಸಿದಂತಿತ್ತು.

ಎರಿಕ್ ಮತ್ತೆ ಕಿವಿಯಲ್ಲಿ ಮುಂದೇನೆಂದು ಉಸುರಿದ! ನಾನು ಸ್ವಲ್ಪ ಹೊತ್ತು ಕಾದು ಮುಂದುವರಿಯುವ ಸೂಚನೆ ನೀಡಿದೆ. ಹಿಂದೆ ಹೋಗುವ ಮಾತಂತೂ ನನಗೆ ಸಮ್ಮತವಾಗುತ್ತಿರಲಿಲ್ಲ. ನಾವು ಹದಿನೈದು ನಿಮಿಷ ಕಾದು ಕಣಿವೆಯನ್ನು ಇಳಿದು ಹಳ್ಳದ ದಂಡೆಯನ್ನು ತಲುಪಿದೆವು. ನೀರು ಇಪ್ಪತ್ತು ಅಡಿಗಳಷ್ಟು ಅಗಲವಿದ್ದರೂ ಕೇವಲ ಮೊಳಕಾಲಷ್ಟು ಮಾತ್ರ ಆಳವಿದ್ದುದರಿಂದ ನಾವು ಸುಲಭವಾಗಿ ದಾಟಿ ಮುಂದುವರೆಯತೊಡಗಿದೆವು.

ಜೇಡರ ಬಲೆ

ಮುಂದುವರೆದಂತೆ ಕಾಡು ಇನ್ನೂ ದಟ್ಟವಾಗುತ್ತಾ ನಕ್ಷತ್ರಗಳನ್ನು ಸಂಪೂರ್ಣ ಮರೆಯಾಗಿಸಿತ್ತು. ನೆಲದಲ್ಲೂ ಗಿಡಗಂಟೆಗಳು ಒತ್ತೊತ್ತಾಗಿದ್ದರಿಂದ ನಾವು ನಡಿಗೆಯಲ್ಲಿ ಎಚ್ಚರ ವಹಿಸಬೇಕಾಗಿತ್ತು. ನಮ್ಮ ಹಿಂದಿನಿಂದ ಬೀಸುತ್ತಿದ್ದ ಬಲವಾದ ಗಾಳಿ ಬಿದಿರಿನ ಮೆಳೆಗಳಲ್ಲಿ ನುಗ್ಗಿ ಕಿರ್ರನೆಯ ಶಬ್ದವನ್ನುಂಟುಮಾಡುತ್ತಿತ್ತು. ಇದರಿಂದಾಗಿ ನಮಗೆ ಬೇರೆ ಶಬ್ದಗಳನ್ನು ಕೇಳಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಅದೂ ಅಲ್ಲದೆ ಗಾಳಿ ನಮ್ಮ ವಾಸನೆಯನ್ನು ಎಲ್ಲೆಡೆ ಹರಡಿ ಸಸ್ಯಾಹಾರಿ ಪ್ರಾಣಿಗಳಾದ ಆನೆ ಮತ್ತು ಜಿಂಕೆಗಳಿಗೆ ನಮ್ಮ ಆಗಮನದ ಸೂಚನೆ ನೀಡುತ್ತಿತ್ತು. ಮಾಂಸಾಹಾರಿ ಪ್ರಾಣಿಗಳ ಮೂಗು ಅಂತಹ ಚುರುಕಾಗಿರುವುದಿಲ್ಲವಾದ್ದರಿಂದ ಅವುಗಳ ಭಯವಿರಲಿಲ್ಲ.



ನಾನು ಟಾರ್ಚ್‌ನಿಂದ ಬೆಳಕು ಚೆಲ್ಲುತ್ತಾ ಮುಂದೆ ಹೋಗುತ್ತಿದ್ದೆ, ಎರಿಕ್ ನನ್ನ ಹಿಂದೆಯೇ ಬರುತ್ತಿದ್ದ. ಅವನ ಟಾರ್ಚ್‌ನ ಬೆಳಕು ನನ್ನ ಮೇಲೆ ಬಿದ್ದು ನನ್ನ ಇರವನ್ನು ಪ್ರಕಟಿಸುತ್ತಿದ್ದುದರಿಂದ ಅದನ್ನು ಆರಿಸಿಕೊಳ್ಳಲು ಹೇಳಿದೆ.

ಆನೆಗಳು ಆಗಲೇ ಹೋಗಿದ್ದರೂ ಅವು ಮುರಿದು ಬಿಸಾಕಿದ ರೆಂಬೆಗಳು, ಅರ್ಧ ತಿಂದ ಬಿದಿರಿನ ಚಿಗುರುಗಳು, ಹಾಕಿ ಹೋದ ದಪ್ಪ ಲದ್ದಿಯ ರಾಶಿಗಳು ಅವುಗಳು ಸ್ವಲ್ಪ ಹೊತ್ತಿನ ಮುಂಚೆ ಅವುಗಳು ಅಲ್ಲಿದ್ದುದನ್ನು ಸಾರುತ್ತಿದ್ದವು. ಕ್ಷಣವೊಂದರ ನಂತರ ನನ್ನ ಮುಖಕ್ಕೆ ಯಾವುದೋ ಅಂಟಂಟಾದ ಮೃದುವಾದ ವಸ್ತು ತಗುಲಿದಂತಾಯಿತು. ಓಹೋ ಇದು ಇಲ್ಲಿ ವಾಸಿಸುವ ಭಾರೀ ಗಾತ್ರದ ಜೇಡಗಳು ಹೆಣೆದ ಬಲೆ! ಇಂತಹ ಜೇಡಗಳಿಂದಾಗಿಯೇ ಈ ಜಾಗಕ್ಕೆ ಜೇಡರ ಕಣಿವೆ ಎಂದು ನಾನು ಹೆಸರಿಟ್ಟದ್ದೆ. ಇಲ್ಲಿನ ಕೆಲವು ಜೇಡಗಳು ಉದ್ದ ಹತ್ತು ಇಂಚುಗಳಷ್ಟಿರುತ್ತಿತ್ತು. ಹೊಟ್ಟೆಯ ಭಾಗ ಕಪ್ಪಾಗಿದ್ದು ಡಾಳಾದ ಹಳದಿ ಪಟ್ಟೆಗಳಿರುತ್ತಿತ್ತು. ದೊಡ್ಡದಾದ ಕೆಂಪಾದ ಕಣ್ಣುಗಳು ಟಾರ್ಚ್‌ನ ಬೆಳಕಿಗೆ ಗಾಳಿಯಲ್ಲಿ ತೂಗುವ ಹವಳದ ಜೋಡಿಯಂತೆ ಹೊಳೆಯುತ್ತಿತ್ತು.

ಇವುಗಳು ಬಲೆಯನ್ನು ನೇಯುವ ಕ್ರಿಯೆಯೇ ಒಂದು ಅದ್ಭುತ ಕಲಾಪ್ರಕಾರ. ಎತ್ತರದ ಮರದ ರೆಂಬೆಯೊಂದರಿಂದ ದಾರದಂತಹ ಎಳೆಯನ್ನು ಉಗುಳುತ್ತಾ ಗಾಳಿಯಲ್ಲಿ ಕೆಳಕ್ಕೆ ಬೀಳುತ್ತವೆ. ಸಾಕಷ್ಟು ಉದ್ದದ ಎಳೆಯನ್ನು ಉಗುಳಿದ ನಂತರ ಅದೇ ದಾರವನ್ನು ಹಿಡಿದು ಕೆಳಮುಖವಾಗಿ ತೇಲಾಡುತ್ತಿರುತ್ತವೆ. ಗಾಳಿಯ ಒತ್ತಡಕ್ಕೆ ಇನ್ನೊಂದು ರೆಂಬೆ ಅಥವಾ ಎಲೆಯ ಹತ್ತಿರಕ್ಕೆ ತಳ್ಳಲ್ಪಟ್ಟಾಗ ತಕ್ಷಣ ಅಲ್ಲಿಗೆ ಆ ಎಳೆಯನ್ನು ಅಂಟಿಸಿಬಿಡುತ್ತವೆ. ಬಹಳ ಹೊತ್ತು ಗಾಳಿಯೇ ಬರದಿದ್ದರೆ, ಅದೇ ಎಳೆಯಿಂದ ನಿಧಾನವಾಗಿ ಮತ್ತೆ ಮೇಲೆ ಹತ್ತಿ ಇನ್ನೊಮ್ಮೆ ಅನುಕೂಲಕರವಾದ ಜಾಗವನ್ನು ಹುಡುಕಿ ಪ್ರಯತ್ನವನ್ನು ಮುಂದುವರೆಸುತ್ತವೆ!

ಮೊದಲ ಎಳೆಯನ್ನು ಕಟ್ಟಿದ ನಂತರ ಪಕ್ಕದ ಮತ್ತೊಂದು ಮರವನ್ನು ಹತ್ತಿ ಮತ್ತೆ ಇದೇ ಕ್ರಿಯೆಯನ್ನು ಮುಂದುವರೆಸಿ ಇನ್ನೊಂದು ಎಳೆಯನ್ನು ಕಟ್ಟುತ್ತದೆ. ಎರಡನೆ ಎಳೆ ಮೊದಲನ್ನು ಹಾದುಹೋಗುವಂತೆ ಮಾಡಿ "x" ಆಕಾರ ಬರುವಂತೆ ಮಾಡುತ್ತದೆ. ನಂತರ ಇದರ ಸುತ್ತ ಒಂದು ಆಯತವನ್ನು ಸೃಷ್ಟಿಸಿ ಅದರಲ್ಲಿ "x" ನ್ನು ಕೂರಿಸಿರುತ್ತದೆ. ಮುಂದಿನ ಕೆಲಸ ಸುಲಭವಾದದ್ದು. ಈ ಆಯತದಲ್ಲಿ ಅರ್ಧ ಅಂಗುಲ ಅಂತರದಲ್ಲಿ ಹಲವಾರು ಎಳೆಗಳನ್ನು ನೇಯ್ದು ಬಲೆಯನ್ನು ಸಿದ್ಧ ಮಾಡುತ್ತದೆ. ಒಮ್ಮೊಮ್ಮೆ ಇಡೀ ದಿನ ಬೇಕಾಗುವ ಇದು ಸಾಕಷ್ಟು ಪರಿಶ್ರಮದ ಕೆಲಸ. ಇಷ್ಟು ಸಣ್ಣ ಜೀವಿಯೊಂದು ಮಾಡಬಹುದಾದ ಎಂತಹ ನಿಖರ ತಾಂತ್ರಿಕ ನೈಪುಣ್ಯದ ಕೆಲಸ ಇದು!

ಬಲೆ ಒಮ್ಮೆ ಸಿದ್ಧವಾಯಿತೆಂದರೆ ಜೇಡ ಇದರ ಮಧ್ಯದಲ್ಲಿ ಕಾಲನ್ನು ಉದ್ದ ಚಾಚಿಕೊಂಡು ಆರಾಮಾಗಿ ಆದರೆ ನಿಶ್ಚಲವಾಗಿ, ಎಚ್ಚರಿಕೆಯಿಂದ ಕುಳಿತಿರುತ್ತದೆ. ನೋಡುಗರಿಗೆ ಇದು ಮರದ ತೊಗ ಅಥವಾ ಎಲೆ ಗಾಳಿಯಲ್ಲಿ ತೂಗಾಡುತ್ತಿರುವಂತೆ ಕಾಣುತ್ತದೆ. ಅಮಾ ಕೀಟಗಳು ಬಲೆಗೆ ಬಿದ್ದು ಅಂಟಾಗಿರುವ ದಾರಗಳಿಗೆ ತಗುಲಿಕೊಳ್ಳ ತಪ್ಪಿಸಿಕೊಳ್ಳಲು ಒದ್ದಾಡಿದಂತೆ ಬಲೆಯ ಇತರ ಎಳೆಗಳು ಸರಿದಾಡಿ ಜೆ ಸೂಚನೆ ನೀಡುತ್ತದೆ. ತಕ್ಷಣ ಅಲ್ಲಿಗೆ ಧಾವಿಸುವ ಅದು ಮತ್ತಷ್ಟು ಎಳೆಗ ತನ್ನ ಬಲಿಯ ಸುತ್ತ ನೇಯುತ್ತದೆ.

ಒಮ್ಮೆ ಕೀಟ ವಶವಾಯಿತೆಂದರೆ ಮುಂದಿನದು ಭೂರಿಭೋಜನ ಸಮ ತನ್ನ ಬಲಿಯ ರಕ್ತ ಮತ್ತಿತರ ದೇಹದ ದ್ರವಗಳನ್ನು ಸಂಪೂರ್ಣವಾಗಿ ಹೀ ಒಮ್ಮೊಮ್ಮೆ ತನ್ನ ಗಾತ್ರವನ್ನು ದ್ವಿಗುಣಗೊಳಿಸಿಕೊಳ್ಳುತ್ತದೆ. ಆದರೆ ಆ ಬಡಪಾ ಕೀಟ ತನ್ನ ತೊಗಲಿನ ಚೀಲವನ್ನು ಮಾತ್ರ ಬಿಟ್ಟು ಪರಲೋಕ ಸೇರು


ಒಂದು ಬಲಿ ತೆಗೆದುಕೊಂಡ ನಂತರ ಜೇಡ ನಮ್ಮಂತೆ ವಿರಮಿಸುವು ತಕ್ಷಣ ಹಾಳಾದ ಬಲೆಯನ್ನು ರಿಪೇರಿ ಮಾಡಿ ಮತ್ತೆ ಹೊಸ ಬ ನಿರೀಕ್ಷೆಯಲ್ಲಿ ಕಾಲುಚಾಚುತ್ತದೆ. ಇವುಗಳಿಗೆ ಹೊಟ್ಟೆ ತುಂಬುವ ಇಲ್ಲವೇನೋ?

ಜೇಡಗಳು ಭಾರೀ ಹಠವಾದಿಗಳು. ಹಾಗಾಗಿ ಇನ್ನೊಂದು ಜೇಡ ಬಲೆಯನ್ನು ಆಕ್ರಮಿಸುವುದನ್ನು ತಡೆಯಲು ಸಾಯುವವರೆಗೂ ಹೋರಾಡು ನಾನೊಮ್ಮೆ ಬಲೆಯೊಂದರಲ್ಲಿ ಇನ್ನೊಂದು ಜೇಡವನ್ನು ಉದ್ದೇಶಪೂರ್ವಕ ತಂದು ಬಿಟ್ಟಾಗ ಮಹಾಯುದ್ಧವೇ ನಡೆದುಹೋಯಿತು. ಬಲೆಯ ಮಾ ತನ್ನೆರಡು ಕಾಲನ್ನು ಕಳೆದುಕೊಂಡರೂ ಆಗಂತುಕನ ಐದು ಕಾಲುಗ ಕತ್ತರಿಸಿ, ಅದರ ಸುತ್ತ ಹೊಸ ಎಳೆಗಳನ್ನು ನೇಯ್ದು ರಕ್ತ ಪಾನ ಮಾಡುವವ ಬಿಡಲಿಲ್ಲ.

ಬಿರುಗಾಳಿ ಮಳೆಯಲ್ಲಿ

ಜೇಡದ ಬಲೆಯನ್ನು ಮುಖದಿಂದ ಸರಿಸುತ್ತಾ ನಾವು ಮುನ್ನಡೆ ನಮ್ಮ ಮುಂದಿದ್ದ ದಾರಿ ಇನ್ನೂ ಚಿಕ್ಕದಾಗುತ್ತಿತ್ತು. ಇದ್ದಕ್ಕಿದ್ದಂತೆ ಸಂಪೂ ನಿಶಬ್ದ ಆವರಿಸಿಬಿಟ್ಟಿತು. ನಾನು ತಕ್ಷಣ ಟಾರ್ಚ್‌ನ್ನು ಆರಿಸಿ ಕುಳಿತು ಕಾಡಿನಲ್ಲಿ ಯಾವಾಗಲು ನೆಲಕ್ಕೆ ಹತ್ತಿರವಿದ್ದಷ್ಟೂ ಸದ್ದನ್ನು ಆಲಿಸುವ ಸುಲುಭ. ಈ ರುದ್ರ ಮೌನಕ್ಕೆ ಹಲವಾರು ಕಾರಣಗಳಿರಬಹುದಾಗಿ ಕತ್ತಲಲ್ಲಿ ನಾವು ದಾಟಿ ಬಂದ ಗುಡ್ಡವೊಂದು ಗಾಳಿಯನ್ನು ತಡೆದಿರಬಹ ಅಥವಾ ಎದುರಿನಿಂದ ಬೀಸಿಬಂದ ಮತ್ತೊಂದು ಗಾಳಿಯ ಅಲೆ ಮೊದಲಿ ಬೀಸುತ್ತಿದ್ದ ಅಲೆಯ ಪ್ರಭಾವವನ್ನು ಕಡಿಮೆ ಮಾಡಿರಬಹುದು ಅ ದೊಡ್ಡ ಬಿರುಗಾಳಿಯ ಮುನ್ಸೂಚನೆಯ ಮೊದಲಿನ ಮೌನ ಇದಾಗಿರಬಹು

ಟಾರ್ಚ್‌ನ್ನು ಆರಿಸಿದ್ದರಿಂದ ಕತ್ತಲು ದಟ್ಟವಾಗಿತ್ತು. ಕೆಲವೇ ಕ್ಷಣಗ ನನ್ನ ಅನುಮಾನ ನಿಜವಾಗಿತ್ತು-ಭಾರೀ ಬಿರುಗಾಳಿಯೊಂದು ಶುರುವಾಗಲಿ ಈ ಉಷ್ಣವಲಯದ ಕಾಡುಗಳಲ್ಲಿನ ಮಳೆ, ಬಿರುಗಾಳಿಯ ಆರ್ಭಟ ನೋಡಲು ಚಂದ, ಆದರೆ ಕಗ್ಗಾಡಿನ ನಡುರಾತ್ರಿಯಲ್ಲಿ ಇದನ್ನು ಅನುಭವಿಸುವ ಎಂದರೆ ಏನೆಂದು ಅಲ್ಲಿದ್ದವರಿಗೆ ಮಾತ್ರ ಗೊತ್ತು. ಇಂತಹ ಮಳೆಯಲ್ಲಿ ಸಾಮಾನ್ಯವಾಗಿ ಮರದಡಿಗೆ ಆಶ್ರಯ ಪಡೆಯುತ್ತಾರೆ. ಬಿರುಗಾಳಿಗೆ ಬುಡಮೇಲಾಗುವ ಸಾಧ್ಯತೆ ಇರುವುದಲ್ಲದೆ ಸಿಡಿಲು ಮರವ



..ಲೂಬಹುದಾದ್ದರಿಂದ ಇದು ಅಪಾಯಕಾರಿ.

ಕ್ಷಣಗಳ ನಂತರ ಮಿಂಚೊಂದು ತನ್ನ ಬೆಳಕನ್ನು ಝಳಪಿಸಿ ಇದೀ ಅರಣ್ಯವನ್ನು ..ತು. ಇದರ ಹಿಂದೆಯೇ ಭೂಮಿಯನ್ನೇ ನಡುಗಿಸುವ ಗುಡುಗು. ಇವುಗಳ ..ನೆಯಾಗುತ್ತಿದ್ದಂತೆ, ಬಿರುಗಾಳಿಯೂ ಹಿಂದಿನಿಂದ ಶುರುವಾಯಿತು. ರೆಂಬೆಗಳು ..ನ್ನ, ಮರಗಳ ಉರುಳುವ ಸದ್ದು ಎದೆ ನಡುಗಿಸುತ್ತಿತ್ತು. ಹಲವಾರು ನಿಮಿಷಗಳ ..ರುವಾದ ಕುಂಭದ್ರೋಣ ಮಳೆಯಿಂದ ನಾವು ಸಂಪೂರ್ಣ ಒದ್ದೆಯಾದದ್ದಲ್ಲದೆ ..ದಿದ್ದ ಆಹಾರ ಮತ್ತಿತರ ಸಾಮಗ್ರಿಗಳೂ ನೆನೆದುಬಿಟ್ಟವು.

..ಒಂದು ಅಡಿ ಆಳದ ಕೆಸರಲ್ಲಿ ಸುಮಾರು ಒಂದು ಗಂಟೆ ನಿಂತೇ ಇದ್ದೆವು. ..ಹಳ್ಳ ಮೈತುಂಬಿಕೊಂಡು ಭೋರ್ಗರೆಯುತ್ತಾ ಹರಿಯತೊಡಗಿತು. ಒಂದು ..ನಂತರ ಮಳೆಯೇನೋ ನಿಂತಿತು, ಆದರೆ ಹೊರಗಿನ ಛಳಿಗೆ ಒದ್ದೆಯಾದ ನಮ್ಮ ..ಚೊರೆಯುವಿಕೆಯೂ ಸೇರಿ ನಡುಗುತ್ತಿದ್ದ ನಮ್ಮ ಪರಿಸ್ಥಿತಿ ಶೋಚನೀಯವಾಗಿತ್ತು. ..ೀ ಕುಡಿಯುತ್ತ ಪೈಪ್ ಸೇದುತ್ತ ಒಂದು ಒಳ್ಳೆಯ ಪುಸ್ತಕ ಹಿಡಿದು ಕಂಬಳಿಯಲ್ಲಿ ..ಳ್ಳುವ ಬದಲು ಇದೆಂತಹ ಅವಸ್ಥೆಗೆ ಸಿಕ್ಕಿಹಾಕಿಕೊಂಡಿದ್ದೇವೆ? ಆದರೆ ಹಿಂದೆ ..ಪ್ರಶ್ನೆಯಂತೂ ಇರಲೇ ಇಲ್ಲ, ಬಲವಂತದ ನಗು ತಂದುಕೊಂಡು ಮುಂದುವರೆಯಲು ..ಟ್ಟಿ ಮಾಡಿಕೊಳ್ಳತೊಡಗಿದೆವು.

..ಬಟ್ಟೆ ನಮ್ಮ ದೇಹವನ್ನು ಚಳಿಯಿಂದ ಕೊರೆಯುವುದನ್ನು ತಪ್ಪಿಸಲು, ನಾವು ..ವಿವಸ್ತ್ರರಾಗಿ ಬಟ್ಟೆಯನ್ನು ಹಿಂಡಿ ಬಿದಿರಿನ ಗಳವೊಂದರ ಮೇಲೆ ಹಾಕಿದೆವು. ಆ ..ನಮ್ಮ ಹೆಗಲ ಮೇಲಿಟ್ಟುಕೊಂಡು ನಿಧಾನ ಹೆಜ್ಜೆ ಹಾಕತೊಡಗಿದೆವು. ಕೊರೆಯುವ ..ಳಿನ ಹೆಣ ಭಾರ, ಬೆತ್ತಲೆ ಮೈಗೆ ಚುಚ್ಚುವ ಗಿಡಗಂಟೆ, ಬೂಟಿನಲ್ಲಿ ಜಾರುವ .. ಹೀಗೆ ಕಷ್ಟಗಳ ಸರಮಾಲೆಯೇ ಇದ್ದಿತು. ಕೆಸರಿನಲ್ಲಿ ನಾವು ಜಾರಿ ..ಗಿದ್ದರಿಂದ ಉಂಟಾಗುತ್ತಿದ್ದ ಭಾರೀ ಸದ್ದು ಕಾಡುಪ್ರಾಣಿಗಳಿಗೆ ನಮ್ಮಿರ್ವವನ್ನು ..ತ್ತು, ಆದರೆ ಇಂತಹ ಭಾರೀ ವರ್ಷಧಾರೆಯಾದ ಮೇಲೆ ಸಾಮಾನ್ಯವಾಗಿ ಎಲ್ಲಾ ..ಬೇಟೆಯ ಇಚ್ಛೆಯನ್ನು ಕಳೆದುಕೊಂಡಿರುತ್ತವೆ ಎನ್ನುವುದು ನಮಗೆ ಧೈರ್ಯ

ಹೆಬ್ಬಾವನ್ನು ಚೀಲಕ್ಕೆ ತುಂಬಿದ್ದು

..ಪಕ್ಕದಲ್ಲಿ ಹರಿಯುತ್ತಿದ್ದ ಹಳ್ಳ ಈಗ ತುಂಬ ಹರಿಯತೊಡಗಿತ್ತು. "ಕ್ರೊರ್, ..ಕ್ವಾಕರ್, ಕ್ವಾಕರ್.." ಎಂದು ಕಪ್ಪೆಗಳ ಕೂಗು ಇಡೀ ಕಾಡಿನಲ್ಲಿ ಮಾರ್ದನಿಸತೊಡಗಿತು. ..ಗಳ ಸಂಗಮದ ಸಮಯವಾಗಿದ್ದು ತಮ್ಮ ಪ್ರಿಯಕರನನ್ನು ಕೂಗಿ ಕೂಗಿ ಕರೆಯುತ್ತಿದ್ದವು. ..ಅನ್ನು ಆಸ್ವಾದಿಸಲು ಹೊರಡುವ ಹಾವುಗಳ ಬಗ್ಗೆ ನಾವು ಎಚ್ಚರ ವಹಿಸಬೇಕಿತ್ತು. ..ಂದುಕೊಳ್ಳುತ್ತಿರುವಾಗಲೇ ನಮ್ಮ ದಾರಿಯಲ್ಲಿ ಏನೋ ಸುಳಿದಂತಾಯಿತು. ನಾನು .. ಬೆಳಕನ್ನು ಅಲ್ಲಿಗೆ ಕೇಂದ್ರೀಕರಿಸಿ ನಿಶ್ಚಲನಾದೆನು. ಇದು ಹಾವೆಂದು ತಿಳಿಯಲು ..ಷವಾಗಲಿಲ್ಲ, ಎರಿಕ್‌ನನ್ನು ಅಲ್ಲೇ ನಿಲ್ಲಲು ಹೇಳಿ ನಾನು ವೇಗವಾಗಿ ಮುನ್ನಡೆದೆ. ..ಗೆ ಕಿವಿ ಇರದಿದ್ದರೂ ಅವುಗಳ ಹೊಟ್ಟೆಯ ಭಾಗದಲ್ಲಿರುವ ಚರ್ಮದ ಮೂಲಕ ..ನೆಲದಲ್ಲಾಗುವ ಚಲನೆಯನ್ನು ಸಂವೇದಿಸಿ ಅಪಾಯವನ್ನು ಗುರುತಿಸುತ್ತವೆ. ಇವುಗಳ .. ನೇರವಾಗಿ ಮಾತ್ರ ನೋಡಬಲ್ಲದು ಮತ್ತು ಕಣ್ಣುಗಳಿಗೆ ರೆಪ್ಪೆಯೂ ಇರುವುದಿಲ್ಲ. .. ವಿರುದ್ಧವಾಗಿ ಮುಖ ಹಾಕಿ ಕುಳಿತು ಒಂದು ದೊಡ್ಡ ಕಪ್ಪೆಯನ್ನು ನುಂಗುವ ..ದ್ದ ಈ ಹಾವು ನನ್ನ ಟಾರ್ಚ್‌ನ ಬೆಳಕನ್ನು ಗುರುತಿಸಲಿಲ್ಲ, ನನ್ನ ರಬ್ಬರ್ ಹಿಮ್ಮಡಿಯ ..ಳು ನನ್ನ ನಡಿಗೆ ಮೌನವಾಗಿರುವುದಕ್ಕೆ ಸಹಕರಿಸುತ್ತಿತ್ತು.

..ರ ಹೋದಾಗ ಹೆಬ್ಬಾವು ಎಂದು ತಿಳಿಯಿತು. ತನ್ನ ವಿಷದಿಂದ ಕೊಂದ ಕಪ್ಪೆಯ ..ತ್ತು ಒಂದು ಕಾಲನ್ನು ನುಂಗಿದ್ದ ಅದು ದೇಹವನ್ನು ನುಂಗುವ ಯತ್ನದಲ್ಲಿತ್ತು. ನಾನು ..ರಲ್ಲಿ ಹಾವುಗಳನ್ನು ಸಂಗ್ರಹಿಸುವುದರಲ್ಲಿ ಅತಿ ಉತ್ಸುಕನಾಗಿದ್ದೆ. ಈ ಹಾವಿನ ಭಾರೀ ..ನ್ನ ನೋಡಿದ ಮೇಲೆ ಇದನ್ನೂ ಹಿಡಿಯಲೇಬೇಕೆಂದು ನಿರ್ಧರಿಸಿದೆ.

..ತಹ ಕೆಲಸಕ್ಕಾಗಿಯೇ ನನ್ನ ಬಳಿ ಇಟ್ಟುಕೊಂಡಿದ್ದ ಚೀಲವನ್ನು ನನ್ನ ಹೆಗಲ ಮೇಲಿದ್ದ ..ಳಕ್ಕೆ ತೂಗುಹಾಕಿದ್ದ ಕಿಟ್ ಬ್ಯಾಗ್‌ನಿಂದ ತೆಗೆಯಲು ಕೈಹಾಕಿದೆ. ಆಗ ಸಾಕಷ್ಟು ..ಟ್ಟಿತು. ಇದರಿಂದ ಎಚ್ಚರಗೊಂಡ ಹಾವು ಕಪ್ಪೆಯನ್ನು ಗಂಟಲಿನಿಂದ ಹೊರ ತಳ್ಳಿ ..ರುಗಿ ಹೆಡೆಯೆತ್ತಿ ಕೆರಳಿ ನಿಂತಿತು.

..ಒಂದು ಅದ್ಭುತವಾದ ಹಾವಾಗಿತ್ತು, ನಾನು ಇದನ್ನು ತಕ್ಷಣ ಯುದ್ಧಕ್ಕೆ ಆಹ್ವಾನಿಸದಿದ್ದರೆ ..ಪ್ಪಿಸಿಕೊಂಡುಬಿಡಬಹುದು ಎಂದುಕೊಂಡು ಹಾವಿನಿಂದ ಕೆಲವು ಅಡಿ ದೂರದ .. ನನ್ನ ಬೂಟಿನಿಂದ ಬಲವಾಗಿ ಒದ್ದೆ. ಹಾವು ಇನ್ನೂ ಎತ್ತರಕ್ಕೆ ನಿಂತು ಅದೇ ..ನ್ನ ತಲೆಯಿಂದ ಹೊಡೆಯಿತು. ನಾನಾಗಲೆ ಕಾಲು ಹಿಂದೆಗೆದುಕೊಂಡಿದ್ದೆ. ನಾನು ..ಕಡೆಯೇ ದೃಷ್ಟಿಯನ್ನು ನೆಟ್ಟು ಪ್ರಯಾಸದಿಂದ ನನ್ನ ಸಾಮಾನುಗಳ ಮಧ್ಯದಿಂದ ..ಚೀಲವನ್ನು ಹುಡುಕಿ ತೆಗೆದೆ. ಸರಸರನೆ ಹಾವಿನೆಡೆಗೆ ಮುನ್ನಡೆಯುತ್ತಿದ್ದಂತೆ ಅದು ..ಪೂರ್ಣ ದೇಹವನ್ನು ತಿರುಗಿಸಿ ಯುದ್ಧಕ್ಕೆ ನಿಂತಿತು.

..ಹಾವುಗಳನ್ನು ಒಂದೇ ಕಡೆ ನಿಲ್ಲಿಸಿಕೊಂಡರೆ ಹಿಡಿಯುವುದು ಸುಲಭ ಅದು ಆಚೀಚೆ ..ಡುಗಿದಾಗ ಹಿಡಿಯಲು ಯತ್ನಿಸುವುದು ಅಪಾಯಕಾರಿಯಾಗಬಹುದು. ಹಾವನ್ನು .. ನಮ್ಮ ಚಲನೆಗಳು ತ್ವರಿತವಾಗಿರಬೇಕಾಗುತ್ತದೆ ಮತ್ತು ಇದನ್ನು ಅಭ್ಯಾಸ ..ಳ್ಳುವುದು ಕಷ್ಟವೇನಲ್ಲ.

.. ನನ್ನ ಬಲಗೈಯನ್ನು ಉದ್ದಮಾಡಿ ಚೀಲವನ್ನು ಹಾವಿನ ತಲೆಯೆದುರು ಹಿಡಿದುಕೊಂಡೆ. ..ತಕ್ಷಣ್ಣು ಸಿಟ್ಟಿನಿಂದ ಚೀಲದೆಡೆ ನುಗ್ಗಿತು. ನಾನು ತಕ್ಷಣ ಚೀಲವನ್ನು ಹಿಂದೆ ..ಎಳೆದಿದ್ದರಿಂದ ಹಾವು ಮತ್ತೆ ತನ್ನ ತಲೆಯನ್ನು ನೆಲಕ್ಕೆ ಅಪ್ಪಿಕೊಂಡಿತು. ತಕ್ಷಣ ನನ್ನ ..ಲ್ಲಿದ್ದ ಬಿದಿರಿನಿಂದ ಹಾವಿನ ಹೆಡೆಯ ಕೆಳಗಿನ ತಲೆಯ ಹಿಂಭಾಗವನ್ನು ಒತ್ತಿಹಿಡಿದೆ. ..ದ್ದ ಭಯದಿಂದ ನಿಂತು ನೋಡುತ್ತಿದ್ದ ಎರಿಕ್‌ನನ್ನು ಟಾರ್ಚ್ ಹಿಡಿದುಕೊಳ್ಳಲು .. ಆತ ಅನುಮಾನಿಸುತ್ತಲೇ ಬಂದ!

.. ತಡಮಾಡದೆ ಚೀಲವನ್ನು ನೆಲಕ್ಕೆ ಹಾಕಿ ಹಾವಿನ ಕುತ್ತಿಗೆಯನ್ನು ನನ್ನ ಹೆಬ್ಬೆರಳು ..ರುಬೆರಳಿನಲ್ಲಿ ಒತ್ತಿಹಿಡಿದು, ಬಿದಿರನ್ನು ಆಚೆ ಸರಿಸಿದೆ. ನನ್ನ ಕೈಗಳಿಗೆ ಸುತ್ತಿಕೊಂಡ ..ನಿಧಾನವಾಗಿ ಬಿಡಿಸಿ ತೆಗೆಯುತ್ತಾ ಎರಿಕ್‌ನಿಗೆ ಚೀಲವನ್ನು ನೆಲದಿಂದ ಎತ್ತಿ ಬಿಡಿಸಿ ..ಳ್ಳಲು ಹೇಳಿದೆ. ಮತ್ತೆ ಅನುಮಾನಿಸುತ್ತಲೇ ಎರಿಕ್ ಮುಂದೆ ಬಂದ. ನಾನು ..ದೇಹವನ್ನು ಚೀಲಕ್ಕೆ ತುರುಕಿ ನಂತರ ನನ್ನ ಬಲಗೈಯಲ್ಲಿದ್ದ ಅದರ ತಲೆಯನ್ನು ..ಅಮೇಲೆ ಒಂದೇ ಚಲನೆಯಲ್ಲಿ ಹಾವಿನ ತಲೆಯನ್ನು ಹಿಡಿದಿದ್ದ ಬಲಗೈಯನ್ನು ..ದು ಎಡಗೈಯಿಂದ ಚೀಲದ ಬಾಯನ್ನು ಅಮುಕಿ ಹಿಡಿದೆ. ಕೊನೆಯದಾಗಿ ..ಚಾಯವನ್ನು ದಾರದಿಂದ ಬಿಗಿದು ಚೀಲವನ್ನು ನನ್ನ ಕಿಟ್ ಬ್ಯಾಗ್‌ಗೆ ಸೇರಿಸಿದೆ.

..ದಿ, ಹೆಬ್ಬಾವನ್ನು ಹಿಡಿಯುವುದು ಎಷ್ಟು ಸುಲಭ. ಇದಕ್ಕೆ ಬೇಕಾದದ್ದು ಧೈರ್ಯವಲ್ಲ, ..ತ್ತು ತ್ವರಿತ ಚಲನೆ. ಪೂರ್ಣಪೂರ್ವಕವಾಗಿ ಧೈರ್ಯ ತಂದುಕೊಳ್ಳಲು ಯತ್ನಿಸುವವ, .. ಹೆದರಿ ಅನುಮಾನಿಸಿಬಿಟ್ಟರೆ ಅಪಾಯ ಕಟ್ಟಿಟ್ಟ ಬುತ್ತಿ!

(ಮುಂದುವರೆಯುವುದು)


ನಳಿನಿ ಜಮೀಲಾರ 'ಸೆಕ್ಸ್ ವರ್ಕರ್' ಒಬ್ಬಳ ಆತ್ಮಕಥನ'

ಪುಸ್ತಕ ಪರಿಚಯ



–ಸುಭಾಷ್ ರಾಜಮಾನೆ

"ಸೆಕ್ಸ್ ಎನ್ನುವುದು ಅನಿರ್ವಚನೀಯವಾದ ಅನುಭವವಾಗಿದ್ದು ಅದನ್ನು ಮಾರಿಕೊಳ್ಳುವುದು ನ್ಯಾಯವೇ ಎಂದು ಬಹಳ ಮಂದಿ ಲೇಖಕರು ನಮ್ಮನ್ನು ಪ್ರಶ್ನಿಸುತ್ತಿರುತ್ತಾರೆ. ಜ್ಞಾನವನ್ನು "ಅದಕ್ಕೆ ಮೀರಿದ ಸಂಪತ್ತೇ ಇಲ್ಲ" ಎಂದು ಹೇಳುತ್ತಿರುತ್ತಾರಲ್ಲವೆ ? ಆದರೆ ಯಾವುದೇ ಉಪಾಧ್ಯಾಯನಾದರೂ ಉಚಿತವಾಗಿ ವಿದ್ಯಾದಾನ ಮಾಡುತ್ತಿದ್ದಾರೆಯೇ? ಇದು ನನ್ನ ಪ್ರಶ್ನೆ. ಶಿಕ್ಷಕರೆಲ್ಲರಿಗೂ ವೇತನ ಬೇಕು. ಅವರು ವಿದ್ಯಾ ಬೋಧನೆಯನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸಿದವರು. ಮಧುರ ಗಾಯಕ ಜೇಸುದಾಸ್ ತನ್ನ ಹಾಡುಗಳಿಗೆ ಹಣ ವಸೂಲಿ ಮಾಡುತ್ತಾರೆ. ಅವರ ಹಾಡು ನಮಗೆ ಆನಂದವನ್ನು ಕಲ್ಪಿಸುವುದಿಲ್ಲವೆ? ಲೈಂಗಿಕ ಸೇವೆಯ ವೃತ್ತಿಯನ್ನು ಅದೇರೀತಿ ಏಕೆ ಅರ್ಥೈಸಿಕೊಳ್ಳಬಾರದು? ಇದು ನನ್ನ ಕೋರಿಕೆ. ಎಲ್ಲ ವೃತ್ತಿಯವರಿಗೆ ಇದ್ದಂತೆ ನಮಗೂ ಕೆಲವು ಸಮಸ್ಯೆಗಳಿವೆ. ಒಬ್ಬ ಗಾಯಕ ತನ್ನ ಕಂಠವನ್ನು ಹತ್ತಾರು ವರ್ಷಕಾಲ ಕಾಪಾಡಿಕೊಂಡು ಬರುವ ಸಲುವಾಗಿ ಆರೋಗ್ಯ ರೀತ್ಯಾ ಕೆಲವು ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳುತ್ತಾನೆ. ಸೆಕ್ಸ್ ವರ್ಕರ್ ಕೂಡಾ ಅಷ್ಟೆ. ಹಣ ತೆಗೆದುಕೊಳ್ಳುವುದನ್ನೇ ಏಕೆ ಪ್ರಧಾನವಾಗಿ ದೋಷವನ್ನಾಗಿ ಪರಿಗಣಿಸುವುದು? ಬೇರೆ ಎಲ್ಲ ವೃತ್ತಿಗಳಲ್ಲೂ



ತೆಗೆದುಕೊಳ್ಳುತ್ತಿರುವಾಗ ನಮ್ಮದನ್ನು ಮಾತ್ರ ಅಪರಾಧವನ್ನಾಗಿ ಏಕೆ ಪರಿಗಣಿಸುವುದು? ಎಂಬುದು ನನ್ನ ಪ್ರಶ್ನೆ." (ಪು.130-131)

ಇದು ನಳಿನಿ ಜಮೀಲಾ ಮಲೆಯಾಳಮ್ ಭಾಷೆಯಲ್ಲಿ ಬರೆದ ತಮ್ಮ ವಿವಾದಾತ್ಮಕ 'ಆತ್ಮಕಥನ'ದಲ್ಲಿ ಕೇಳಿರುವ ಪ್ರಶ್ನೆಗಳು. ತಮ್ಮ ವೃತ್ತಿಯನ್ನು ಸಮಾಜ 'ಅಪರಾಧ'ವನ್ನಾಗಿ ಪರಿಗಣಿಸಿರುವುದರ ಕುರಿತು ನಳಿನಿಯವರಿಗೆ ಅಪಾರವಾದ ನೋವಿದೆ. ಈ ವೃತ್ತಿಯನ್ನು ಸಮಾಜ ಬಾಹಿರ ಚಟುವಟಿಕೆಯಾಗಿ ನೋಡುವುದರ ಬಗ್ಗೆಯೂ ಅವರಿಗೆ ತುಂಬ ಆಕ್ರೋಶವಿದೆ. ನಳಿನಿ ತಮ್ಮನ್ನು ಮುಖ್ಯವಾಗಿ 'ಸೆಕ್ಸ್ ವರ್ಕರ್' ಎಂದು ಗುರುತಿಸಿಕೊಳ್ಳುವುದರಲ್ಲಿ ಅವರಿಗೆ ಯಾವುದೇ ಸಾಮಾಜಿಕ ಮುಜುಗರ ಇಲ್ಲ ಎಂಬುದಕ್ಕೆ ಈ ಉಲ್ಲೇಖವೇ ಸಾಕ್ಷಿ. ಅಷ್ಟೆ ಅಲ್ಲದೆ ಅವರೊಬ್ಬ ಲೈಂಗಿಕ ಕಾರ್ಯಕರ್ತೆಯರ ಹಿತಾಸಕ್ತಿಗಳನ್ನು ಕುರಿತು ಮಾತನಾಡುವ ಬುದ್ಧಿಜೀವಿ ಎಂಬುದನ್ನೂ ಋಜುವಾತು ಪಡಿಸುತ್ತದೆ.

ಆದರೆ ನಳಿನಿ ಮೂಲತಃ ಸೆಕ್ಸ್ ವರ್ಕರ್ ಅಲ್ಲ; ತಾನು ವೇಶ್ಯೆಯಾಗಿ ತುಂಬ ಹಣ ಸಂಪಾದನೆ ಮಾಡಿ ಬದುಕಬೇಕೆಂದು ಹಂಬಲಿಸಿದವಳಲ್ಲ. ಬಾಲ್ಯದಲ್ಲಿ ತನ್ನ ಅಣ್ಣನೊಂದಿಗೆ ಶಾಲೆಗೆ ಹೋಗುತ್ತಿದ್ದ ನಳಿನಿ ತುಂಬ ಓದಬೇಕೆಂಬ ಮನಸ್ಸನ್ನು ಹೊಂದಿದ್ದಳು. ಆದರೆ ಆಕೆಯ ಅಪ್ಪ ಅಮ್ಮ ದಾಯಾದಿಗಳೆಲ್ಲ ಸೇರಿಕೊಂಡು ಮೂರನೆಯ ತರಗತಿಗೆ ತಿಲಾಂಜಲಿ ನೀಡಿದರು. ಆಕೆಯನ್ನು ಮನೆ ಕೆಲಸಕ್ಕೆ ಮಾತ್ರ ಸೀಮಿತಗೊಳಿಸಿದರು. ಮಿಲಿಟರಿಯಿಂದ ನಿವೃತ್ತನಾಗಿದ್ದ ಅಪ್ಪನಿಗೆ ಆರು ಮಕ್ಕಳನ್ನು ಸಾಕುವುದು ದುಸ್ತರವಾದಾಗ ನಳಿನಿಯ ಅಮ್ಮನೂ ದುಡಿಯಬೇಕಾಯಿತು. ಆದರಲ್ಲೂ ಮನೆಯಲ್ಲಿ ದೊಡ್ಡಮ್ಮನ ಯಜಮಾನಿಕೆ ಹಾಗೂ ದರ್ಬಾರುಗಳಿಂದ ರೋಸಿಹೋದ ನಳಿನಿ ತನ್ನ ಒಂಬತ್ತನೆಯ ವಯಸ್ಸಿನಲ್ಲಿ ಹೆಂಚಿನ ಕಾರ್ಖಾನೆಯಲ್ಲಿ ಕೂಲಿ ಕೆಲಸಕ್ಕೆ ಸೇರಲು ನಿರ್ಧರಿಸಿದಳು. ಕುಟುಂಬದ ನಿರ್ವಹಣೆಗಾಗಿ ಮತ್ತು ಹೆಚ್ಚಿನ ಕೂಲಿಗಾಗಿ ಮಣ್ಣಿನ ಗಣಿಗಳಲ್ಲಿ ಮಣ್ಣು ಹೊರುವ ಕೆಲಸವನ್ನೂ ಮಾಡಬೇಕಾಯಿತು.

ಮನೆಯ ಜಗತ್ತಿನಿಂದ ಹೊರ ಜಗತ್ತಿಗೆ ಹೆಜ್ಜೆಯಿಟ್ಟಾಗ ನಳಿನಿಯ ಹದಿಹರೆಯದ ಬಾಳು ಸಿನಿಮೀಯ ರೀತಿಯಲ್ಲಿ ಅನೇಕ ತಿರುವುಗಳನ್ನು ಪಡೆದುಕೊಂಡಿತು. ಕೂಲಿ ಕೊಡುವ ಯಜಮಾನರು ಆಸೆಗಣ್ಣಿನಿಂದ ನೋಡಲಾರಂಭಿಸಿದರು. ಕೆಲವರು ಪ್ರೇಮಿಸುವಂತೆ ಆಕೆಯ ದುಂಬಾಲು ಬಿದ್ದರು. ಮೊದಮೊದಲು ನಳಿನಿ ತನ್ನ ಮಾನ ಹಾಗೂ ಶೀಲವನ್ನು ರಕ್ಷಿಸಿಕೊಳ್ಳಲು ಪಣ ತೊಡುತ್ತಾಳೆ. ಕಾಮುಕ ಪುರುಷರ ಕಣ್ಣುಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅಪ್ಪನ ಇಷ್ಟದ ವಿರುದ್ಧವಾಗಿ ತನ್ನ ಅಣ್ಣನ ಮದುವೆಯನ್ನು ಬೆಂಬಲಿಸಿದ್ದರಿಂದ ನಳಿನಿ ಮನೆಯಿಂದ ಹೊರಹಾಕಲ್ಪಡುತ್ತಾಳೆ. ನಳಿನಿ ಹದಿಹರೆಯದ ಹೆಣ್ಣಾಗಿ ಯಾರಿಂದ ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದಳೊ ರಕ್ಷಣೆಗಾಗಿ ಅವರನ್ನೆ ಹುಡುಕಿಕೊಂಡು ಹೋಗುವುದು ವಿಚಿತ್ರವಾಗಿದೆ. ಕೊನೆಯಲ್ಲಿ ತನ್ನ ಇಷ್ಟದ ವಿರುದ್ಧವಾಗಿ "ಎಲ್ಲ ಅವಲಕ್ಷಣಗಳ, ಅನಾಚಾರಗಳ ಪ್ರತಿಮೂರ್ತಿ"ಯಾಗಿದ್ದ ಸುಬ್ರಹ್ಮಣ್ಯಂ ಎಂಬಾತನನ್ನು ಮದುವೆಯಾಗಿ ನಳಿನಿ ಎರಡು ಮಕ್ಕಳ ತಾಯಿಯಾಗುತ್ತಾಳೆ. ಮತ್ತೆ ಅತ್ತೆಯಿಂದಲೂ ನರಕಯಾತನೆ ಅನುಭವಿಸುತ್ತಾಳೆ. ಗಂಡ ವಿಪರೀತ ಕುಡಿತದ ಚಟದಿಂದ ಕ್ಯಾನ್ಸರ್ ಆಗಿ ಮೂರುವರೆ ವರ್ಷದ ಬಳಿಕ ಸತ್ತು ಹೋಗುತ್ತಾನೆ. ತನ್ನನ್ನು ಮದುವೆ ಆಗಬಯಸಿದ ವ್ಯಕ್ತಿ ಒಬ್ಬ ರೌಡಿ, ಜೂಜುಕೋರನೆಂದು ಗೊತ್ತಿದ್ದೂ ನಳಿನಿ ಒಪ್ಪಿದ್ದೇಕೆ? ಈಗ ಮಕ್ಕಳನ್ನು ಸಾಕುವ ಸಲುವಾಗಿ ವೇಶ್ಯೆಯಾಗಿ ಬೀದಿಗಿಳಿಯಬೇಕಾಯಿತೆ? ಕೌಟುಂಬಿಕ ಛಿದ್ರತೆ ಮತ್ತು ವಿಘಟನೆಯೇ ಇದಕ್ಕೆ ಮೂಲ ಕಾರಣವೇ? ಪುರುಷ ಪ್ರಾಧಾನ್ಯತೆಯ ಕಟ್ಟುಪಾಡುಗಳು ನಳಿನಿಯನ್ನು ವೇಶ್ಯೆಯನ್ನಾಗಿ ಮಾಡಿತೆ? ಈ ಎಲ್ಲ ಪ್ರಶ್ನೆಗಳನ್ನು ಒಳಗೊಂಡು ಅವುಗಳಿಗೆ ಜವಾಬುಗಳನ್ನು ಕಂಡುಕೊಳ್ಳುವ ಪ್ರಯತ್ನದಂತೆ ಈ 'ಆತ್ಮಕಥನ' ರೂಪಿತವಾಗಿದೆ.

ನಮ್ಮ ಸಮಾಜದಲ್ಲಿ ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರಿಗೆ ಯಾವುದೇ ಸ್ಥಾನಮಾನಗಳಿರುವುದಿಲ್ಲ, ಅಂತಹವರಿಗೆ ಸಾಮಾಜಿಕ ರಕ್ಷಣೆ ಹಾಗೂ ಭದ್ರತೆ ಕೂಡ ಕಡಿಮೆಯೇ. ಈ ವೃತ್ತಿಯನ್ನು ಅವಲಂಬಿಸಿದವರನ್ನು ಅದು ಅವರ ವೈಯಕ್ತಿಕ ಆಯ್ಕೆ ಎಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಸಾಮಾಜಿಕವಾಗಿ ವೇಶ್ಯೆಯರೆಂದರೆ ತಮ್ಮ ಮೈಯನ್ನು ಮಾರಿಕೊಂಡು ಅನೈತಿಕವಾಗಿ ಬದುಕಲು ಬೀದಿಗಿಳಿದವರು ಎಂಬ ಗ್ರಹಿಕೆಯೇ ಹೆಚ್ಚು ಜನಜನಿತವಾಗಿದೆ.

ಈ ಹಿನ್ನೆಲೆಯಲ್ಲಿ ನಳಿನಿ ಜಮೀಲಾ ಅವರು ಮಲೆಯಾಳಿ ಭಾಷೆಯಲ್ಲಿ ಬರೆದ ತಮ್ಮ ಆತ್ಮಕತೆಯಿಂದಾಗಿ ಕೇರಳದಲ್ಲಿ ದೊಡ್ಡ ವಿವಾದವನ್ನು ಹುಟ್ಟು ಹಾಕಿದರು. ಪ್ರಸಿದ್ಧ ಕವಿ ಮತ್ತು ಲೇಖಕಿಯಾಗಿದ್ದ ಕಮಲಾದಾಸ್ ತಮ್ಮ ಆತ್ಮಕತೆ ಪ್ರಕಟಿಸಿದಾಗಲೂ ಸಂಪ್ರದಾಯಸ್ಥ ಸಮಾಜದಲ್ಲಿ ಹೊಸ ಸಂಚಲನೆಯನ್ನು ಉಂಟುಮಾಡಿದ್ದರು. ಆದರೆ ನಳಿನಿ ಜಮೀಲಾ ಓರ್ವ ಸೆಕ್ಸ್ ವರ್ಕರ್‌ಳಾಗಿ ತಮ್ಮ ಬದುಕಿನ ಕತೆಯನ್ನು 'ಆತ್ಮಕತೆ'ಯನ್ನಾಗಿ ನಿವೇದಿಸಿಕೊಳ್ಳುವುದರ ಮೂಲಕ ಪುರುಷ ಲೋಕದ ಕ್ರೌರ್ಯವನ್ನು ಅನೇಕ ಬಗೆಗಳಲ್ಲಿ ಪ್ರತಿರೋಧಿಸಿದ್ದಾರೆ.

ನಳಿನಿ ಜಮೀಲಾ ತಮ್ಮ ವೇಶ್ಯಾ ವೃತ್ತಿಗೆ ಸಂಬಂಧಿಸಿದಂತೆ ಎದುರಿಸಿದ ಅವಮಾನ, ಶೋಷಣೆ ಹಾಗೂ ಕಷ್ಟಗಳನ್ನು ದಿಟ್ಟತನದಿಂದ ಈ ಆತ್ಮಕತೆಯಲ್ಲಿ ದಾಖಲಿಸಿದ್ದಾರೆ. ಇದು ಲೈಂಗಿಕ ಸೇವಕಿಯೊಬ್ಬಳು ತನ್ನ ಅಸ್ತಿತ್ವ ಹಾಗೂ ಮಕ್ಕಳ ಬದುಕಿಗಾಗಿ ಈ ದಂಧೆಯನ್ನು ಅನಿವಾರ್ಯವಾಗಿ ಒಪ್ಪಿಕೊಂಡಿರುವುದನ್ನು ಈ ಆತ್ಮಕಥನ ಸರಳವಾಗಿ ತೆರೆದಿಡುತ್ತ ಹೋಗುತ್ತದೆ.

ನಳಿನಿ ಹೇಗೆ ಲೈಂಗಿಕ ಕಾರ್ಯಕರ್ತೆಯರ ಹೋರಾಟಗಾರ್ತಿಯಾಗಿ ಪರಿವರ್ತಿತಳಾದಳು ಎಂಬುದನ್ನು ಈ ಆತ್ಮಕಥನ ಹಂತಹಂತವಾಗಿ ನಿರೂಪಿಸುತ್ತದೆ. ಮೊದಲ ಹಂತದಲ್ಲಿ ನಳಿನಿ ತಮ್ಮ ವೃತ್ತಿಯಲ್ಲಿ ಎದುರಾದ ಕಷ್ಟಕಾರ್ಪಣ್ಯಗಳನ್ನು ಹಾಗೂ ಸಮಸ್ಯೆಗಳನ್ನು ಹೆಣ್ಣಿಗೆ ಅನಿವಾರ್ಯ ಮತ್ತು 'ಸಹಜ'ವಾದದ್ದು ಎಂದು ಎಲ್ಲವನ್ನೂ 'ಸಹಿಸಿ'ಕೊಳ್ಳುತ್ತಾರೆ. ಇದು ಪ್ರತಿಯೋರ್ವ ಹೆಣ್ಣಿಗೂ ತಮ್ಮ ಪಿತೃ ಪ್ರಧಾನ ಕೌಟುಂಬಿಕ ವ್ಯವಸ್ಥೆಯಿಂದಲೇ ಬಳುವಳಿಯಾಗಿ ಬರುವಂತಹದ್ದು. 'ಸಹನೆ' ಎಂಬುದು ಹೆಣ್ಣಿನ ಬಹು ದೊಡ್ಡ ಶಕ್ತಿ ಮತ್ತು ಮೌಲ್ಯವೆಂದು ಬಾಲ್ಯದಿಂದಲೇ ಅವರನ್ನು ನಂಬಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಎಲ್ಲರನ್ನೂ ಸುಲಭವಾಗಿ ನಂಬುತ್ತಿದ್ದ ನಳಿನಿ ನಂತರದಲ್ಲಿ ರೌಡಿ ಪೊಲೀಸ್ ಏಜೆಂಟ್, ಗಿರಾಕಿ ಮುಂತಾದವರು ನೀಡುವ ಹಿಂಸೆ ಮತ್ತು ಕಿರುಕುಳಗಳಿಂದ ಚಾಣಾಕ್ಷತನದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದು ನಳಿನಿ ತಮ್ಮ ಅತಂತ್ರ ಸ್ಥಿತಿಯ ಬದುಕು ಮತ್ತು ಅನುಭವ ಹೇಳಿಕೊಟ್ಟ ಪಾಠದಿಂದ ಕಲಿತದ್ದು. ಇಂತಹ ಉಪಾಯಗಳು ಹಲವಾರು ಸಂದರ್ಭಗಳಲ್ಲಿ ಮಾರಣಾಂತಿಕ ಹಲ್ಲೆ ಮತ್ತು ಸಾಮೂಹಿಕ ಅತ್ಯಾಚಾರಗಳಿಂದ ಅವರನ್ನು ಪಾರುಮಾಡಿದವು; ಆದರೆ ಇದು ಸಮಸ್ಯೆಗಳಿಂದ ಕ್ಷಣಿಕ ಮತ್ತು ತಾತ್ಕಾಲಿಕ ಬಿಡುಗಡೆ ಮಾತ್ರವಾಗಿತ್ತು. ಮೂರನೆಯ ಹಂತದಲ್ಲಿ ತಾವು ಅನುಭವಿಸುತ್ತಿದ್ದ ಶೋಷಣೆ ಮತ್ತು ಕ್ರೌರ್ಯದ ವಿರುದ್ಧ ನಳಿನಿ ಅವರು ಬೀದಿಗಿಳಿದು ಪ್ರತಿಭಟನೆ ನಡೆಸಲು ಮಾನಸಿಕವಾಗಿ ಅಣಿಯಾಗುತ್ತಾರೆ. ಇದು ತನ್ನನ್ನು ಮಾನಸಿಕವಾಗಿ ಕುಗ್ಗಿಸಿದ ವ್ಯವಸ್ಥೆಯ ವಿರುದ್ಧ ನೇರವಾದ ಸೆಣಸಾಟದ ವಿಧಾನವೂ ಆಗಿದೆ. ಈ ಪ್ರತಿರೋಧದ ಛಲಗಾರಿಕೆ ಮತ್ತು ಹಟಗಾರಿಕೆಗಳೇ ಅವರನ್ನು ಬೌದ್ಧಿಕ ಚಿಂತಕಿ ಹಾಗೂ ಸಾಮಾಜಿಕ ಹೋರಾಟಗಾರ್ತಿಯನ್ನಾಗಿ ರೂಪಿಸಿದ ಕ್ರಮವೂ ಆಗಿದೆ.

ನಳಿನಿ 'ಜ್ವಾಲಾಮುಖಿ' ಎಂಬ ಸಂಸ್ಥೆಯನ್ನು ಸೇರಿಕೊಂಡು ಲೈಂಗಿಕ ಸೇವಕರ ಮೇಲೆ ನಡೆಯುವ ರೌಡಿಗಳ ಅತ್ಯಾಚಾರ ಹಾಗೂ ಪೊಲೀಸರ ದೌರ್ಜನ್ಯಗಳನ್ನು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಖಂಡಿಸುತ್ತಾರೆ. ಲೈಂಗಿಕ ಸೇವಕರ ಹಕ್ಕುಗಳು ಮತ್ತು ಅವರ ಸಂಘಟನೆಯ ಅಗತ್ಯ ಕುರಿತು ದೇಶದ ಅನೇಕ ಭಾಗಗಳಲ್ಲಿ ಧೈರ್ಯವಾಗಿ ಭಾಷಣ ಮಾಡುತ್ತಾರೆ. ಲೈಂಗಿಕ ಸೇವಕರ ಪ್ರತಿನಿಧಿಯಾಗಿ ವಿದೇಶಗಳಲ್ಲೂ ಭಾಗವಹಿಸಿ ಅವರ ಸಮಸ್ಯೆಗಳನ್ನು ಚರ್ಚಿಸುತ್ತಾರೆ. ವೇಶ್ಯೆಯರ ಬದುಕಿನ ಸಮಸ್ಯೆಗಳ ಸಂಕೀರ್ಣತೆಯನ್ನು ಮನಗಾಣಿಸಲು ಹಲವಾರು ಡಾಕ್ಯುಮೆಂಟರಿಗಳನ್ನು ನಿರ್ಮಿಸಿ ತಾವು ಹೋದ ಕಡೆಗೆಲ್ಲ ಪ್ರದರ್ಶಿಸುತ್ತಾರೆ. ಇದೆಲ್ಲವೂ ತಮ್ಮ ಬದುಕಿನ ಬಹುದೊಡ್ಡ ಸಾಧನೆ ಎಂದು ನಳಿನಿ ತಮ್ಮ ಆತ್ಮಕತೆಯಲ್ಲಿ ಬಿಂಬಿಸುತ್ತಾರೆ.

ಈ ಆತ್ಮಕತೆ ಹಲವಾರು ದೃಷ್ಟಿಕೋನಗಳಿಂದ ಅತ್ಯಂತ ಮಹತ್ವದ್ದಾಗಿದೆ. ಹೆಣ್ಣು ತನ್ನ ಖಾಸಗಿ ಬದುಕನ್ನು ತೋಡಿಕೊಳ್ಳದಂತೆ ಅನೇಕ ನಿರ್ಬಂಧಗಳನ್ನು ಹೇರಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಳಿನಿ ಆತ್ಮಕತೆ ಬರೆದದ್ದು ಒಂದು ಬಗೆಯಲ್ಲಿ ಸಾಧನೆಯೇ ಆಗಿದೆ. ಅದುಮಿಟ್ಟುಕೊಂಡಿದ್ದ ಅಂತರಂಗದ ಆಳವಾದ ನೋವು ಹಾಗೂ ಭೀತಿಗಳು ಆತ್ಮಕತೆಯ ರೂಪ ಪಡೆದು ಪುರುಷ ಸಂಕೋಲೆಗಳಿಂದ ನಳಿನಿಯ ಬದುಕು ಮುಕ್ತವಾಗಲು ಹಂಬಲಿಸಿದೆ. ಆದರೆ ವೃತ್ತಿನಿಮಿತ್ತಕ್ಕಾಗಿ ಪ್ರತಿನಿತ್ಯ ಪುರುಷಲೋಕದೊಂದಿಗೆ ಸಹಕರಿಸಬೇಕಿರುವುದು ಅವರ ಬದುಕಿನ ವೈರುಧ್ಯವಾಗಿದೆ. ಅನೇಕ ಮಿತಿಗಳ ನಡುವೆಯೂ ಈ ಆತ್ಮಕತೆ ನಳಿನಿ ಅವರ ಅನೇಕ ಪ್ರಶ್ನೆಗಳನ್ನು ಸಾಮಾಜಿಕವಾಗಿ ಚರ್ಚಿಸುವಂತೆ ಪ್ರಚೋದಿಸುತ್ತದೆ. ಈ ಆತ್ಮಕತೆ ಚಪ್ಪರಿಸಿಕೊಂಡು ಓದುವ ಹಸಿಹಸಿಯಾದ ಅಶ್ಲೀಲ ನಿರೂಪಣೆಯನ್ನು ಹೊಂದಿಲ್ಲ ಮತ್ತು ಸೆಕ್ಸ್‌ನ್ನು ನಳಿನಿ ಎಲ್ಲೂ ವೈಭವೀಕರಿಸಿಲ್ಲ ಎಂಬುದೇ ಇದರ ಮುಖ್ಯ ವೈಶಿಷ್ಟ್ಯವಾಗಿದೆ. ವಾಸ್ತವವಾಗಿ ಲಿಂಗ ತಾರತಮ್ಯವಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣೊಬ್ಬಳ ಚಿಂತನೆಯ ವಿಧಾನಕ್ಕೂ ಈ ಕೃತಿ ನಿದರ್ಶನವಾಗಿದೆ.

ನಾವು ಎಂತಹ ಕ್ರೂರ ಸಮಾಜದಲ್ಲಿ ಬದುಕುತ್ತಿದ್ದೇ

ಕೆಲವು ವರ್ಷಗಳ ಹಿಂದೆ ಕೇರಳದಲ್ಲಿ ಒಂದು ಪ್ರಖ್ಯಾತ ನಾಟಕದ ಹೆಸರು ಕೇಳಿಬಂದಿತ್ತು. ಅದರ ಹೆಸರು, 'ನಿಂಡಲ್ ಎನ್ನೆ ಕಮ್ಯುನಿಸ್ಟ್ ಆಕಿ!' (ನೀವು ನನ್ನನ್ನು ಕಮ್ಯುನಿಸ್ಟ್ ಮಾಡಿದಿರಿ) ಎಂದಾಗಿತ್ತು. ಈ ನಾಟಕ ನೋಡುವ ಅವಕಾಶ ನನಗೆ ದೊರೆತಿರಲಿಲ್ಲ; ಅದರ ಕಥೆ ಏನೆಂದೂ ನನಗೆ ತಿಳಿಯದು. ಆದರೆ ಅಂತಹದೆ ಇನ್ನೊಂದು ವಾಕ್ಯ ನನ್ನ ಮನದಾಳದಲ್ಲಿ ಹರಿದಾಡುತ್ತಿದೆ. "ನೀವು ನನ್ನನ್ನು ಕೋಮುವಾದಿಯಾಗಿಸುತ್ತಿದ್ದೀರಿ!" ಎಂಬುದು ಆ ವಾಕ್ಯವಾಗಿದೆ. ಈ ಕುರಿತು ಇತ್ತೀಚಿಗಿನ ನನ್ನ ಒಂದೆರಡು ಅನುಭವಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಒಂದೆರಡು ವಾರಗಳ ಹಿಂದೆ ಪ್ರಜಾವಾಣಿ ಪತ್ರಿಕೆಯ ಪತ್ರಗಳ ವಿಭಾಗದಲ್ಲಿ ಒಂದು ಪತ್ರ ಪ್ರಕಟವಾಗಿತ್ತು. ಮಂಗಳೂರಿನ ಹೋಂ ಸ್ಟೇಯಲ್ಲಿ ಹುಟ್ಟುಹಬ್ಬ ಆಚರಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಹಿಂದೂ ಜಾಗರಣ ವೇದಿಕೆಯವರು ಆಕ್ರಮಣ ಮಾಡಿ ಹಲ್ಲೆ ನಡೆಸಿದ ಕುರಿತು ನಾನೂ ಕೂಡಾ ಅದನ್ನು ಖಂಡಿಸಿ ಕೆಲವು ಪತ್ರಿಕೆಗಳಲ್ಲಿ ಮತ್ತು ಟಿ.ವಿ. ಚಾನಲ್‌ನಲ್ಲಿ ಹೇಳಿಕೆ ನೀಡಿದ್ದೆ. ಪ್ರಜಾವಾಣಿಯಲ್ಲಿ ಪ್ರಕಟವಾದ ಈ ಪತ್ರ ನನ್ನ ಹೇಳಿಕೆಯ ಕುರಿತಾಗಿತ್ತು. ಚಲಿಸುತ್ತಿರುವ ಟ್ರೈನಿನಲ್ಲಿ ಓರ್ವ ಬಡ ಹೆಣ್ಣುಮಗಳ ಮೇಲೆ ನಾಲ್ವರು ಗೂಂಡಾಗಳು ಲೈಂಗಿಕ ಕಿರುಕುಳ ನೀಡಿ ಆಕೆಯನ್ನು ಚಲಿಸುತ್ತಿದ್ದ ಟ್ರೈನಿನಿಂದ ಹೊರದೂಡಿದ ಕುರಿತು ನಾವು ಪ್ರತಿಭಟಿಸಲಿಲ್ಲ ಅಥವಾ ಅದನ್ನು ವಿರೋಧಿಸಿ ಹೇಳಿಕೆ ನೀಡಲಿಲ್ಲ ಎಂಬುದು ಕೃಷ್ಣಮಾಚಾರ್ ಎಂಬವರಿಗೆ ನನ್ನ ಮೇಲಿದ್ದ ಆರೋಪವಾಗಿತ್ತು. ಅಂತಹ ಆಕ್ರಮಣ ಮಾಡಿದವರು ಮುಸ್ಲಿಮರಾಗಿದ್ದ ಕಾರಣ ನಾನು ಅದನ್ನು ವಿರೋಧಿಸಲಿಲ್ಲ ಎಂಬ ಒಳಾರ್ಥ ಅದರಲ್ಲಿತ್ತು. ಅಂದರೆ ನಾನು ಮುಸ್ಲಿಮಳಾದ ಕಾರಣ ಈ ಗೂಂಡಾ ವರ್ತನೆ ತೋರಿದ ಹುಡುಗರ ವಿರುದ್ಧ ಧ್ವನಿ ಎತ್ತಲಿಲ್ಲ ಎಂಬುದು ಇವರ ಅನಿಸಿಕೆಯೇ? ಕೆಲವು ಬುದ್ಧಿಜೀವಿಗಳ ಆಳದಲ್ಲಿ ಕೂಡಾ ಇಂತಹ ಒಂದು ಕೆಸರು ಮೆತ್ತಿಕೊಂಡಿದೆಯೇ?


ಅಸ್ಸಾಮಿನಲ್ಲಿ ಹೆಣ್ಣು ಮಗಳೊಬ್ಬಳನ್ನು ನಡುಬೀದಿಯಲ್ಲಿ ಎಳೆದಾಡಿ, ನಗ್ನಗೊಳಿಸಿ ಕಿರುಕುಳ ನೀಡಿದ್ದು, ಗೀತಿಕಾ ಶರ್ಮಾ ಗಂಡಸೊಬ್ಬನ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡದ್ದು, ನಾಲ್ಕು ವರ್ಷದ ಸ್ವಂತ ಹೆಣ್ಣು ಮಗುವಿನ ಮೇಲೆ ಅದರ ತಂದೆಯೇ ಅತ್ಯಾಚಾರ ಮಾಡಿದ್ದು ಇವೆಲ್ಲವೂ,



ಇನ್ನೂ ಇಂತಹ ಹಲವು ಘಟನೆಗಳು ಕಳೆದ ಒಂದೆರಡು ತಿಂಗಳಲ್ಲಿ ಈ ದೇಶದಲ್ಲಿ ನಡೆದಿದೆ. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರದ ಸುದ್ದಿಯಿಲ್ಲದೆ ಒಂದು ದಿನವೂ ಪತ್ರಿಕೆ ಬರುವುದಿಲ್ಲ. ಇಂತಹ ಪ್ರತಿಯೊಂದು ಘಟನೆಯ ಕುರಿತೂ ನಾನು ಪ್ರತಿಭಟಿಸಲಿಲ್ಲವೆಂದರೆ ಅವುಗಳನ್ನೆಲ್ಲ ನಾನು ಸಮರ್ಥಿಸುತ್ತೇನೆಂದು ಅರ್ಥವೇ?

ಈಗ ಮೊನ್ನೆಯಿಂದ ಇನ್ನೂ ಒಂದು ವಿಷಯ ನನ್ನ ನಿದ್ರೆ ಕೆಡಿಸುತ್ತಿದೆ. ಮೊನ್ನೆ ರಾತ್ರಿ ಏಳು ಗಂಟೆಯ ವೇಳೆಯಲ್ಲಿ ಪತ್ರಕರ್ತರೊಬ್ಬರು ಫೋನ್ ಮಾಡಿ "ನಿಮ್ಮ ಸಂದರ್ಶನ ಬೇಕು. ನಾಳೆ ಬರಲೇ?" ಎಂದು ಇಂಗ್ಲಿಷ್‌ನಲ್ಲಿ ಕೇಳಿದರು. ತಾನು ತಮಿಳನೆಂದೂ, ಕನ್ನಡ ಅಥವಾ ಮಲಯಾಳ ತಿಳಿಯದೆಂದೂ ತಿಳಿಸಿ 'ಇಂಡಿಯಾ ಟುಡೇ' ಪತ್ರಿಕೆಗಾಗಿ ಹೈದರಾಬಾದಿನಿಂದ ಬಂದಿದ್ದೇನೆಂದರು. "ನನಗೆ ಇಂಗ್ಲಿಷ್ ಬರುವುದಿಲ್ಲ, ನಿಮಗೆ ಬೇಕಾದುದನ್ನು ಈಗಲೇ ಕೇಳಿ" ನಾನಂದೆ. ಆತ ಕೇಳಿದ, "ಕೆಎಫ್‌ಡಿ, ಪಿ.ಎಫ್.ಐ. ಎಂಬ ಸಂಘಟನೆಗಳ ಕುರಿತು ಏನು ಹೇಳುತ್ತೀರಿ? ಅವರೇಕೆ ಈ ಸಂಘಟನೆ ಮಾಡಿಕೊಂಡಿದ್ದಾರೆ? ಅವರ ಹಿಂದೆ ಯಾರಿದ್ದಾರೆ? ಅವರಿಗೆ ಹಣ ಎಲ್ಲಿಂದ ಬರುತ್ತಿದೆ?"

ನನ್ನ ಸಹನೆ ಜಾರುತ್ತಿತ್ತು. "ಆರ್.ಎಸ್.ಎಸ್" ಮತ್ತು ಬಿಜೆಪಿಗಳೂ, 'ಬಜರಂಗ ದಳ,' 'ಶ್ರೀರಾಮ ಸೇನೆ' 'ಹಿಂದೂ ಜಾಗರಣ ವೇದಿಕೆ' ಎಂದು ಬೇರೆಬೇರೆ ಹೆಸರುಗಳಲ್ಲಿ ಸಂಘಟನೆ ಮಾಡಿಕೊಂಡಿವೆಯಲ್ಲ? ಹಾಗೆಯೇ ಇವರೂ ಕೂಡಾ ಸಂಘಟನೆ ಮಾಡಿಕೊಂಡಿದ್ದಾರೆ. ಇವರನ್ನು ನೋಡಿ ಅವರು, ಅವರನ್ನು ನೋಡಿ ಇವರು ಸಂಘಟನೆ ಮಾಡಿಕೊಂಡಿದ್ದಾರೆ" ಎಂದೆ. ಅವರಿಗೆ ಹಣ ಎಲ್ಲಿಂದ ಬರುತ್ತಿದೆ ಎಂದು ಈ ಪತ್ರಕರ್ತ ನನ್ನೊಡನೆ ಕೇಳುವುದರ ಉದ್ದೇಶವೇನು? "ಹವಾಲಾ ಹಣ ಬರುತ್ತಿದೆಯೇ?" ಎಂದೂ ಕೇಳಿದ! "ಹವಾಲಾ ವಿಷಯ ನನಗೆ ತಿಳಿಯದು.




ನಮ್ಮ ದೇಶದಲ್ಲಿ ಈಗ ಬೇಕಾದಷ್ಟು ಹಣ ಹರಿದಾಡುತ್ತಿದೆ. ಕಳ್ಳನೋಟುಗಳೂ ಹರಿದಾಡುತ್ತಿವೆ. ಕೋಟಿಗಟ್ಟಲೆ ಹಣವನ್ನು ನ್ಯಾಯಾಧೀಶರಿಗೆ ಲಂಚ ನೀಡಿ ಜಾಮೀನು ಪಡೆಯುವವರು ನಮ್ಮ ದೇಶದಲ್ಲಿದ್ದಾರೆ" ಎಂದು ನಾನಂದೆ. ಇವರ ಹಿಂದೆ ಯಾರಿದ್ದಾರೆ ಎಂದು ಕೇಳಿದ್ದಕ್ಕೆ ನಾನು ಹೆಚ್ಚು ಯೋಚಿಸದೆ ಜಮಾಅತೆ ಇಸ್ಲಾಮಿಯಾಗಿರಬಹುದು ಎಂದಿದ್ದೆ. ಅವನ ಇಂಗ್ಲಿಷ್ ಮತ್ತು ತಮಿಳು ಮಿಶ್ರಿತ ಪ್ರಶ್ನೆಗಳು; ನನ್ನ ಕನ್ನಡ ಉತ್ತರಗಳು. ಈ ಪ್ರಶ್ನೋತ್ತರ ನನ್ನ ನೆಮ್ಮದಿಯನ್ನು ಹಾಳು ಮಾಡಿತು.

ಈ ಜನರು ನನ್ನನ್ನು ಅರ್ಥಮಾಡಿಕೊಂಡದ್ದು ಇಷ್ಟೆಯೇ? ನಮ್ಮ ಸಂವಿಧಾನಕ್ಕನುಸಾರವಾಗಿ, ನಿಯಮಗಳ ಉಲ್ಲಂಘನೆ ಮಾಡದೆ ಎಲ್ಲರೂ ನಡೆದುಕೊಳ್ಳಬೇಕು ಎಂಬುದು ನನ್ನ ನಿಲುವು. ನಮ್ಮ ಪ್ರವಾದಿಗಳೂ ಇದನ್ನೇ ಹೇಳಿದ್ದಾರೆ. "ನೀವು ಯಾವ ದೇಶದಲ್ಲಿ ಬದುಕುತ್ತಿದ್ದೀರೊ ಆ ದೇಶದ ಸಾಮಾಜಿಕ ನಿಯಮಗಳಿಗನುಸಾರವಾಗಿ (ಧಾರ್ಮಿಕ ನಿಯಮಗಳನ್ನು ಹೊರತುಪಡಿಸಿ) ಬದುಕಬೇಕು" ಎಂದು ಬೋಧಿಸಿದ್ದರು. ಆದರೆ ನಮ್ಮ ಈ ಯುವಜನರು ಯಾರದೊ ಮಾತು ಕೇಳಿಕೊಂಡು ಹಿಂಸಾಮಾರ್ಗದಲ್ಲಿ ನಡೆಯುತ್ತಿದ್ದಾರಲ್ಲ? ಅವರನ್ನು ಸಮನಾದ ಹಾದಿಗೆ ತಿರುಗಿಸುವುದು ಹೇಗೆ? ಅವರಿಗೆ ಮಾರ್ಗದರ್ಶನ ನೀಡುವುದು ಹೇಗೆ ಎಂಬುದು ನನ್ನ ಚಿಂತನೆ. ಅವರು ಸಂಘಟನೆ ಮಾಡುವುದೇಕೆ, ಅವರಿಗೆ ಹಣ ಎಲ್ಲಿಂದ ಬರುತ್ತಿದೆ ಎಂಬ ಅಸಂಬದ್ಧ ಪ್ರಶ್ನೆಗಳನ್ನು ನನ್ನೊಡನೆ ಕೇಳುವ ಅಗತ್ಯವಿದೆಯೇ?

ಇಂದಿನ ಯುವಜನರಿಗೆ ನಮ್ಮ ಸಂವಿಧಾನದ ಕುರಿತು ಸಮನಾದ ತಿಳಿವಳಿಕೆಯೇ ಇಲ್ಲವೆನ್ನಿಸುತ್ತಿದೆ. ನಮ್ಮ ಸಂವಿಧಾನದಲ್ಲಿ ಸರ್ವರೂ ಸಮಾನರು. 21 ವರ್ಷ ದಾಟಿದ ಗಂಡು 18 ವರ್ಷ ದಾಟಿದ ಹೆಣ್ಣು ಇತರರ ಅನುಮತಿಗೆ ಕಾಯದೆ ತಮಗೆ ಇಷ್ಟ ಬಂದವರನ್ನು ಜಾತಿ, ಧರ್ಮಗಳ ಗೊಡವೆ ಇಲ್ಲದೆ ವಿವಾಹವಾಗಬಹುದು. ನಮಗಿಷ್ಟ ಬಂದ ಧರ್ಮವನ್ನು ಅನುಸರಿಸಬಹುದು. ದೇಶದ ಸಂವಿಧಾನದ ಪ್ರಕಾರ ಮತಾಂತರವೆಂಬುದು ಸಮಸ್ಯೆಯೇ ಅಲ್ಲ. ಇನ್ನೊಬ್ಬರಿಗೆ ನೋವುಂಟುಮಾಡದೆ, ಇನ್ನೊಬ್ಬರಿಗೆ ತೊಂದರೆ ಕೊಡದೆ ನಮಗೆ ಸಂವಿಧಾನ ನೀಡಿದ ಹಕ್ಕುಗಳನ್ನನುಸರಿಸಿಕೊಂಡು ನಾವು ಬದುಕಬಹುದು. ರಾತ್ರಿಯಲ್ಲಿ ಹೆಣ್ಣು ಮಗಳೊಬ್ಬಳು ಪಬ್‌ನಲ್ಲಿ ಕೆಲಸ ಮಾಡಬಹುದೆಂದು ನ್ಯಾಯಾಧೀಶರು ತೀರ್ಪು ನೀಡಿದರೆ ಅದು ಸಂವಿಧಾನಬದ್ಧವಾಗಿದೆಯೆಂದೇ ಅರ್ಥ. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಹೈಸ್ಕೂಲಿನ ಮೂರು ವರ್ಷಗಳ ಪಠ್ಯಪುಸ್ತಕಗಳಲ್ಲಿ ನಮ್ಮ ಸಂವಿಧಾನದ ಕುರಿತು ಸಮನಾದ ತಿಳಿವಳಿಕೆ ನೀಡುವಂತಹ ಪಾಠಗಳನ್ನು ಅಳವಡಿಸಿಕೊಳ್ಳಬೇಕು ಮತ್ತು ಈ ಹದಿಹರೆಯದವರಿಗೆ ಸಂವಿಧಾನದ ನೀತಿನಿಯಮಗಳನ್ನು ಅರೆದು ಕುಡಿಸಬೇಕು! ನಿಯಮಗಳನ್ನು ಉಲ್ಲಂಘಿಸಿದರೆ ಎಂತಹ ಶಿಕ್ಷೆ ದೊರೆಯುತ್ತದೆ ಎಂಬುದನ್ನೂ ತಿಳಿಸಬೇಕು.

ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇಯ ಆಕ್ರಮಣದಲ್ಲಿ ಹುಡುಗನೊಬ್ಬನ ತಾಯಿ ಅನೈತಿಕ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ ಎಂದೂ ಮಹಿಳಾ ಆಯೋಗದ ಅಧ್ಯಕ್ಷೆಯೇ ಆರೋಪ ಮಾಡಿದರು. ಹೀಗೆನ್ನಲು ಬೇರೆಯೇ ಕಾರಣವಿದೆಯೆಂದು ಇತ್ತೀಚೆಗೆ ತಿಳಿಯಿತು. ಆ ಮಹಿಳೆ ಮಸಾಜ್ ಕೇಂದ್ರ ನಡೆಸುತ್ತಿದ್ದರು. ಅದಕ್ಕೆ ಪೊಲೀಸರು ಹಫ್ತಾ ಕೇಳಿದರಂತೆ. ಆಕೆ ಅದಕ್ಕೆ ಬಗ್ಗಲಿಲ್ಲ; ಹೀಗಾಗಿ ಇಡೀ ಪ್ರಕರಣದ ಹಿಂದೆ ಪೊಲೀಸರೂ ಇದ್ದು ಗೂಂಡಾಗಳು ಆಕೆಯ ಮಗನನ್ನೇ ಅಟ್ಟಾಡಿಸಿ ಹೊಡೆದಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಸಂವಿಧಾನದ ಕುರಿತು ಹೇಳಬೇಕಾದರೆ ಇನ್ನೂ ಒಂದು ವಿಷಯವಿದೆ. ಸಿನಿಮಾ ನಟ ಅಮೀರ್ ಖಾನ್‌ನ 'ಸತ್ಯಮೇವ ಜಯತೇ' ಕಾರ್ಯಕ್ರಮವನ್ನು ಹೆಚ್ಚಿನವರೂ ನೋಡಿರಬಹುದು. ಈ ಕಾರ್ಯಕ್ರಮದ ಒಂದು ಎಪಿಸೋಡ್ ದಲಿತರ ಕುರಿತಾಗಿತ್ತು. ದಲಿತ ಹೆಣ್ಣು ಮಗಳೋರ್ವಳು ಐದನೇ ತರಗತಿಯ ಬಳಿಕ ಆರನೇ ತರಗತಿಗೆ ಬೇರೆ ಶಾಲೆ ಸೇರಿದಾಗ ಅಲ್ಲಿ ಆಕೆ ಹಿಂದಿಗೆ ಬದಲಾಗಿ ಸಂಸ್ಕೃತ ತೆಗೆದುಕೊಳ್ಳುವೆನೆಂದಳು. ಅದಕ್ಕೆ ಆ ಅಧ್ಯಾಪಕಿ "ನೀವು ಸಂಸ್ಕೃತ ತೆಗೆದುಕೊಂಡು ಏನು ಮಾಡುತ್ತೀ? ನೀನು ಹಿಂದಿಯನ್ನೇ ತೆಗೆದುಕೊ" ಎಂದು ಒತ್ತಾಯಿಸಿದರು. ಆದರೆ ಆ ಹುಡುಗಿ ಸಂಸ್ಕೃತವನ್ನೇ ತೆಗೆದುಕೊಂಡು ಸಮನಾಗಿ ಅಧ್ಯಯನ ಮಾಡಿದಳು. ಸಂಸ್ಕೃತ ಕಲಿತು ಮನುಧರ್ಮ ಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿಕೊಂಡಳು. ದಲಿತರನ್ನು ಯಾವ ರೀತಿ ಊರಿನಿಂದ ಹೊರಗಿಡಬೇಕು; ಅವರೊಡನೆ ಎಂತಹ ನಡವಳಿಕೆ ತೋರಿಸಬೇಕು ಎಂಬುದನ್ನು ಚೆನ್ನಾಗಿ ತಿಳಿದುಕೊಂಡಳು. ಅವಳ ಒಂದು ಅನುಭವವನ್ನು ಈ ರೀತಿ ವಿವರಿಸುತ್ತಾಳೆ. "ದಲಿತರು ಸಮೀಪ ಬರುವಾಗ ವಾಸನೆ ಬರುವಂತಿರಬೇಕು. ಅದಕ್ಕಾಗಿ ಅವರಿಗೆ ಮೊಸರು, ಮಜ್ಜಿಗೆ ಅಥವಾ ಸಾರು ನೀಡುವಾಗ ಅವರ ಪಾತ್ರೆಗೆ ತುಂಬಾ ಮೇಲ್ಭಾಗದಿಂದ ಹಾಕಬೇಕು. ಅದರಿಂದ ಅವರ ಮೈಮೇಲೆ ಈ ದ್ರವ ಪದಾರ್ಥಗಳು ಹಾರುತ್ತವೆ



ಮತ್ತು ಅವರ ಬಟ್ಟೆಯ ಮೇಲೆ ನೆ… ಕುಳಿತುಕೊಳ್ಳುತ್ತವೆ ಹಾಗೂ ಅವರು ಸಮೀಪ … ವಾಸನೆ ಬರುತ್ತದೆ!"

ಹೀಗೆ ದಲಿತರನ್ನು ಊರಹೊರ… ಅಸ್ಪೃಶ್ಯತೆಯನ್ನಾಚರಿಸುವ ಕುರಿತು ಅಮೀರ್… ವಾರಣಾಸಿಯ ಪೂಜಾರಿಯೊಡನೆ ಕೇಳಿದರು… ಸಂವಿಧಾನ ಎಲ್ಲರಿಗೂ ಸಮಾನತೆ ನೀಡುತ್ತದೆ. … ಈ ರೀತಿ ಮನುಷ್ಯರ ನಡುವೆ ತಾರತಮ… ಅನುಸರಿಸಬಾರದೆಂದು ತಾಕೀತು ಮಾಡಿದೆಯಲ… ಹೀಗೆ ದಲಿತರನ್ನು ದೂರವಿಡುವುದು ಸಂ… ವಿರೋಧವಾದುದೆಂದಾಗುವುದಿಲ್ಲವೇ?" ಎಂ… ಪೂಜಾರಿ, "ನಾವು ಸಂವಿಧಾನಕ್ಕನುಗ… ನಡೆಯುವುದಿಲ್ಲ, ನಾವು ನಮ್ಮ ಧರ್ಮಗ್ರಂಥಕ್ಕನು… ಧರ್ಮಗ್ರಂಥದಲ್ಲಿ ಹೇಳಿದಂತೆ ನಡೆಯುತ್ತೇವೆ. … ಸಂವಿಧಾನ ನಮಗೆ ಅನ್ವಯವಾಗದು!" ಎಂದ…

ಅಮೀರ್ ಖಾನ್, ದಲಿತರ ಕುರಿತ ಕಾರ್ಯ… ದಲಿತರು ಮಲದ ಗುಂಡಿಗಿಳಿದು ಅದನ್ನು ಕ್ಲೀನ್ … ಕುರಿತೂ ವಿವರಿಸಿದರು. ಕೋಲಾರದ ಒಂದೆಡೆಯ… ಗುಂಡಿಯಿಂದ ಬಕೆಟಿನಲ್ಲಿ ಮಲವನ್ನು ಎತ್ತಿ … ತುಂಬಿಸುತ್ತಿದ್ದುದನ್ನೂ ಹಾಗೆ ಎತ್ತುವಾಗ ಆತನ … ಬಕೆಟ್ ಜಾರಿ ಆ ಗುಂಡಿಯೊಳಗೆ ಬಿದ್ದದ್ದನ್ನೂ ವಿ… ಅಮೀರ್ ಖಾನ್ ತಂಡ ಇದನ್ನು ನೋಡುತ್ತಿದ್ದಂ… ಆ ಗುಂಡಿಗಿಳಿದು ಬಕೆಟ್‌ಗಾಗಿ ಜಾಲಾಡತೊ… ಇದನ್ನು ನೋಡಿಕೊಂಡು ಸಹಿಸಲಾಗದ ಈ ತಂಡ… ಮೇಲೆ ಬರಲು ಒತ್ತಾಯಿಸತೊಡಗಿದರು. ಆದ… ದೊರೆಯುವವರೆಗೆ ಆತನು ಅದರಿಂದ ಹೊರಗೆ … ಬಕೆಟ್‌ನ ಹಣವನ್ನು ತನ್ನ ಸಂಬ… ಮುರಿದುಕೊಳ್ಳುವರೆಂಬ ಭಯವಲ್ಲದೆ ಕೆಲಸ ಕಳೆದು… ಭಯವೂ ಆತನನ್ನು ಕಾಡುತ್ತಿದ್ದುದೇ ಈ ಹು… ಕಾರಣವಾಗಿತ್ತು!

ನಾವು ಎಂತಹ ಕ್ರೂರ ಸಮಾಜದಲ್ಲಿ … ಮನುಷ್ಯರ ನಡುವೆ ಬದುಕುತ್ತಿದ್ದೇವೆ? ನಮ್ಮ ಸ… ಕರನ್ನು ಪ್ರಾಣಿಗಳಿಗಿಂತ ಹೀನವಾಗಿ ನೋಡಿಕೊ… ಈ ದೇಶದ ಸಂವಿಧಾನಕ್ಕೆ ನಾವು ಬದ್ಧರಲ್ಲ ಎ… ಮತ್ತು ಇಂತಹ ಸಂಸ್ಕೃತಿಯ ಹೆಸರಿನಲ್ಲಿ ಹೆ… ಮತ್ತು ಮಹಿಳೆಯರ ಮೇಲೆ ಆಕ್ರಮಣ … ದಮನಿಸುವುದು; ಇಂತಹ ಸ್ವಾತಂತ್ರ್ಯಕ್ಕಾಗಿ ನಮ್ಮ … ಜನ ಹಿರಿಯರೂ ಕಿರಿಯರೂ ಹೋರಾಡಿ… ಕಳೆದುಕೊಂಡರೇ? ಬ್ರಿಟಿಷರು ಈ ದೇಶಕ್ಕೆ ಕಾಲಿ… ಇಂದು ದಲಿತರು ಮಾತ್ರವಲ್ಲ ಹಿಂದುಳಿ… ಅಲ್ಪಸಂಖ್ಯಾತರೆಲ್ಲರೂ ಕೂಡಾ ಇ… ಬದುಕಬೇಕಾಗಿ ತ್ತಲ್ಲವೇ? ಬ್ರಿ… ಇಲ್ಲಿಂದ ಓಡಿಸಿ ನಾವು ಪಡೆದ … ಎಂತಹುದು ಎಂಬುದನ್ನು ಮತ್ತೊಮ್ಮೆ ಯೋಚಿಸುವುದೊ…



● ಸಾರಾ ಅಬೂಬ…


ಬೀದಿ ನಾಯಿಗಳು

● ಆರೀಫ್ ರಾಜಾ

ಬೀದಿನಾಯಿಗಳನು ಕಂಡರೆ
ಭಯವಾಗುತ್ತದೆ
ಏನೂ ಮಾಡುವುದಿಲ್ಲವಾದರೂ ಅವು
ಬೊಗಳುವ ಬೀದಿನಾಯಿಗಳು

ನಿರ್ಲಜ್ಜ ಕೇಳಿಯಲಿ ಕಜ್ಜಿನಾಯಿ
ಸಾರ್ವಜನಿಕವಾಗಿ ತೊಡಗುವುದು ನೋಡಿ
ನಾಚಿಕೆಯಾಗುತ್ತದೆ
ಒಳಗೊಳಗೇ ಕದ್ದು ನೋಡಬೇಕೆನಿಸುತ್ತದೆ

ನಗರದ ಕಳ್ಳಹೆಜ್ಜೆ ಸದ್ದಿಗೆ
ತಮ್ಮ ನಿರಾತಂಕ ಕನಸು ಭಂಗವಾಯಿತೋ
ಅನ್ನೊ ಹಾಗೆ ಬೀದಿನಾಯಿಗಳು




ಜೋರಾಗಿ ಗೋಳಿಡಲಾರಂಭಿಸುತ್ತವೆ ಕೆಲವೊ…
ತುಂಬುಗನಸು ಕಾಣುವುದಿಲ್ಲವಾದರೂ ಅವು ಎಂ…

ಮಹಾನ್ ನಾಯಕರ ಪ್ರತಿಮೆಗಳಿಗೆ
ಕಾಲೆತ್ತಿ ಉಚ್ಚೆ ಉಯ್ಯುವ
ಬೀದಿನಾಯಿಗಳನ್ನು ಕಂಡರೆ ಹೊಟ್ಟೆಕಿಚ್ಚು ನನ…
ಮುನ್ಸಿಪಾಲ್ಟಿಯವರು ಮಾಂಸದ ರುಚಿ ತೋ…
ವಿಷವಿಟ್ಟುಕೊಲ್ಲುತ್ತಾರೆ, ಭಲೆ ಅಲರ್ಜಿ ಅವರಿ…

ಕಾರಲ್ಲಿ ತಿರುಗುವ ನಾಯಿಗಳಿಗೆ
ಸುತಾರಾಂ ಇಷ್ಟವಿಲ್ಲ
ಮೈಮೇಲೆ ಬೀಳುವಾಗಲೂ ಚಿತ್ತೆಕಾರ್ತಿಯಕ…
ಸ್ವರ್ಗದ ಕನಸು ಕಾಣುವ ಬೀದಿನಾಯಿಗಳೆಂದ…

…ಮಣ್ಣನವರ ಸರಕು ಖಾಲಿಯಾಗಿಲ್ಲ



ತ ವಾರ ಶಿವಮೊಗ್ಗೆಯ ಕುವೆಂಪು ರಂಗಮಂದಿರದ …ಕ್ಕ ಶಾಮಣ್ಣನವರು ತುಂಬಾ ಮಾತಿನ ಮೂಡಿನಲ್ಲಿ …ಾಗಾಗಿ ಬೆಳಗ್ಗೆ ಹತ್ತರಿಂದ ಸಂಜೆ ಆರು …ವರೆಗೂ ಮಾತನಾಡಿದರು. ಒಂದೊಂದು ಬಾರಿ …ಮೂಡಿದರೂ ಬಾಯನ್ನೇ ಬಿಡದೆ ಬರಿ ತುಟಿ …ಸುಮ್ಮನಾಗುತ್ತಾರೆ. ಆದರೆ ಅವತ್ತು ನಿರಂತರವಾಗಿ …ಡುತ್ತಿದ್ದರು. ಕುವೆಂಪು ರಂಗಮಂದಿರದ ಎದುರು …ರುವ ಕುವೆಂಪು ಪ್ರತಿಮೆ ಅನಾವರಣಕ್ಕೆ ಸರ್ಕಾರ …ಲಕ್ಷ ರೂ. ಖರ್ಚಿಟ್ಟು, ಅದರ ಚರ್ಚೆಗಾಗಿ …ನವರನ್ನು ಕರೆಸಿತ್ತು.

…ಮಣ್ಣನವರು "ಪರದೆಯಿಂದ ಮುಚ್ಚಲ್ಪಟ್ಟಿರುವ … ಪ್ರತಿಮೆ ಅನಾವರಣಕ್ಕೆ ನಾಲ್ಕು ಲಕ್ಷ ಖರ್ಚು …ವುದು ಸರಿಯಲ್ಲ. ಪರದೆ ಸರಿಸಿದರೆ ಅದೇ …ರಣವಾಗುತ್ತೆ. ನಾಲ್ಕು ಲಕ್ಷವನ್ನು ಸರ್ಕಾರದ … ವಾಪಸು ಕಳುಹಿಸಿ" ಎಂದು ಎದ್ದು ಹೋಗಿದ್ದರು. …ನಾಲ್ಕು ಲಕ್ಷ ಖರ್ಚು ಮಾಡಲು ತಯಾರಿ ನಡೆಸಿ … ಸಹಿಸಲಾರದ ಮಾತಾಗಿತ್ತು. ಕುವೆಂಪು ಬದುಕು …ಬರಹದ ಸಮೀಪ ಸುಳಿಯದವರಿಂದ ಪ್ರತಿಮೆ …ಣಗೊಳ್ಳುವುದು ಶಾಮಣ್ಣನವರಿಗೆ ಬೇಕಿರಲಿಲ್ಲ. … ಅನಿವಾರ್ಯವಾಗಿ ಆ ಕಾರ್ಯ ನಡೆದೇಹೋಯ್ತು. …ಮಣ್ಣ ಈ ಕಡೆ ಸುಳಿಯಲಾರರೆಂದು ಭಾವಿಸಿದ್ದವರಿಗೆ …ಗುವಂತೆ ಕ್ಯಾಮರಾ ರೆಡಿಮಾಡಿಕೊಂಡು ಪ್ರತ್ಯಕ್ಷ …ಟ್ಟರು. ಅಷ್ಟರಲ್ಲಾಗಲೇ ಪ್ರತಿಮೆ ಅನಾವರಣ …ದವರು ಜಾಗ ಖಾಲಿ ಮಾಡಿದ್ದರು. ಇನ್ನುಳಿದದ್ದು … ಗಾಯನ ಮತ್ತು ರೂಪಕನೃತ್ಯ, ಭೋಜನ, ಕಾಫಿ, …ಷ್ಟೆ. "ಕುವೆಂಪು ಕಾರಣವಾಗಿ ನಡೆಯುವ ಈ …ವನ್ನು ನಿರಾಕರಿಸುವುದು ಸರಿಯಲ್ಲ ಶಾಮಣ್ಣ. … ಹೊಸ ತಲೆಮಾರಿನ ಮಕ್ಕಳು ಎಷ್ಟು ಖುಷಿಯಿಂದ …ತ್ತಿದ್ದಾರೆ" ಎಂದೆ. ಶಾಮಣ್ಣ ನಗುತ್ತಲೇ ಮಕ್ಕಳ …ೋ ತೆಗೆಯುತ್ತಿದ್ದರು.

…ಮಣ್ಣನವರ ಬದುಕಿನಲ್ಲಿ ಒಂದೆರಡು ವಿರೋಧಾಭಾಸ …ಘಟಿಸಿವೆ. ಕಡಿದಾಳು ಮಂಜಪ್ಪನವರ ಮನೆಯಲ್ಲಿ … ನಿಶ್ಚಿತಾರ್ಥವೊಂದು ಸಾಂಪ್ರದಾಯಿಕವಾಗಿ …ತ್ತಿದೆ ಎಂದು ತೇಜಸ್ವಿ, ರಾಮದಾಸ್, ಸುಂದರೇಶ್ ಜೊತೆ ಸೇರಿಕೊಂಡು ಛತ್ರಿಯನ್ನೇ ಹರಿದು ಕಪ್ಪುಬಾವುಟ ಮಾಡಿಕೊಂಡು ಪ್ರತಿಭಟಿಸಿದ್ದರು. ಆದರೆ ಮಂಜಪ್ಪನವರ ಮನೆಯ ಸಜ್ಜನರೊಬ್ಬರು ಶಾಮಣ್ಣನವರನ್ನು ಎಳೆದುಕೊಂಡು ಹೋಗಿ ಊಟ ಮಾಡಿಸಿ ಕಳಿಸಿದ್ದರು. ಇದು ತೇಜಸ್ವಿಗೆ ಗೊತ್ತಾಗಿ "ಅಲ್ರೀ ಶಾಮಣ್ಣ, ಇಲ್ಲಿ ಪ್ರತಿಭಟನೆ ಮಾಡ್ತಿರಿ, ಅಲ್ಲಿಗೋಗಿ ಊಟ ಮಾಡ್ತಿರಿ. ನಿಮ್ಮ ಸವಾಸ ಒಳ್ಳೆದಲ್ಲ" ಎಂದಿದ್ದರು.

ಸರಳ ಮದುವೆ ಹರಿಕಾರರಾದ ಶಾಮಣ್ಣ ಒಮ್ಮೆ ಶ್ರೀಮಂತ ಮದುವೆಯೊಂದರ ಫೋಟೋ ತೆಗೆದು ಸಿಕ್ಕಿಬಿದ್ದಿದ್ದರು. ಆದರೆ ಪ್ರತಿಭಟನಾಕಾರರಿಗೆ ತಾವು ತೆಗೆದ ವಿಶಿಷ್ಟ ಫೋಟೋಗಳನ್ನು ತೋರಿಸಿ "ನಿಮ್ಮ ಪ್ರತಿಭಟನೆ ಸರಿ. ಆದರೆ ಈ ಫೋಟೋ ನೋಡಿ ಏನು ಮಜವಾಗಿವೆ" ಎಂದು ನಕ್ಕಿದ್ದರು. ಈಗಲೂ ಅಷ್ಟೆ ಕುವೆಂಪು ರಂಗ ಮಂದಿರದ ಆವರಣದಲ್ಲಿ ವಿಶಿಷ್ಟ ಫೋಟೋಗಳಿಗಾಗಿ ಕ್ಯಾಮರಾ ಕಣ್ಣಲ್ಲಿ ಕಾಯುತ್ತಿದ್ದರು. ಆಗ ನಾನು "ಶಾಮಣ್ಣಾರೆ, ಚಿತ್ರದುರ್ಗದಿಂದ ಒಬ್ಬರ ರೈತರು ಫೋನ್ ಮಾಡಿದ್ದರು. ರೈತಸಂಘ ಸೇರಿ ಚಳವಳಿ ಮಾಡುತ್ತಾ ಶಾಮಣ್ಣ ಅಡಕೆ ತೋಟ ಹಾಳು ಮಾಡಿಕೊಂಡರಂತೆ. ಮಕ್ಕಳಿಗೆ ಒಳ್ಳೆ ಶಿಕ್ಷಣ ಕೊಡಿಸಲಾಗಲಿಲ್ಲವಂತೆ. ಆದರೆ ಈಗ ರೈತ ಸಂಘದ ಲೀಡರೊಬ್ಬ ಬೆಂಗಳೂರಲ್ಲಿದ್ದುಕೊಂಡು, ಲಕ್ಷಾಂತರ ಬೆಲೆಯ ಕಾರಿನಲ್ಲಿ ಓಡಾಡುತ್ತ, ರೆಡ್ಡಿಗಳ ಬಳಿಗೋಗಿ ಸಂಘದ ಮರ್ಯಾದೆಯನ್ನೆ ಹಾಳು ಮಾಡಿದ್ದಾನೆ. ಅಂತಹವನ ಜೊತೆ ಶಾಮಣ್ಣ ಇರಬಾರದು ಅಂತ ಹೇಳಿದರು" ಎಂದೆ.

ಶಾಮಣ್ಣ ತುಸು ಯೋಚಿಸಿ "ನೋಡಿ, ಕೋಡಳ್ಳಿ ಚಂದ್ರಶೇಖರ್ ರೆಡ್ಡಿ ಭೇಟಿಯಾಗಿರೋದು ನಿಜ. ಈ ಭೇಟಿ ಮಾಡಿಸಿರೋರು ದ್ವಾರಕನಾಥ್ ಅನ್ನೋರು. ಮುಂದಿನ ಚುನಾವಣೇಲಿ ನಲವತ್ತು ಸ್ಥಾನಗಳನ್ನು ರೈತಸಂಘಕ್ಕೆ ಬಿಟ್ಟುಕೊಡೋದು ಅಲ್ಲದೆ, ಒಂದೊಂದು ಕ್ಷೇತ್ರಕ್ಕೂ ಒಂದು ಕೋಟಿ ರೂಪಾಯಿ ಕೊಡೋದು, ಗೆಲ್ಲೋ ಅಂತ ಅಭ್ಯರ್ಥಿಗಳಿಗೆ ಮತ್ತೂ ಹಣ ಕೊಡೋ ಆಶ್ವಾಸನೆ ರೆಡ್ಡಿ ಕಡೆಯಿಂದ ಸಿಕ್ಕಿದೆ. ಆದರೆ ನಾವು ಈ ಭ್ರಷ್ಟ ಸಂಬಂಧನ ಸಾರಾಸಗಟು ತಿರಸ್ಕರಿಸಿ ಅಂಥ ರೆಡ್ಡಿ ಭೇಟಿ ಮಾಡಿದ ಬಗ್ಗೆ ಚಂದ್ರಶೇಖರನ್ನ ತರಾಟೆಗೆ ತಗೊಂಡಾಗ, ಆತ ಅತ್ತೂ ಕರದು, ನನ್ನದು ತಪ್ಪಾಗಿದೆ ಅಂತ ಹೇಳಿ ರಾಜೀನಾಮೆ ಕೊಟ್ರು. ಆಗ ನಾನು ನಿಮಗೆ ಪಶ್ಚಾತ್ತಾಪ ಆಗಿರೋದ್ರಿಂದ ಸದ್ಯಕ್ಕೆ ರಾಜೀನಾಮೆ ಬೇಡಿ. ಮುಂದೆ ರೈತ ಸಂಘದ ಚುನಾವಣೆ ಗಳಲ್ಲಿ ನಮ್ಮ ಲೀಡರುಗಳನ್ನು ಆರಿಸಿಕೊಳ್ಳೋಣ. ಒಂದು ವರ್ಷ ನೀವೇ ಇರಿ ಅಂತ ಸಮಾಧಾನ ಮಾಡಿಬಂದೆ" ಎಂದರು.

"ಅಲ್ಲ ಶಾಮಣ್ಣ ನೀವಾಗ್ಲಿ, ನಿಮ್ಮಂಥೋರು ಯಾರೇ ಆಗ್ಲಿ, ರೆಡ್ಡಿ ಭೇಟಿನ ಕನಸಲ್ಲೂ ಮಾಡಲ್ಲ, ಅಂತದ್ರಲ್ಲಿ ದ್ವಾರಕನಾಥ್ ಕರದ ಕೂಡ್ಲೆ ಹೋಗಿದಾನೆ ಈ ಚಂದ್ರಶೇಖರ ಅಂದ್ರೆ, ಈತನ ಮನಸ್ಸಿನ ಲೆಕ್ಕಾಚಾರದಲ್ಲಿ ದೋಷ ಇಲ್ವೆ?" ಎಂದೆ. "ಅದಕ್ಕೆ ಪಶ್ಚಾತ್ತಾಪ ಆಗಿದೆಯಲ್ಲಾ, ದ್ವಾರಕನಾಥ್ ನನ್ನತ್ರ ರಾಮುಲು ಬಗ್ಗೆ ಹೇಳಕ್ಕೆ ಬಂದ್ರು. ಆತ ಹಿಂದುಳಿದ ವರ್ಗದ ಒಳ್ಳೆ ನಾಯಕ, ಮೇಲ್ಜಾತಿಗಳಿಂದ ಅವಮಾನಕ್ಕೆ ಒಳಗಾದೋನು, ರೆಡ್ಡಿಗಳಿಂದ ಅಸಮಾನತೆಗೊಳಪಟ್ಟೋನು... ಹಿಂಗೆ ಏನೇನೊ ವಕಾಲತ್ತು ಮಾಡಿದ್ರು. ಆ ಹಿಂದುಳಿದ ವರ್ಗದ ನಾಯಕನ ಮೂಲ ಗಣಿ ಆಳಕ್ಕೆ ತಲುಪುತ್ತಲ್ರೀ. ಲಂಕೇಶ್ ಜೊತೆ ಇದ್ದ ನೀವು ಅದ್ಹೇಗೆ ಇಂತ ಮನುಷ್ಯನ ಹಿಂಬಾಲಕರಾಗಿ ಕೆಲಸ ಮಾಡ್ತಾಯಿದ್ದಿರಿ ಅಂದೆ. ದ್ವಾರಕನಾಥ್‌ಗೆ ನನ್ನ ಯಾವ ಮಾತೂ ತಲುಪಿದಂಗೆ ಕಾಣಲಿಲ್ಲ, ಅದಕ್ಕೆ ನಾನೇನಂದೆ ಅಂದ್ರೇ, 'ರೀ ದ್ವಾರಕನಾಥ್, ನೀವು ಇನ್ನು ಮೇಲೆ ನಮ್ಮನ್ನ ಮಾತಾಡಿಸಬೇಡಿ. ಅಷ್ಟೆ ಅಲ್ಲ, ನಮ್ಮ ಸಭೆ ನಡಿಯೋ ಜಾಗಕ್ಕೆ ನೀವು ಬರಕೂಡದು" ಅಂದೆ. ಇದಕಿಂತ್ಲೂ ಕಟುವಾಗಿ ಹೇಳಕ್ಕೆ ನನ್ನಿಂದ ಸಾಧ್ಯವಿಲ್ಲ" ಎಂದ ಶಾಮಣ್ಣ, ದುರುಗುಟ್ಟಿ ನೋಡಿ "ನೀವೊಂದು ಕೆಲಸ ಮಾಡಬೇಕಲ್ಲಾ?" ಎಂದರು. "ಅದೇನು ಹೇಳಿ" ಎಂದೆ. "ನಾನು ದ್ವಾರಕನಾಥ್‌ಗೆ ಹೇಳಿದ ಮಾತನ್ನು ನೀವು ಗೌರಿ ಪತ್ರಿಕೆಗೆ ಬರೆದು ಕಳಿಸಿ" ಎಂದರು.

"ಆಯ್ತು ಶಾಮಣ್ಣ" ಎಂದು ನಾನು ಹೊರಟಾಗ ಈ ಕ್ಷುದ್ರ ಸಂಗತಿಯ ಬದಲು, ಶಾಮಣ್ಣ ಬೇಂದ್ರೆಯವರನ್ನು ಭೇಟಿ ಮಾಡಿದ್ದು, ಕೂಳಿ ಹಾಕಿ ಮೀನು ಹಿಡಿದದ್ದು, ಅದರಲ್ಲಿದ್ದ ಕೇರೆ ಹಾವನ್ನು ತೆಗೆದು ಅದರ ಹೊಟ್ಟೆಯಲ್ಲಿದ್ದ ಮೀನು ತೆಗೆದುಕೊಂಡ ಸಂಗತಿಯೇ ಬೆನ್ನ ಹತ್ತಿದವು. ಅದೇ ಒಂದು ಲೇಖನವಾಗಬಹುದು!

● ಬಿ.ಚಂದ್ರೇಗೌಡ

> ಕಾರಣಾಂತರದಿಂದ ಈ ವಾರ ಕಟ್ಟೆ ಪುರಾಣ ಪ್ರಕಟವಾಗಿಲ್ಲ. ಮುಂದಿನ ವಾರದಿಂದ ಎಂದಿನಂತೆ ಪ್ರಕಟವಾಗುವುದು...
>
> –ಸಂ

…ಂಚಿ ಮಾಯವಾದ ಕತೆಗಳು

… ದೀಪಾವಳಿಗೆ ಒಂದು ಕತೆ ಬರೆಯಬೇಕೆಂದು ಮಾಡಿಕೊಂಡು ಚಿಂತಿಸಿದೆ. ಸುಮ್ಮನೇ …ತ್ತಿದ್ದಾಗ ಮನಸ್ಸಿನಲ್ಲಿ ಕೂತು 'ಬರಿ' ಎಂದು ಅಲ್ಲಿಯವರೆಗೆ ಅಣಕಿಸುತ್ತಿದ್ದ ಎಲ್ಲ ಘಟನೆಗಳೂ …ಂಡವು. ಈ ಸಲ ಘಟನೆಗಳು ಬೇಡ, ಮನದಲ್ಲಿ ಅಕಸ್ಮಾತ್ ಮಿಂಚಿ ಜಾರಿಹೋದ …ಯಾದರೂ ಸಾಕು ಎಂದುಕೊಂಡು ಧ್ಯಾನಿಸಿದೆ. ಆದರೂ ಅಂಥ 'ಜಾರಿಕೆ' ಕೂಡ ಇದ್ದಂತಿರಲಿಲ್ಲ. …ದ್ದಕ್ಕಿದ್ದಂತೆ ಜಗದ್ಗುರುವೊಬ್ಬ ನೆನಪಾದ. ಅವನು ಎಲ್ಲ ಸಾವಾಸ ಬಿಟ್ಟು ಮಠ ಸೇರಿಕೊಂಡು …ಯಾರನ್ನೂ ನೋಡದೆ ತಿಂಗಳುಗಟ್ಟಲೇ ಸುಮ್ಮನೇ ಇದ್ದುಬಿಡುವವನು. ಅವನು, ಅಡುಗೆಯವನು, …ತಂದು ಹಂಡೆ ತುಂಬುವವನು, ಇಷ್ಟೇ ಜನ. ಆ ಜಗದ್ಗುರು ನನ್ನ ಮನಸ್ಸಿನಲ್ಲಿ ಕಾಣಿಸಿಕೊಂಡು, …ಷ್ಟು ಏನಾಯಿತು ಅಂದ್ರೆ" ಎಂದು ಹೇಳತೊಡಗಿದ. ಕೊನೆಗೂ ಒಂದು ಕತೆ ಸಿಕ್ಕಿತಲ್ಲ … ಆತನ ಮಾತು ಆಲಿಸಿದೆ. "ಎಂದೋ ನಾವು ಬಲ್ಲ ಒಂದು ಹೆಂಗಸು ಪಕ್ಕದೂರಲ್ಲಿ …ತ್ತ ಬಾಯಿಬಾಯಿ ಬಡಿದುಕೊಳ್ಳುತ್ತ ರಂಪ ಮಾಡುತ್ತಿತ್ತು; 'ನಾನು ಸತ್ತು ನಿಮಗೆ ನೆಮ್ಮದಿ …ದಿಲ್ಲ' ಎಂದು ಕೂಗ್ತಿತ್ತು. ಅವಳ ರೋದನ ಭೀಕರವಾಗಿತ್ತು. ಅವಳ ಸದ್ದಿನಿಂದಾಗಿ ಊರ …ನೇಕ ಹಗಲು, ಅನೇಕ ರಾತ್ರಿ ನಿದ್ರೆ ಮಾಡಿರಲಿಲ್ಲ. 'ಆಕೆಗೆ ಏನು ಬೇಕಂತೆ' ಅಂತ ಕೇಳಿದೆ. ಅವಳು ಏನನ್ನೂ … ಅಳುತ್ತಲೇ ಇದ್ದಳಂತೆ–ಅವಳ ಗದ್ದಲ ನಾವಿದ್ದ ಊರನ್ನೂ ತಲುಪತೊಡಗಿತ್ತು. ಆದ್ದರಿಂದ ನಾವು …ಲ್ಲಿಗೆ ಹೋದೆವು. ಅವಳು ನಮ್ಮನ್ನು ನೋಡಿ ಬೆಚ್ಚಿದಂತೆ ನಮಗೆ ಅನ್ನಿಸಿತು. ಇಷ್ಟಗಲ ಕಣ್ಣುಬಿಟ್ಟಳು. …ಲೇ ನಮ್ಮನ್ನು ಕೊಲ್ಲುವಂತೆ ಕಂಡಳು. ಆಗ ನಾವು ಅವಳ ಪಕ್ಕಕ್ಕೆ ಹೋಗಿ ಕೂತೆವು. ಅವಳು ಮೆಲ್ಲಗೆ …ತೊಡೆಗೆ ಒರಗಿದಳು. ಅವಳನ್ನು ನಮ್ಮ ಮೇಲೆ ಮಲಗಿಸಿಕೊಂಡು ಕೂತೆವು. ಅಲ್ಲಿಗೆ ಜನ ನೆರೆಯತೊಡಗಿದರು. …ರುವಾದ ನಾವು ಒಬ್ಬಳು ಹೆಂಗಸನ್ನು ತೊಡೆಯ ಮೇಲೆ ಮಲಗಿಸಿಕೊಂಡು ತೂಗುತ್ತಿದ್ದುದು ಅವರಿಗೆ …ವೂ ವಿಶೇಷವೂ ಆಗಿತ್ತು. ಆದರೆ ಜನರ ಅನ್ನಿಸಿಕೆಯಲ್ಲಿ ನಮಗೆ ಆಸಕ್ತಿ ಇರಲಿಲ್ಲ. ನಾವು ಆಕೆಯ …ವು ಮ್ಮೆಯ ಮಾಂತ್ರಿಕತೆ ಅನುಭವಿಸುತ್ತಿದ್ದಂತೆಯೇ ತಣ್ಣಗಾದಳು, ತನ್ನ ಜೀವನಯಾತ್ರೆ ಮುಗಿಸಿದಳು.





ಆಕೆಯ ಅಳು ಮತ್ತು ಸಾವು ನಮ್ಮಲ್ಲಿ ಅನೇಕ ನೆನಪುಗಳನ್ನು ಕೆದಕಿದವು. ಅವುಗಳಲ್ಲಿ ಒಂದು ನಮ್ಮಿಬ್ಬರ ಯೌವನ ಮತ್ತು ಮಿಲನ. ಅದು ಎಂದೋ ಆಗಿದ್ದು.

ಕೋಟ್ಯಂತರ ರಂಧ್ರಗಳ, ಚರ್ಮದ ಉಸಿರಾಟದ, ಜೀವಂತ ಸ್ಪಂದನದ ಈ ದೇಹಕ್ಕೆ ಸ್ಪರ್ಶ ಎಷ್ಟು ಮುಖ್ಯ ಎಂದು ನಾವು ನೋಡಿರುವುದೇ ಇಲ್ಲ ....


ಸ್ಪರ್ಶವೇ ಮಿಲನ ಕೂಡ.

ಜೀವನವೂ.

ನಾವು ಅಂದು ಮಠವನ್ನು ಬಿಟ್ಟವರು ಮತ್ತೆ ಅಲ್ಲಿ ಕಾಲಿಡಲಿಲ್ಲ, ನಮ್ಮ ಬದುಕಿನ ನಕ್ಷತ್ರಗಳನ್ನು ಹುಡುಕಿ ಹೊರಟೆವು. ಅದು ನಮ್ಮ ಪುನರ್ಜನ್ಮ."

... ಹೀಗೆ ಹೇಳಿದ ಜಗದ್ಗುರು ಕಣ್ಮರೆಯಾದ. ಆತ ಹೇಳಿದ ಕತೆ ಅದ್ಭುತವಾಗಿತ್ತು, ಅದನ್ನು ನನ್ನದನ್ನಾಗಿ ಮಾಡಿಕೊಳ್ಳದೆ ದೀಪಾವಳಿಗಾಗಿ ಕತೆ ಬರೆಯುವುದು ಕಷ್ಟವಾಗಿತ್ತು.

ಅಂಗಕ್ಕೊಬ್ಬ ರಕ್ಷಕ




ನಾನು ವಾಕ್ ಮಾಡುತ್ತಿದ್ದಾಗ ಆ ಹುಡುಗ ಒಂದೆರಡು ದಿನ ನನ್ನನ್ನು ನೋಡುತ್ತಾ ನಿಂತಿದ್ದು ಹೊರಟುಹೋಗುತ್ತಿದ್ದ. ನನಗೂ ಅನುಮಾನ ಶುರುವಾಯಿತು. ಈತ ಯಾವನಾದರೂ ರಾಜಕಾರಣಿಯ ಚೇಲ ಇರಬಹುದೆ? ಯಾರಾದರೂ ಗೂಂಡಾಗಳ 'ಸಹೋದ್ಯೋಗಿ' ಇರಬಹುದೆ? ಇದು ನನ್ನ ಆತಂಕ ಹೆಚ್ಚು ಮಾಡಿತು. ಆದರೂ ಮನಸ್ಸು ಗಟ್ಟಿ ಮಾಡಿಕೊಂಡು ಸುಮ್ಮನೆ ನಡೆಯುತ್ತಿದ್ದೆ. ಆದರೆ ಆತ ಒಂದು ದಿನ ನಾನು ನಡೆಯುತ್ತಿದ್ದಾಗಲೇ ಬಂದ; ನನ್ನೆದುರು ನಿಂತು, 'ನೀವು ಯಾರು?' ಅಂದ. ನಾನು ಕ್ಷಣ ನಿಂತು, 'ನಿನಗೆ ಯಾಕೆ?' ಅಂದೆ. ನನ್ನ ಗಟ್ಟಿ ಧ್ವನಿ ಕೇಳಿ, 'ಸರ್, ನೀವು ಲಂಕೇಶ್ ಅಲ್ಲವೆ?' ಎಂದ. ನಾನು 'ಹೌದು' ಅಂದೆ. ಅಲ್ಲಿಂದ ಆತ ಕ್ಷಣ ಮೌನತಾಳಿ ನನ್ನ ಹಿಂದೆಯೇ ನಡೆಯುತ್ತಾ 'ಹೌದು ಸಾರ್, ನೀವು ಲಂಕೇಶೇ?' ಅಂದ. ಆತನ ಮನಸ್ಸಿನಲ್ಲಿದ್ದುದು ಗೊತ್ತಾಯಿತು. 'ಅಂಗರಕ್ಷಕರು, ಗನ್‌ಮನ್‌ಗಳು... ನನಗೆ ಬೇಕಿತ್ತು ಎಂದು ನಿನಗೆ ಅನ್ನಿಸುತ್ತದೆ ಅಲ್ಲವೆ? ನನಗದೆಲ್ಲ ಯಾಕಪ್ಪ, ಯಾರಾದರೂ ನನ್ನನ್ನು ನಿಜಕ್ಕೂ ಹೊಡೆದುಹಾಕಿಬಿಡಬೇಕು ಅನ್ನಿಸಿದರೆ ನಾನೇನು ಮಾಡಲು ಸಾಧ್ಯ? ಅಲ್ಲದೆ ನಾನು ಯಾರಿಗಾದರೂ ಅನ್ಯಾಯ ಮಾಡಿದ್ದರೆ ಬದುಕಿದ್ದು ಪ್ರಯೋಜನವೇನು? ಅಂದೆ. ಆತ ಆಶ್ಚರ್ಯದಿಂದ ನನ್ನನ್ನು ನೋಡುತ್ತಾ ನಿಂತ.

ನಾನು ಅಲ್ಲಿಂದ ಬೇಗಬೇಗ ನಡೆದುಬಿಟ್ಟೆ.......

ಆತ ಮತ್ತೆ ಸಿಕ್ಕಿಲ್ಲ.

ನಿಜದ ಹಲವು ಮುಖ



ಈ ಸತ್ಯ ಅನ್ನುವುದಕ್ಕೆ ಎಷ್ಟೆಷ್ಟು ಮುಖಗಳಿರುತ್ತವೆ, ನೋಡಿ. ನಾನು ಈ ಟಿಬೆಟ್ ಧರ್ಮಗುರು ದಲೈ ಲಾಮಾರ ಅಭಿಮಾನಿ. ಈಗ ಟಿಬೆಟ್ ಸುದ್ದಿಯಲ್ಲಿದೆ. ಯಾಕೆಂದರೆ ಚೈನಾದ ಅಧ್ಯಕ್ಷ ಜಿಯಾಂಗ್ ಜಮೀನ್ ಮೊನ್ನೆ ಅಮೆರಿಕಾಕ್ಕೆ ಭೇಟಿ ಕೊಟ್ಟಿದ್ದ. ಟಿಬೆಟ್ ಕುರಿತು ಹಾಲಿವುಡ್ ಅನೇಕ ಸಿನಿಮಾ ಮಾಡುತ್ತಿದೆ.

ಇದೆಲ್ಲ ಸರಿ. ಟಿಬೆಟ್ ಮೇಲೆ ಆಕ್ರಮಣ ಎಸಗಿದ ಚೈನಾ ಅದನ್ನು ಕಳೆದ ನಾಲ್ಕು ದಶಕಗಳಿಂದ ತನ್ನ ಹೆಬ್ಬೆರಳಿನಡಿಯಲ್ಲಿ ಇಟ್ಟು ಹೊಸಕಿ ಹಾಕುತ್ತಿದೆ; ಅಲ್ಲಿಯ ಜೀವನಕ್ರಮವೇ ನಾಶವಾಗಿದೆ. ದಲೈ ಲಾಮಾ ತಮ್ಮ ಸಾವಿರಾರು ಜನರೊಂದಿಗೆ ಭಾರತಕ್ಕೆ ಬಂದು ಹಲವು ಕಾಲನಿಗಳಲ್ಲಿ ಜೀವಿಸುತ್ತಿದ್ದಾರೆ. ಈ ದಲೈ ಲಾಮಾ ಮಹಾ ಸಹನೆಯ, ತಮಾಷೆಯ, ವಿವೇಕದ ಮನುಷ್ಯ. ಈತನಿಗೆ ನೊಬೆಲ್ ಬಹುಮಾನ ಸಿಕ್ಕಿತು.

ಆದರೆ ಟಿಬೆಟ್‌ನಲ್ಲಿ ದಲೈ ಲಾಮಾ ಆಡಳಿತ ಎಂಥದು? ಟಿಬೆಟ್ ಆತನ ಆಡಳಿತದಲ್ಲಿ ಯಾವ ಸ್ಥಿತಿಯಲ್ಲಿತ್ತು? ದಲೈ ಲಾಮಾರ ಆಡಳಿತ ಧರ್ಮಾಡಳಿತ, ನಾವು ಇರಾನ್‌ನಲ್ಲಿ, ಅಫ್ಘಾನಿಸ್ತಾನದಲ್ಲಿ ಕಾಣುವಂಥ ಕಂದಾಚಾರಿಗಳ ಆಡಳಿತ. ದಲೈ ಲಾಮಾರ ಧಾರ್ಮಿಕ ಪಟುಗಳೇ ಅಲ್ಲಿಯ ಆಡಳಿತಗಾರರು; ಅವರು ಹೇಳಿದ್ದೇ ಕಾನೂನು. ಮರಿ ಜಗದ್ಗುರುಗಳು ಇಡೀ ಟಿಬೆಟ್ ರಾಷ್ಟ್ರವನ್ನು ಕಂದಾಚಾರದಲ್ಲಿ ಹೂತಿದ್ದರು. ಅಲ್ಲಿ ಆಧುನಿಕತೆ ತಲೆಎತ್ತಲು ಸಾಧ್ಯವಿರಲಿಲ್ಲ. ಪುರುಷರು ಮಾತ್ರ ದಲೈ ಲಾಮಾ; ಅಧಿಕಾರಿ, ನ್ಯಾಯಾಧೀಶ ಆಗುವ ಟಿಬೆಟ್‌ನಲ್ಲಿ ಹೊಸ ದಲೈ ಲಾಮಾನನ್ನು ಆರಿಸುವುದು ಕೂಡ ವಿಚಿತ್ರವಾಗಿದೆ. ಯಾರೋ ಒಬ್ಬ ಹುಡುಗನನ್ನು ಲಾಮಾನ ಅವತಾರ ಎಂದು ಹಿಡಿದುಕೊಂಡು ಬಂದು ಕುರ್ಚಿಯ ಮೇಲೆ ಕೂರಿಸುತ್ತಾರೆ. ಲಾಮಾ ಅಲ್ಲಿಯ ಧರ್ಮಗುರು ಮತ್ತು ರಾಜಕೀಯ ನಾಯಕ.

ಜನರ ಶಿಕ್ಷಣ, ಆರೋಗ್ಯ, ರಕ್ಷಣೆ ಎಲ್ಲವೂ ಅನಿಶ್ಚಿತವಾಗಿರುವ ಟಿಬೆಟ್‌ಗೆ ಕಮ್ಯುನಿಸ್ಟ್ ಹುಂಬರು ನುಗ್ಗಿದರು. ಅವರು ಇಡೀ ರಾಷ್ಟ್ರವನ್ನು ತಮ್ಮ ಮೂಗಿನ ನೇರಕ್ಕೆ ತಿದ್ದಿ ದಿವಾಳಿ ಎಬ್ಬಿಸಿದರು.

ದೇಶದ ಜೀವ ಕುಗ್ಗಿಹೋಯಿತು.

ದೇಶದ ಪರಂಪರೆ ಮತ್ತು ಕಮ್ಯುನಿಸ್ಟ್ ವೈಚಾರಿಕತೆ ಎರಡರ ಮಧ್ಯೆ ಟಿಬೆಟ್ ಬಸವಳಿಯಿತು.

ಇದರಲ್ಲಿ ಯಾವುದನ್ನು ಆರಿಸಿಕೊಳ್ಳುವುದು?

● ಅಕ್ಟೋಬರ್ 22, 1997

ದೆ ಡಿಸರ್ವ್ ಇಟ್!

24X7 ಸುದ್ದಿ ವಾಹಿನಿಗಳಿಗೆ ಬಲೇ ತಲೆನೋವಿನ ಕೆಲಸ ಅಂದರೆ ಸುದ್ದಿ ತುಂಬೋದು. ಬೆಳಕು ಹರಿಯುತ್ತಿದ್ದಂತೆ ದೇವರು, ಬಿಸಿಲು ಏರುತ್ತಿದ್ದಂತೆ ಜ್ಯೋತಿಷ್ಯ, ರಾತ್ರಿಗೆ ದೆವ್ವಗಳ ಕತೆ ಹೇಳ್ತಾ ಮಧ್ಯಮಧ್ಯೆ ಸುದ್ದಿ ಬಿತ್ತರಿಸುವ ಹೊತ್ತಿಗೆ ಅವರ ಹೆಣಬಿದ್ದು ಹೋಗುತ್ತೆ. ಅವರ ಕಷ್ಟ ಅರ್ಥವಾಗದ ಕೆಲವರು 'ಅವು ಬರೀ ಬೊಗಳೇನೆ ಬಿಡ್ತಾವೆ' ಅಂತಾರೆ; ಇವು 'ಸುದ್ದಿ ವಾಹಿನಿಗಳಲ್ಲ' 'ಸುಳ್ಳು ವಾಹಿನಿ'ಗಳು ಅಂತಾನೂ ಅಂತಾರೆ. ಸುಳ್ಳೋ ಪಳ್ಳೋ ಸುದ್ದಿ ತುಂಬಬೇಕಲ್ಲ ತುಂಬ್ತಾರೆ. ಅವು ಒಂದು ರೀತಿ ಬಕಾಸುರ ಇದ್ದಂಗೆ. ಹಸಿದ ಹೊಟ್ಟೆ ನನಗೆ ಉತ್ಕೃಷ್ಟ ಆಹಾರವೇ ಬೇಕು ಅಂದ್ರೆ ಆಗುತ್ತಾ. ಹಸಿದುಕೊಂಡೇ ಇರಬೇಕಾಗುತ್ತೆ ಅಷ್ಟೆ. ಹಾಗೇನೆ ಸುದ್ದಿ ವಾಹಿನಿಗಳೂ ಕೂಡ. ಕಸಾನೋ, ರಸಾನೋ ಎಂತಹದ್ದಾದರೂ ತುಂಬಲೇಬೇಕಾಗುತ್ತೆ . ಇಷ್ಟೇ ಮಾಡಿದ್ರೂ ಕೆಲವು ಸಾರಿ ಇನ್ನೂ ಸಮಯ ಉಳಿದುಬಿಡುತ್ತೆ. ಆಗೇನು ಮಾಡ್ತಾರೆ ಅವರು ಅಂದ್ರೆ **panel discussion** ಮೊರೆ ಹೋಗ್ತಾರೆ. ಹಂಗಂದರೆ ಇದು ನೋಡುಗರಿಗೆ ವಿಷಯದ ಸಂಪೂರ್ಣ ಪರಿಚಯ ಮಾಡಿ ಅವರ ಜ್ಞಾನ ವಿಸ್ತರಣೆ ಮಾಡುವ ಪ್ರಯತ್ನ ಅಂತ ಅಲ್ಲ. ತಮ್ಮ ನಂಬಿಕೆಗಳೇ ನೋಡುಗರ ನಂಬಿಕೆಯೂ ಆಗಿರಬೇಕು ಎನ್ನುವುದನ್ನು ದೃಢೀಕರಿಸುವ ಕ್ರಿಯೆ ಇದು. ಈ ಪ್ರಕ್ರಿಯೆ ಸರಿಯಿಲ್ಲ ಅಂತ ಯಾರಿಗಾದರೂ ಅನ್ನಿಸಿದರೆ 'ಎದ್ದೇಳು ಮಂಜುನಾಥ' ಸಿನಿಮಾದಲ್ಲಿ ಹಾಯ್ ಬೆಂಗಳೂರಿನ ಆಫೀಸಿಗೆ ಹೋಗಿ ಲಂಕೇಶ್ ಪತ್ರಿಕೆ ಕೇಳಿದ ಹಾಗೆ ಅನ್ನುತ್ತಾರಲ್ಲ ಹಾಗಾಗುತ್ತೆ. ಸುದ್ದಿ ವಾಹಿನಿಗಳನ್ನೇ ಕುರಿತು ಹೇಳುವುದಾದರೆ 'ಸ್ವಾಭಿಮಾನಿ' ಶ್ರೀರಾಮುಲು ದುಷ್ಕೃತ್ಯಗಳನ್ನು ಜನಶ್ರೀ ವಾಹಿನಿಯಲ್ಲಿ, ಕುಮಾರಣ್ಣನ ಐಲಾಟಗಳನ್ನ ಕಸ್ತೂರಿ ವಾಹಿನಿಯಲ್ಲಿ, ಹಿಂದೂ ಸಂಘಟನೆಗಳ ಕರಾಳ ಮುಖವನ್ನ ಸುವರ್ಣ ವಾಹಿನಿಯಲ್ಲಿ ಬಯಸಿದಂತಾಗುತ್ತದೆ ಅಷ್ಟೇ!

ವಾಹಿನಿಗಳ ಈ ಒಂದು ಗುಣ ಎಲ್ಲಾ ಭಾಷೆಗಳಿಗೂ ಸಮಾನವಾಗಿದೆ ಅಂತ ಕಾಣಿಸುತ್ತೆ. ಇತ್ತೀಚೆಗೆ ಉತ್ತರ ಪ್ರದೇಶದ ಮಂತ್ರಿಯೊಬ್ಬ ಸಾರ್ವಜನಿಕರ ಎದುರೇ ಐಎಎಸ್ ಅಧಿಕಾರಿಗೆ ಅವಮಾನ ಮಾಡಿದನಂತೆ. ಉಗಿಸಿಕೊಂಡ ಅಧಿಕಾರಿಯೂ ತೆಪ್ಪಗಿದ್ದ. ಅವನ ಸಹಅಧಿಕಾರಿಗಳೂ ಬಾಲ ಮುದುರಿಕೊಂಡಿದ್ದರು. ಮೊದಲ ಸಲ ಹೀಗಾಗಿದ್ದರೆ ಮನಸ್ಸಿಗೆ ಖೇದ ಆಗುತ್ತಿತ್ತೇನೋ. ಉಗಿಸಿಕೊಂಡು ಉಗಿಸಿಕೊಂಡು ಅಭ್ಯಾಸ ಆಗಿರಬೇಕು. ಅವರಿಗೇನೂ ಅನ್ನಿಸಿಯೇ ಇರಲಿಲ್ಲ, ಆದರೆ 'ಟೈಮ್ಸ್ ನೌ' ವಾಹಿನಿಯವರಿಗೆ ಕ್ಯಾಣ ಹತ್ತಿಬಿಡ್ತು, ನಿಖಿಲೇಶ್ ಯಾದವ್ ಮೇಲೆ ಅದೇನು ಸಿಟ್ಟು ಇತ್ತೊ ಗೊತ್ತಿಲ್ಲ, ಅವನ್ನ ಬಲಿಹಾಕಬೇಕು ಅಂತಾನೋ, ಐಎಎಸ್ ಅಧಿಕಾರಿಗಳ ಶಹಬ್ಬಾಸ್ ಗಿರಿ ಪಡೆಯಬೇಕು ಅಂತಾನೋ ಕಾಣೆ. ಅದು ಯಾವುದಾದರೂ ಆಗಿರಲಿ. ಪ್ಯಾನೆಲ್ ಡಿಸ್ಕಷನ್ ಅಂತ ಇರೋದೆ ಇಂತಹವುಕ್ಕಲ್ಲವಾ. ಅದನ್ನೇ ಇಟ್ಟುಕೊಂಡಿದ್ದರು.

ಇಂಗ್ಲಿಷ್ ಚಾನೆಲ್‌ನವರು ಅಲ್ಲವಾ. ಭಾರೀ



ಅಚ್ಚುಕಟ್ಟಾಗೇ ಇಂತಹವುಗಳನ್ನೆಲ್ಲ ಮಾಡಿರುತ್ತಾರೆ. ತಮಗೆ ಬೇಕಾದವರನ್ನೇ ಕರೆಸಿ ಅವರ ಬಾಯಿಂದ ತಮ್ಮ ಅಭಿಪ್ರಾಯ ಹೊರಡಿಸುತ್ತಾರೆ. ಆದರೆ ಒಂದೊಂದು ಸಲ ಏನಾಗಿಬಿಡುತ್ತೆ ಅಂದರೆ ಹಗ್ಗ ಅಂತ ತಿಳಿದು ಹಿಡಿದುಕೊಂಡಿದ್ದು ಹಾವಾಗಿ ಬಿಡುತ್ತೆ. ಪ್ಯಾನೆಲ್‌ನಲ್ಲಿ ಇರೋರು ಸರಿಯಾದ ಸಮಯದಲ್ಲಿ ಕೈಕೊಟ್ಟುಬಿಡುತ್ತಾರೆ. ಅಲ್ಲೂ ಹಾಗೇ ಆಯಿತು. ಪಾಪ ಆ್ಯಂಕರ್ ಮಹಾಶಯರು ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳ ಈ ರೀತಿಯ ವರ್ತನೆ ಖಂಡನೀಯ ಎಂದು ಮೊದಲೇ ಸೂಚನೆ ನೀಡಿದ್ದರು. ಆದರೆ ವಾಹಿನಿ ನಂಬಿ ಕರೆಸಿದ್ದ ಒಬ್ಬ ಪತ್ರಕರ್ತ `They deserve it' ಅಂದುಬಿಡೋದೆ! 'ಅದ್ಯಾಕಪ್ಪ ಹಾಗಂತಿ' ಅಂತ ಕೇಳಿದ್ದಕ್ಕೆ 'ಮಾಯಾವತಿ ಸರ್ಕಾರದಲ್ಲಿ ಅವರ ವರ್ತನೆ ಇನ್ನೂ ಕೀಳು ದರ್ಜೆಯದಾಗಿತ್ತು. ಆಕೆಯ ಗುಲಾಮರಂತೆ ಇವರೆಲ್ಲ ವರ್ತಿಸುತ್ತಿದ್ದರು' ಅಂದುಬಿಟ್ಟ!

ಇದೇನಪ್ಪ ಇದು ನಮಾಜು ಮಾಡಲು ಹೋಗಿ ಮಸೀದೀನೆ ಮೈಮೇಲೆ ಕೆಡವಿಕೊಂಡ ಹಾಗಾಯಿತಲ್ಲ ಅಂತ ವಾಹಿನಿಯವರು ಏನು ಮಾಡಿದರು, ಈ ಮನುಷ್ಯನ್ನ ನಂಬಿಕೊಂಡರೆ ನಮ್ಮ ಉದ್ದೇಶ ಸಫಲ ಆಗಲ್ಲ ಅಂದುಕೊಂಡು ಇನ್ನೊಬ್ಬನ್ನ ಹಿಡಿದರು. ವಾಹಿನಿಯ ದುರಾದೃಷ್ಟಕ್ಕೆ ಏನು ಹೇಳಾನ. ಇನ್ನೊಬ್ಬ ದೆಹಲಿಯ ಜವಹರಲಾಲ್ ವಿಶ್ವವಿದ್ಯಾಲಯದ ಪ್ರೊಫೆಸರ್ ಅಂತೆ. ಸಾಲದ್ದಕ್ಕೆ ಆತ ವಿದ್ಯಾ ಕ್ಷೇತ್ರಕ್ಕೆ ತನ್ನ ಅಮೂಲ್ಯ ಕೊಡುಗೆ ನೀಡುತ್ತಿದ್ದುದಲ್ಲದೆ ಬಹುಜನ ಸಮಾಜ ಪಕ್ಷಕ್ಕೂ ಅದನ್ನೇ ಮಾಡುತ್ತಿದ್ದನಂತೆ! ಹೀಗಿರುವಾಗ ಮಾಯಾವತಿ ಹೆಸರನ್ನು ಈ ವಿಷಯಕ್ಕೆ ಎಳೆದುತಂದದ್ದು ಆತನನ್ನು ಉದ್ರಿಕ್ತನನ್ನಾಗಿ ಮಾಡಿತ್ತು. 'ಮಾಯಾವತಿ ಸರ್ಕಾರದಲ್ಲಿ ಹೀಗೆ ನಡೆಯುತ್ತಿರಲಿಲ್ಲ' ಎಂದ. ಆ್ಯಂಕರ್ ಮಾಡೋರು ಇಂತಹ ವಿಷಯಗಳಲ್ಲಿ ಭಾರೀ ಬುದ್ಧಿವಂತರಲ್ವಾ. ಅವರಿಗೆ ಏನೋ ಹೊಸ ಎಳೆ ಸಿಕ್ಕಿದಂತಾಯ್ತು, ಬಹೆನ್ ಅಧಿಕಾರದಲ್ಲಿದ್ದಾಗ ಯಾವುದೋ ಪೊಲೀಸ್ ಅಧಿಕಾರಿ ಆಕೆ ಧರಿಸಿದ್ದ ಶೂಗಳನ್ನ ಒರೆಸುತ್ತಿದ್ದ ವಿಡಿಯೋ ಕ್ಲಿಪ್ಪಿಂಗ್ ತೋರಿಸಿ 'ಹೀಗೆ ಇತ್ತಲ್ಲವಾ' ಅಂತ ಕೇಳಿದ. ಅದಕ್ಕೆ ಪ್ರೊಫೆಸರ್ ಸಾಹೇಬ 'ಅವನು ಪೊಲೀಸ್ ಅಧಿಕಾರಿ ಅಲ್ಲ, ಅಂಗರಕ್ಷಕ' ಅಂದ! 'ಪೊಲೀಸ್ ಅಧಿಕಾರಿ ಅಂಗರಕ್ಷಕ ಹುದ್ದೆಗೆ ಬಂದಿದ್ದಾರೆ ನಿಜ. ಹಾಗೆಂದಮಾತ್ರಕ್ಕೆ ಚಪ್ಪಲಿ ಒರೆಸುವುದೂ ಅವನ ಕರ್ತವ್ಯವಾ' ಎಂದು ಕೇಳಿದ ವಾಹಿನಿಗೆ ಪ್ರೊಫೆಸರ್ ಸಾಹೇಬ 'ಅಂಗರಕ್ಷಕ ಎಂದಮೇಲೆ ಎಲ್ಲವನ್ನೂ ಮಾಡಬೇಕು. ಅದು ಆತನ ಕರ್ತವ್ಯದ ಭಾಗ' ಅಂದ!

ವಿಷಯ ಎಲ್ಲಿಂದ ಎಲ್ಲಿಗೋ ಜಾರಿಹೋಗುತ್ತಿರುವುದು ವಾಹಿನಿಯ ನಾಯಕನಿಗೆ ಅರ್ಥ ಆಗಿರಬೇಕು. ಬುದ್ಧಿವಂತ, ಹೇಗೋ ತಿಪ್ಪೆಸಾರಿಸಿದ ಅನ್ನಿ. ಆದರೂ ಆತ ಬಂದು ವಿಷಯ ತಿಳಿದುಕೊಳ್ಳಬೇಕಾಗಿತ್ತು. ಡಾ. ಅಂಬೇಡ್ಕರ್ ಅವರು ಭಾರತೀಯರಿಗೆ ಧರ್ಮದಲ್ಲಿ ಮೂರ್ತಿ ಪೂಜೆ, ರಾಜಕೀಯದಲ್ಲಿ ವ್ಯಕ್ತಿ ಪೂಜೆ ಅಂತರ್ಗತವಾಗಿದೆ ಅಂದಿದ್ದರು. ಅದು ಈ ಹೊತ್ತಿಗೂ ನಿಜ. ಜನರ ಮನೋಧರ್ಮ ತಿಳೀದೆ ಸಮಾಜವಾದಿ ಪಕ್ಷ ಟೀಕಿಸುವವರೆಲ್ಲ ನಮ್ಮ ಪರವಾಗಿದ್ದಾರೆ ಅನ್ನೋ ಕುರುಡುನಂಬಿಕೆಗೆ ನೇತು ಹಾಕಿಕೊಂಡರೆ ಹೀಗೇ ಆಗುವುದು ಅಲ್ಲವಾ....


ತನಿಖೆ ನಡೆಸಿ ಬಂಧಿಸುತ್ತಾರಂತೆ!

ಚಲಿಸುವ ರೈಲಿನಲ್ಲಿ ಕೊಲೆ ಆಗುತ್ತೆ. ಪೊಲೀಸರು ಅದರ ಪ್ರತ್ಯಕ್ಷದರ್ಶಿ ಆಗಿರುತ್ತಾರೆ. ಆದರೆ ಕೊಲೆಗಾರರನ್ನು ಬಂಧಿಸುವುದಿಲ್ಲ!

ಜನಸಾಮಾನ್ಯರಿಗೆ ಇದು ಕರ್ತವ್ಯಲೋಪವಾಗಿ ಕಾಣಿಸಬಹುದು. ಪೊಲೀಸ್ ಅಧಿಕಾರಿಗಳಿಗೆ ಹಾಗೆ ಅನ್ನಿಸುವುದೇ ಇಲ್ಲ.

'ಯಾಕೆ ಹೀಗೆ ಮಾಡಿದಿರಿ ಪೊಲೀಸರೆ' ಎಂದು ಕೇಳಿದರೆ ಅವರಿಂದ ಬರುವ ಸಿದ್ಧ ಉತ್ತರ- 'ತನಿಖೆ ನಡೆಸಿ ಅಪರಾಧಿ ಬಂಧಿಸುತ್ತೇವೆ!'

ಇಂತಹ ಪೊಲೀಸ್ ಅಧಿಕಾರಿಗಳೂ ಇದ್ದಾರಾ ಎಂದು ಕೆಲವರಿಗೆ ಆಶ್ಚರ್ಯವಾಗಬಹುದು. ಇದ್ದಾರೆ ಸ್ವಾಮಿ, ಇದ್ದಾರೆ. ದೂರ ಹೋಗಬೇಕಿಲ್ಲ, ಮಂಡ್ಯಕ್ಕೆ ಬನ್ನಿ.



ಎಚ್.ಎಲ್. ಕೇಶವಮೂರ್ತಿ

ಅಣಕ

ಅಂತಹವರ ದರ್ಶನ ಭಾಗ್ಯ ನಿಮ್ಮದಾಗುತ್ತೆ!

ಬದುಕನ್ನು ಕಟ್ಟಿಕೊಳ್ಳಲು ಮಂಗಳೂರಿಗೆ ರೈ[...] ತೆರಳುತ್ತಿದ್ದ ಕಟ್ಟಡ ಕಾರ್ಮಿಕರನ್ನು, ಎಬಿವಿಪಿ ಗೂಂಡ[...] ಥಳಿಸಿದರು; ಚಪ್ಪಲಿ ಕಾಲಿನಲ್ಲಿ ಒದ್ದರು; ಬಲವಂ[...] ಮಂಡ್ಯದಲ್ಲಿ ಅವರನ್ನು ರೈಲಿನಿಂದ ಇಳಿಸಿದರು. ನಡೆದದ್ದು ಪೊಲೀಸರ ಸಮ್ಮುಖದಲ್ಲಿ, ಆದರೂ [...] ದಾಳಿಕೋರನೂ ಇದುವರೆವಿಗೆ ಬಂಧಿತನಾಗಿಲ್ಲ!

ಯಾಕೆ ಬಂಧಿಸಿಲ್ಲ?

ತನಿಖೆ ನಡೆಯುತ್ತಿದೆಯಂತೆ. ನಂತರ ಬಂಧಿಸ[...] ವುದಂತೆ!

ದಾಳಿಕೋರರು ಬಡವರ ಬದುಕುವ ಹಕ್ಕಿಗೆ ಅ[...] ಉಂಟು ಮಾಡಿದ್ದಾರೆ; ಕೋಮುದ್ವೇಷ ಬಿತ್ತು[...] ಪ್ರಯತ್ನಿಸಿದ್ದಾರೆ; ಸಂವಿಧಾನದ ಆಶಯಗಳಿಗೆ [...] ನಡೆದುಕೊಂಡಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಪೊಲಿ[...] ಸಾರ್ವಜನಿಕರು ಇದ್ದಾರೆ; ವಿಡಿಯೋ ಕ್ಲಿಪ್ಪಿಂಗ್ [...] ಇಷ್ಟೆಲ್ಲ ಇದ್ದರೂ ಅವರು ತನಿಖೆ ನಡೆಸುತ್ತಿದ್ದಾರಂತೆ, ಮುಗಿದನಂತರ ಬಂಧಿಸುತ್ತಾರಂತೆ!

ಇದು ಕಪೋಲಕಲ್ಪಿತ ಅಲ್ಲ, ಪೊಲೀಸ್ ಅಧಿಕಾ[...] ಹೇಳಿದ ಮಾತು!

ಖಾಕಿ ಬಟ್ಟೆ ನಮ್ಮ ಮೈಲಿ, ಅಧಿಕಾರ ದಂಡ [...] ಕೈಲಿ ಆಗಿರಬಹುದಾ?

ಇಲಾಖೆ ತನ್ನ ಅಧಿಕಾರಾನ ಸಂಘಪರಿವಾರಕ್ಕೆ [...] **sourcing** ಮಾಡಿದೆಯಾ? ಆಪಾದಿತರನ್ನು ಬಂಧಿ[...] ಯಾವುದಾದರೂ ಶಕ್ತಿಗಳು ಒತ್ತಡ ಹೇರಿವೆಯಾ? [...] ಇಲ್ಲವಂತೆ. ಇಲಾಖೆ ಯಾರ ಒತ್ತಡಕ್ಕೂ ಮಣಿಯ[...] ದಿಲ್ಲವಂತೆ! ಆದರೂ ಆಪಾದಿತರ ಬಂಧನ ಆಗಿಲ್ಲ[...]

ರೈಲು ಪೊಲೀಸರಿಗೆ ಬುದ್ಧಿ ಇಲ್ಲ ಎಂದೇನೂ [...] ಬುದ್ಧಿ ಇದೆ. ಹಲ್ಲೆಕೋರರರನ್ನು ಬಂಧಿಸುವಂತೆ ಒತ್ತಾ[...] ಪ್ರತಿಭಟಿಸುತ್ತಿದ್ದವರ ವಿಡಿಯೋ ಚಿತ್ರೀಕರಣವನ್ನು ಜೊ[...] ಮಾಡಿದ್ದಾರೆ. ಯಾಕೆ ಇಷ್ಟೊಂದು ಮುತುವರ್ಜಿ [...] ಮುಂದೆ ಅವರ ಮೇಲೆ ಕೇಸು ದಾಖಲಿಸಲು ಪ್ರಯೋ[...] ಬರಬಹುದು ಎಂದು ಇರಬಹುದು!

ಉತ್ತರ ಪ್ರದೇಶದ ಐಎಎಸ್ ಅಧಿಕಾರಿಗೆ [...] ಮೋಕ್ಷವೇ ಒಂದು ವೇಳೆ ಕರ್ನಾಟಕದ ರೈಲು ಪೊಲೀಸ[...] ಆದರೆ ಜನರು ಏನೆನ್ನಬಹುದು? They deserv[...]

ಹಿಂದೂತ್ವವಾದಿಗಳಿಗೂ, ತಾಲಿಬಾನಿ ರಕ್ಕಸರಿಗೂ ಏನು ವ್ಯತ್ಯಾಸ?

'ಕಂಡಹಾಗೆ' ಅಂಕಣದಲ್ಲಿ ಗೌರಿಯವರು '...ವ್ಯಕ್ತಿಯೊಬ್ಬ ಎಂತಹದ್ದೇ ಅಪರಾಧವೆಸಗಿದರೂ ಆತನನ್ನು ಕೊಲ್ಲುವ ಹಕ್ಕು ಇತರರಿಗೆ ಇರುತ್ತದೆಯೇ ಎಂಬ ಪ್ರಶ್ನೆ ಇದ್ದೇ ಇದೆ. ಮರಣದಂಡನೆಯನ್ನು ವಿರೋಧಿಸುವವರು ಯಾರನ್ನೇ ಆಗಲಿ ಗಲ್ಲಿಗೇರಿಸುವುದನ್ನು ಒಪ್ಪುವುದಿಲ್ಲ, ಅಂಥವರಲ್ಲಿ ನಾನೂ ಒಬ್ಬಳು' ಎಂದು ಹೇಳಿರುವುದು ಪ್ರಜ್ಞಾವಂತ ನಾಗರಿಕತೆಯಲ್ಲಿ ವಿಶ್ವಾಸ ಹೊಂದಿರುವ ಯಾರೇ ಆದರೂ ಒಪ್ಪತಕ್ಕ ಮಾತು.



ಘೋರ ಅಪರಾಧಿಯನ್ನು ಕೊಲ್ಲುವುದು ಎಂದರೆ ಒಂದು ರೀತಿಯಲ್ಲಿ, ದೀರ್ಘ ಕಾಲದ ಯಾತನೆಯಿಂದ ಬಿಡುಗಡೆಗೊಳಿಸುವ ಮೂಲಕ ಆತನಿಗೆ ಉಪಕಾರ ಮಾಡಿದಂತೆ. ಈ ಅರ್ಥದಲ್ಲಿ ಮರಣದಂಡನೆಗಿಂತಲೂ ಸಾಯುವವರೆಗಿನ ಸಶ್ರಮ ಸೆರೆವಾಸ ಹೆಚ್ಚು ಕಠಿಣವಾದುದಾಗಿದ್ದು ಅಂತಹ ಶಿಕ್ಷೆಯನ್ನೇ ನೀಡಬೇಕು. ಬದುಕಿರುವಷ್ಟು ದಿನವೂ ತನ್ನ ಅಪರಾಧ ಕೃತ್ಯದ ಬಗ್ಗೆ ಆತ ಪಶ್ಚಾತ್ತಾಪ ಪಡುವಂತಾಗಬೇಕು. ಅಲ್ಲದೆ ಸೆರೆಮನೆಯಲ್ಲಿಯೇ ಉತ್ಪಾದಕ ಕೆಲಸಗಳಲ್ಲಿ ಅವರನ್ನು ಬಳಸಿಕೊಳ್ಳುವ ಮೂಲಕ ಅವರ ಬದುಕನ್ನು ಸಾರ್ಥಕಗೊಳಿಸುವ ಜತೆಗೆ ದೇಶಕ್ಕೂ ಉಪಕಾರವಾಗುವಂತೆ ಮಾಡಲು ಸಾಧ್ಯವಾದರೆ ಇನ್ನೂ ಒಳ್ಳೆಯದು.

ಮರಣದಂಡನೆಯನ್ನೇ ನಿಷೇಧಿಸಬೇಕು ಎಂದು ಜಗತ್ತಿನಾದ್ಯಂತ ಒಕ್ಕೊರಲ ಆಗ್ರಹಗಳು ಕೇಳಿಬರುತ್ತಿರುವ ಹೊತ್ತಿನಲ್ಲಿಯೂ ಪುಣ್ಯಭೂಮಿ ಭಾರತದಲ್ಲಿ ತಥಾಕಥಿತ ವಿದ್ಯಾವಂತರೆನಿಸಿಕೊಂಡ ಕೆಲವು ಮಹನೀಯರು, ಅದರಲ್ಲೂ ವಿಶೇಷವಾಗಿ 'ದೇಶಭಕ್ತ'ರ ಪಕ್ಷದವರು ಮರಣದಂಡನೆಯ ಪರ ಗಂಟಲು ಹರಿದುಕೊಳ್ಳುತ್ತಿರುವುದನ್ನು, ಕಸಬ್, ಅಫ್ಜಲ್ ಗುರುವನ್ನು ಬೀದಿದೀಪದ ಕಂಬಕ್ಕೆ ನೇತುಹಾಕಿ ಸಾಯಿಸಬೇಕು ಎಂದೆಲ್ಲ ಕಿರುಚುತ್ತಿರುವುದನ್ನು ನೋಡುವಾಗ ಇವರಿಗೂ ತಾಲಿಬಾನಿ ರಕ್ಕಸರಿಗೂ ಏನು ವ್ಯತ್ಯಾಸ ಎನ್ನುವುದೇ ತಿಳಿಯುತ್ತಿಲ್ಲ.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಭಯೋತ್ಪಾದನೆ ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ

ಭಯೋತ್ಪಾದನೆಯನ್ನು ಕೇವಲ ಮುಸ್ಲಿಂ ಮೂಲಭೂತವಾದಿ ವಿಧ್ವಂಸಕತೆಗೆ ಸೀಮಿತಗೊಳಿಸುವ ಸಂಘ ಪರಿವಾರದ ಪರಿಭಾಷೆಯನ್ನೇ ಕನ್ನಡ ಪತ್ರಿಕೋದ್ಯಮ ಪ್ರಚಾರಪಡಿಸುತ್ತಿರುವ ಸದ್ಯದ ಸಂದರ್ಭದಲ್ಲಿ ಕಸಬ್ ಮತ್ತು ಮಾಯಾ ಕೊಡ್ನಾನಿಯವರನ್ನು ಅಕ್ಕಪಕ್ಕದಲ್ಲಿಟ್ಟು ಭಯೋತ್ಪಾದನೆಯನ್ನು ವಿಶ್ಲೇಷಿಸುವ ಮೂಲಕ ನಿಜವಾಗಿಯೂ ನಮ್ಮ ಕಾಲದ ಅಗತ್ಯವನ್ನು ಪೂರೈಸಿದ್ದೀರಿ. ಧನ್ಯವಾದಗಳು.


ಕಳೆದ ವಾರದ ಮೂಲಭೂತವಾದಿ ಭಯೋತ್ಪಾದಕ ವಿದ್ಯಮಾನಗಳ ಬಗ್ಗೆ ಅತ್ಯಂತ ಸಮತೋಲನದಿಂದ ವರದಿ ಮಾಡುತ್ತಿರುವ ಏಕೈಕ ಕನ್ನಡ ಪತ್ರಿಕೆ ಎಂದರೆ 'ವಿಜಯ ಕರ್ನಾಟಕ'. ಕಳೆದ ವಾರದ ದೈನಿಕಗಳ ವರದಿಗಾರಿಕೆಯ ಬಗ್ಗೆ ಒಂದು ವಿಶ್ಲೇಷಣೆ ಮಾಡಿಸಬಹುದೇನೋ?

ಸಾವಿರಾರು ವರುಷಗಳಿಂದ ಬೆಳೆದುಬಂದ ಕನ್ನಡದ ಸೌಹಾರ್ದತೆಯ ಸಾಮಾಜಿಕ ವಿವೇಕವನ್ನು ಎತ್ತಿಹಿಡಿಯುವುದು ಇಂದಿನ ತುರ್ತಾಗಿದೆ.

- ಎಂ.ದಿ.ಒಕ್ಕುಂದ, ಧಾರವಾಡ



ಕಸಬ್‌ಗೆ ಆದಂತೆ ಮುತಾಲಿಕನಿಗೂ ಶಿಕ್ಷೆ ಆಗಲಿ



ಪಾಕಿಸ್ತಾನದ ಉಗ್ರ ಅಜ್ಮಲ್ ಕಸಬ್‌ಗೆ ಗಲ್ಲು ಶಿಕ್ಷೆ ಕೊಡೋದಾದರೆ... ಭಾರತದ ಹಿಂದೂ ಉಗ್ರ ಪ್ರಮೋದ್ ಮುತಾಲಿಕ್‌ನಂಥವರಿಗೆ ಗಲ್ಲು ಶಿಕ್ಷೆ ಯಾವಾಗ?

ಯಾಕೆ ಅಂದರೆ ಉಗ್ರ ಕಸಬ್ ಮಾಡಿದ್ದು ಧ[...] ಹೆಸರಲ್ಲಿ ಅನಾಚಾರ. ಮುತಾಲಿಕ್‌ನಂತಹ ನಕಲಿ [...] ಪ್ರೇಮಿಗಳು ಮಾಡುತ್ತಿರುವುದೂ ಸಂಸ್ಕೃತಿ ಮತ್ತು ಧ[...] ಹೆಸರಲ್ಲಿ ಅನಾಚಾರ.

ಈವಾಗ ಹೇಳಿ ಉಗ್ರ ಕಸಬ್‌ಗೂ, ಈ ಅವಿ[...] ಮುತಾಲಿಕ್‌ನಂಥವರಿಗೂ ಏನು ವ್ಯತ್ಯಾಸ?

ಶಾಹಿದ್ ಜಂಸಾಲೆ, ಎಸ್‌ಎಂ[...] ಮೂ[...]

ಕಾರಂತರ ಬರ್ಬರ ಹತ್ಯೆಗಳು

"ಮನುಜ ಮತ ವಿಶ್ವಪಥ" ಎ[...] ಜಾತೀಯತೆಯನ್ನು ಮೀರಿ ವಿಶ್ವ ಮಾನವ ಸಂ[...] ಸಾರಿದ ಕುವೆಂಪುರವರನ್ನು ಇತ್ತೀ[...] ಜಾತಿಸಮ್ಮೇಳನವೊಂದರಲ್ಲಿ ಬಳಸಿಕೊಂಡದ್ದು [...] ಆಕ್ಷೇಪಣೆಗೆ ಕಾರಣವಾಗಿತ್ತು, ಕುವೆಂಪುರವರು ಇ[...] ಆವರ್ಯಾರಿಗೂ ಖಂಡಿತ ಇಂತಹ ಧೈರ್ಯ ಬರುತ್ತಿರ[...]

ಕೋಟ ಶಿವರಾಮ ಕಾರಂತರು ಎಂತಹ ವ್ಯಕ್ತಿಯೆ[...] ಇಡೀ ನಾಡಿಗೇ ಗೊತ್ತಿದೆ. ಯಾವುದ[...] ಸಮಾರಂಭವೊಂದರಲ್ಲಿ ಅವರನ್ನು ಗೌರವಯುತ[...]

...ಂಧಿನಗರದಲ್ಲಿ ಕ್ರಿಕೆಟ್ ರಾಜಕೀಯ



...ನ್ನಡ ಚಿತ್ರರಂಗದಲ್ಲಿ ವಿವಾದಗಳಿಗೇನು ಕೊರತೆಯೇ ಇಲ್ಲ. ದಿನಕ್ಕೊಂದು ವಿವಾದ ಹುಟ್ಟುತ್ತಲೇ ...ವುದು ಕನ್ನಡ ಚಿತ್ರರಂಗದ ಒಂದು ಸಂಪ್ರದಾಯ ಎಂದು ಹೇಳಿದರೂ ತಪ್ಪಾಗಲಾರದು.


...ಳೆದ ವರ್ಷ ಹುಬ್ಬಳ್ಳಿಯಲ್ಲಿ ನಡೆದ ರಾಜ್ ಕಪ್ ಕ್ರಿಕೆಟ್ ಟೂರ್ನಮೆಂಟ್‌ನ ಸಂದರ್ಭದಲ್ಲಿ ಶಿವರಾಜ್‌ಕುಮಾರ್ ... ಮತ್ತು ಸುದೀಪ್ ತಂಡದ ನಡುವೆ ಮಾತಿನ ಚಕಮಕಿ ನಡೆದದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಆ ...ವಯಾದ ನಂತರ ಇವರಿಬ್ಬರ ನಡುವಿನ ಸ್ನೇಹಕ್ಕೆ ಕುತ್ತು ಬಂದಂತಾಗಿದೆ. ಮೇಲ್ನೋಟಕ್ಕೆ ಇಬ್ಬರೂ ...ದುರುಬದುರು ಸಿಕ್ಕಾಗ ಪರಸ್ಪರ ಆಲಂಗಿಸಿಕೊಂಡರೂ ಆ ಆಲಿಂಗನದಲ್ಲಿ ಈ ಹಿಂದೆ ಇದ್ದ ಆತ್ಮೀಯತೆ ...ಮುತ್ತಿಲ್ಲ ಎಂಬುದು ಹೆಚ್ಚಿನವರ ಅನಿಸಿಕೆ.

...ಅದೇನೇ ಇರಲಿ, ರಾಜ್ ಕಪ್ ಕ್ರಿಕೆಟ್ ವಾಸ್ತವವಾಗಿ ಆರಂಭವಾದದ್ದೇ ಉದ್ಯಮದಲ್ಲಿ ಎಲ್ಲರ ನಡುವೆ ... ಬಾಂಧವ್ಯವನ್ನು ಹುಟ್ಟುಹಾಕಲು. ಅಂತಹ ಸದುದ್ದೇಶದಿಂದ ಆರಂಭಿಸಿದ ರಾಜ್ ಕಪ್ ಕ್ರಿಕೆಟ್ ...ದಲ ವರ್ಷ ಸಂಪೂರ್ಣವಾಗಿ ಯಶಸ್ಸನ್ನು ಕಂಡಿದ್ದಕ್ಕೆ ಕಾರಣ ಸುದೀಪ್. ಆದರೆ ಈ ಬಾರಿ ರಾಜ್ ಕಪ್ ...ಟ್‌ನಲ್ಲಿ ಸುದೀಪ್ ತಂಡ ಭಾಗವಹಿಸಿದರೂ ಸುದೀಪ್ ಭಾಗವಹಿಸುವ ಸಾಧ್ಯತೆ ಕಡಿಮೆ ಎಂದು ಕೇಳಿಬರುತ್ತಿದೆ. ...ಒ ವೇಳೆ ಸುದೀಪ್ ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸದಿದ್ದರೆ ರಾಜ್ ಕಪ್ ತನ್ನ ಆಕರ್ಷಣೆಯನ್ನು ...ಕೊಳ್ಳುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

...ಈ ಮಧ್ಯೆ ವಿಷ್ಣುವರ್ಧನ್ ಹುಟ್ಟುಹಬ್ಬದಂದು ಕಳೆದ ಎರಡುಮೂರು ವರ್ಷಗಳಿಂದ ಅವರ ಸ್ಮರಣಾರ್ಥ ... ಟೂರ್ನಮೆಂಟನ್ನು ಭಾರತಿ ವಿಷ್ಣುವರ್ಧನ್ ಏರ್ಪಡಿಸುತ್ತಿದ್ದುದು ನಿಮಗೆಲ್ಲ ಗೊತ್ತೇ ಇದೆ. ಈ ಹಿಂದೆ ...ಟೂರ್ನಮೆಂಟ್‌ನಲ್ಲಿ ತಾರೆಯರ ತಂಡ ಇರುತ್ತಿರಲಿಲ್ಲ. ಆದರೆ ಇದೇ ಮೊದಲ ಬಾರಿಗೆ ಈ ವರ್ಷ ...ವರ್ಧನ್ ಟೂರ್ನಮೆಂಟ್‌ನಲ್ಲಿ ಶಿವರಾಜ್‌ಕುಮಾರ್ ತಂಡ, ದುನಿಯಾ ವಿಜಿ ತಂಡ ಮತ್ತು ಡ್ಯಾನ್ಸರ್ಸ್ ... ಭಾಗವಹಿಸುತ್ತಾರೆಂದು ತಿಳಿದುಬಂದಿದೆ. ಆದರೆ ದ್ವಾರಕೀಶ್ ನಿರ್ಮಾಣದ 'ವಿಷ್ಣುವರ್ಧನ್' ಚಿತ್ರದಲ್ಲಿ ...ಕನಾಗಿ ನಟಿಸಿದ ಸುದೀಪ್ ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸುತ್ತಾರೋ, ಇಲ್ಲವೋ ಎಂಬುದು ...ರವಾಗಿ ತಿಳಿದುಬಂದಿಲ್ಲ.

...ಅಂದರೆ, ರಾಜ್ ಕಪ್ ಮತ್ತು ವಿಷ್ಣು ಕಪ್ ಎಂಬ ಎರಡು ಕ್ರಿಕೆಟ್ ಟೂರ್ನಮೆಂಟಗಳು ಕನ್ನಡ ...ರಂಗದಲ್ಲಿನ ಎರಡು ಬಣಗಳನ್ನು ಪ್ರತಿನಿಧಿಸುವಂತೆ ಕಾಣಿಸುತ್ತಿದೆ ಎಂಬುದು ಗಾಂಧಿನಗರದವರ ಮಾತು. ...ಊ-ಇಂತೂ ಸಿನಿಮಾ ರಾಜಕೀಯ ಈಗ ಕ್ರೀಡಾಂಗಣಕ್ಕೆ ಪ್ರವೇಶಿಸಿ ಕ್ರೀಡೆಯ ಮುಖಾಂತರ ಇನ್ನಷ್ಟು ...ಹಾಯಿಸುತ್ತಿರುವುದು ಮಾತ್ರ ಖಂಡಿತವಾಗಿಯೂ ಒಳ್ಳೆಯ ಸುದ್ದಿಯಲ್ಲ. ❖

ಮತ್ತೊಮ್ಮೆ ಮಹಾಭಾರತ



ಮಹಾಭಾರತ ಕಥೆ ಯಾರಿಗೆ ತಾನೇ ಗೊತ್ತಿಲ್ಲ? ಆದರೂ ಭಾರತದ ಈ ಮಹಾಕೃತಿಯನ್ನು ಮತ್ತೆ ಮತ್ತೆ ನೋಡಬೇಕೆಂಬ ಆಸೆ ಭಾರತೀಯರಿಗೆ ಅನ್ನಿಸಿದರೆ ಆಶ್ಚರ್ಯವಿಲ್ಲ.

ಮಹಾಭಾರತ ಈ ಹಿಂದೆ ದೂರದರ್ಶನ ರಾಷ್ಟ್ರೀಯವಾಹಿನಿಯಲ್ಲಿ ಪ್ರಸಾರವಾಗಿತ್ತು ಆದರೆ ಅದಾದನಂತರ ಯಾವುದೇ ಪ್ರಾದೇಶಿಕ ಭಾಷೆಯವರು ಈ ಮಹಾಕಾವ್ಯವನ್ನು ಪುನರ್ ನಿರ್ಮಾಣ ಮಾಡುವ ಧೈರ್ಯ ತೋರಿರಲಿಲ್ಲ. ಇದೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಉದಯ ಟಿ.ವಿ.ಯವರು ಇಂತಹ ದೊಡ್ಡ ಕಾವ್ಯವನ್ನು ಸೆಪ್ಟೆಂಬರ್ 9 ರಿಂದ ಪ್ರಸಾರ ಮಾಡುತ್ತಿದ್ದಾರೆ. ಮುಂಬೈಯ ಪ್ರತಿಷ್ಠಿತ ಟಿ.ವಿ. ಧಾರಾವಾಹಿ ನಿರ್ಮಾಣ ಸಂಸ್ಥೆಯಾದ ಸಿನಿವೆಸ್ಟಾ ಸಂಸ್ಥೆಯವರು ಇದನ್ನು ನಿರ್ಮಾಣ ಮಾಡುತ್ತಿದ್ದಾರೆ. ಅದರ ಮುಖ್ಯಸ್ಥ ಸುನೀಲ್ ಮೆಹ್ತಾ ಅವರು ಹೇಳುವ ಪ್ರಕಾರ ಈ ಧಾರಾವಾಹಿ ಕನಿಷ್ಟವೆಂದರೂ ಎರಡೂವರೆ ಅಥವಾ ಮೂರು ವರ್ಷ ಸತತವಾಗಿ ನಡೆಯುವ ಸಾಧ್ಯತೆಯಿದೆಯಂತೆ.

ಈ ಸಂಸ್ಥೆಯವರು ಈಗಾಗಲೇ ಉದಯ ಟಿ.ವಿ.ಯಲ್ಲಿ ಸೀತೆ ಎಂಬ ಧಾರಾವಾಹಿಯನ್ನು ಪ್ರಸಾರ ಮಾಡಿದ್ದು ಅದು ಈಗಾಗಲೇ 600 ಕಂತುಗಳನ್ನು ಪೂರೈಸಿರುವುದು ಅವರ ಪಾಲಿಗೆ ಹೆಮ್ಮೆಯ ವಿಷಯವಾಗಿದೆ. ಈ ಅನುಭವದ ಹಿನ್ನೆಲೆಯಲ್ಲೇ ಸುನಿಲ್ ಮೆಹ್ತಾ ಧೈರ್ಯ ಮಾಡಿ ಮಹಾಭಾರತ ಕಾವ್ಯವನ್ನು ಕಿರುಪರದೆಯ ಮೇಲೆ ತೋರಿಸಲು ಹೊರಟಿದ್ದಾರೆ.

ಸಾಮಾನ್ಯವಾಗಿ ಏಕ್ತಾ ಕಪೂರ್ ಸಂಸ್ಥೆಯ ಡಬ್ಬಾ ಧಾರಾವಾಹಿಂಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸುತ್ತಿದ್ದ ಉದಯ ಟಿ.ವಿ.ಯವರು ಇಂತಹ ಒಂದು ಮಹಾನ್ ಧಾರಾವಾಹಿಗೆ ಅವಕಾಶ ಮಾಡಿಕೊಟ್ಟು ಕನ್ನಡದ ಸಾವಿರಾರು ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ತೋರಿಸಲು ಅವಕಾಶ ಮಾಡಿಕೊಟ್ಟಿದ್ದು ನಿಜಕ್ಕೂ ಮೆಚ್ಚುವಂಥದ್ದು. ಈ ಧಾರಾವಾಹಿಯ ತಾಂತ್ರಿಕ ವಿಭಾಗದವರೆಲ್ಲ ಮುಂಬೈನವರಾದರೂ, ಕಥೆ ಚಿತ್ರಕಥೆಯನ್ನು ಕನ್ನಡದವರಾದ ಜಯಂತ್ ಪ್ರಹ್ಲಾದ್ ಬರೆದಿದ್ದಾರೆ. ಹಾಗೆಯೇ ಸಂಭಾಷಣೆ ಜವಾಬ್ದಾರಿಯನ್ನು ರುದ್ರಮೂರ್ತಿ ಶಾಸ್ತ್ರಿಯವರು ವಹಿಸಿದ್ದಾರೆ.

ಹೊಸ ಆಪ್ತಮಿತ್ರರು



ಸುದೀಪ್ ಮತ್ತು ದರ್ಶನ್ ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿರುವ ಹೊಸ ಆಪ್ತಮಿತ್ರ ಜೋಡಿ ಎಂಬುದು ನಿಮಗೆಲ್ಲ ಗೊತ್ತೇ ಇದೆ. ಆಗಾಗ್ಗೆ ಸಮಾರಂಭಗಳಿಗೆ ಒಟ್ಟಾಗಿ ಬರುವುದು, ದರ್ಶನ್ ಸಿನಿಮಾಕ್ಕೆ ಸುದೀಪ್ ಕ್ಲ್ಯಾಪ್ ಮಾಡುವುದು, ಸುದೀಪ್ ಚಿತ್ರಕ್ಕೆ ದರ್ಶನ್ ಕ್ಲ್ಯಾಪ್ ಮಾಡುವುದು ಇವೆಲ್ಲ ನಡೆಯುತ್ತಿದ್ದುದು ಕೂಡ ನಿಮಗೆ ಗೊತ್ತಿದೆ. ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಅವರಿಬ್ಬರೂ ಪಂಚತಾರಾ ಪಾರ್ಟಿಗಳಲ್ಲಿ ಒಟ್ಟಾಗಿ ಕಾಣಿಸಿಕೊಂಡದ್ದೂ ಇದೆ. ಅಷ್ಟೇ ಏಕೆ? ಇತ್ತೀಚೆಗೆ ಬೈಕ್‌ಗಳಲ್ಲಿ ಸುದೀಪ್ ಮತ್ತು ದರ್ಶನ್ ಬೇರೆ ಬೇರೆ ಪ್ರದೇಶಗಳಿಗೆ ವಿಹಾರಕ್ಕೆ ಹೋಗಿ ಬಂದದ್ದೂ ಉಂಟು. ಇವೆಲ್ಲವೂ ಅವರ ಪ್ರೀತಿಯ ಮತ್ತು ಸ್ನೇಹದ ಸಂಕೇತ ಎಂಬುದಲ್ಲಿ ಸಂಶಯವಿಲ್ಲ.

ಈಗ ದರ್ಶನ್ ನಾಯಕನಾಗಿ ನಟಿಸುತ್ತಿರುವ ಕನ್ನಡ ಚಿತ್ರರಂಗದ ಅತ್ಯಂತ ಅದ್ದೂರಿ ನಿರ್ಮಾಣದ ಚಿತ್ರವಾದ 'ಸಂಗೊಳ್ಳಿ ರಾಯಣ್ಣ' ಚಿತ್ರಕ್ಕೆ ಸುದೀಪ್ ಕಾಮೆಂಟರಿ ಬುಕ್‌ನಲ್ಲಿ ತನ್ನ ಕಂಠದಾನವನ್ನು ಮಾಡಿದ್ದಾರೆ. ಅಂದರೆ, ಈ ಇಬ್ಬರು ಆಪ್ತ ಗೆಳೆಯರ ಧ್ವನಿಯನ್ನು ಒಂದೇ ಚಿತ್ರದಲ್ಲಿ ಕೇಳಿ ಆನಂದಿಸುವ ಸದವಕಾಶವನ್ನು ಅಭಿಮಾನಿಗಳಿಗೆ ಅವರು ಮಾಡಿಕೊಟ್ಟಿದ್ದಾರೆಂದಾಯಿತು.

ಈ ಬೆಳವಣಿಗೆಯನ್ನು ಗಾಂಧಿನಗರದ ಜನ ಅತ್ಯಂತ ಕುತೂಹಲದಿಂದ ಗಮನಿಸುತ್ತ ಹೇಳಿದ್ದೇನು ಗೊತ್ತೇ? 'ಸುದೀಪ್ ಮತ್ತು ದರ್ಶನ್ ಇನ್ನೇನು ಒಂದೇ ಚಿತ್ರದಲ್ಲಿ ಒಟ್ಟಿಗೇ ನಟಿಸಲು ಕೇವಲ ಒಂದು ಹೆಜ್ಜೆ ಮಾತ್ರ ದೂರವಿದೆ' ಎಂದು.

ಖಂಡಿತವಾಗಿಯೂ ಸುದೀಪ್ ಮತ್ತು ದರ್ಶನ್ ಜೊತೆಯಾಗಿ ಕಾಣಿಸಿಕೊಳ್ಳುವ ಚಿತ್ರ ಈಗಿನ ಪರಿಸ್ಥಿತಿಯಲ್ಲಿ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಸಂಚಲನವನ್ನು ಮೂಡಿಸಿದರೆ ಆಶ್ಚರ್ಯವಿಲ್ಲ. ಇವರಿಬ್ಬರೂ ಆದಷ್ಟು ಬೇಗ ಒಂದೇ ಚಿತ್ರದಲ್ಲಿ ಕಾಣಿಸಿಕೊಂಡು ಹೊಸ ಇತಿಹಾಸವನ್ನು ಬರೆಯುವಂತಾಗಲಿ ಎಂಬುದು ನಮ್ಮ ಆಶಯ ಕೂಡ ಹೌದು. ❖



...ಯುತ ಕಾರಂತರು ಆಸನವನ್ನು ಅಲಂಕರಿಸಬೇಕಾಗಿ ...ತಿಸುತ್ತಿದ್ದೇವೆ" ಅಂದದ್ದಕ್ಕೆ ಕೆರಳಿ "ಅಲಂಕರಿಸೋದಾ? ...ಲ್ಲಿ ಬಂದದ್ದು ಅಲಂಕರಿಸೋದಕ್ಕಲ್ಲ" ಅಂತ ಚೆನ್ನಾಗಿ ...ದಿದ್ದರು.

...ಕಲ್ಲಡ್ಕನ ಜಾತಿ ರಾಜಕೀಯದ ಟ್ರಂಪ್ ಕಾರ್ಡ್ ಆಗಿ ...ರೀಕ್ಷಿತವಾಗಿ ಮಂತ್ರಿ ಪದವಿ ಗಿಟ್ಟಿಸಿದ ಹಾಲಿ ...ಜರಾಯಿ ಮಂತ್ರಿ ಶ್ರೀನಿವಾಸ ಪೂಜಾರಿ ತನ್ನ ...ಚಾಯತ್ ಅಧ್ಯಕ್ಷಗಿರಿಯ ಕಾಲದಲ್ಲಿ ...ರಾಮ ಕಾರಂತರು ಬದುಕಿಲ್ಲದ್ದನ್ನು ...ತಪಡಿಸಿಕೊಂಡು (ಕಾರಂತರು ...ಇದ್ದಾಗ ಉತ್ತರ ಕನ್ನಡದಲ್ಲಿ ಕೈಗಾ ...ದ್ಧ ಹೋರಾಡುವಾಗಲಾಗಲೀ, ...ಕ್ಷನ್‌ನಲ್ಲಿ ನಿಂತಿದ್ದಾಗಲಾಗಲೀ ...ಬೆಂಬಲಿಸದವರು) ಕಾರಂತರ ಹೆಸರಲ್ಲಿ ...ಸ್ತಿಯನ್ನು ಶುರುಮಾಡಿ ಹಂಚಹೊರಟಿದ್ದರು. ...ನೊಂದಿಗೆ ನಾರಿಗೂ ಬೆಲೆ ಸಿಗಲಿ ಎಂದು ತನ್ನ ... ಜತೆ ಕೋಟವನ್ನೂ ಸೇರಿಸಿಕೊಂಡು ಕಾರಂತರ ... ತಾನೇ ಕೋಟದ ಅಧಿಪತಿ ಎಂಬಂತೆ ತಣ್ಣಗೆ ...ಯುತ್ತಿದ್ದಾಗ (ಕಾರಂತರು ಜೀವಂತವಿದ್ದಾಗ ಅಪಾತ್ರ ...ರು ಅವರ ಹೆಸರಲ್ಲಿ ಪ್ರಶಸ್ತಿ ರಾಜಕಾರಣ ಮಾಡಿದಿದ್ದರೆ ...ಗೆ ಬಂದು ಉಗಿದು ಉಪ್ಪಿನಕಾಯಿ ಹಾಕುತ್ತಿದ್ದರು) ...ಗಿರಿಯೂ ಸಿಕ್ಕಿತು. ಆದರೆ ಕಾರಂತರ ಹೆಸರೇಳಿ ...ವ ಆತ ಮಾಡಿದ್ದು ಮಳೆತರಿಸುವ ನೆಪದಲ್ಲಿ ಜನರ ... ದುಡ್ಡನ್ನು ಅವೈಜ್ಞಾನಿಕವಾಗಿ ದೇಗುಲಕ್ಕೆ ಹಂಚಿ ...ಜ ಮಾಡಹೋದದ್ದು, ಆತನ ಪೂಜೆಯಿಂದ ಈತನಕ ...ದ್ಯಾದ್ಯಂತ ಮಳೆಬಾರದೇ ಜನ ಕಂಗಾಲಾಗಿದ್ದರೂ ...ಳು ಕೆಲವೆಡೆ ಮಳೆ ಸುರಿದಿತ್ತು, ಅದು ನಮ್ಮ ...ಯಿಂದಲೇ ಎಂದು ಹೇಳಿಕೊಂಡ ಆತ ಆ ಮಳೆಗೆ ...ವಾಗಿ ಹೋದ ಕೆಲಜೀವಗಳ ಹೊಣೆ ಹಾಗು ...ದ ಜಿಲ್ಲೆಯಲ್ಲಿ ಬಂದ ನೆರೆಹಾವಳಿಗೆ ಮನೆಗಳು ...ಗೊಂಡವರ ಹೊಣೆಯನ್ನು ಮಾತ್ರ ಹೊರಲೇ ... ಕಾರಂತರ ಹೆಸರೇಳಿ ತಿರುಗುವ ವ್ಯಕ್ತಿ ಮೂಢನಂಬಿಕೆಗೆ ಜನರ ಹಣ ಪೋಲು ಮಾಡಿ ಕಾರಂತರ ವ್ಯಕ್ತಿತ್ವಕ್ಕೇ ಮಸಿ ಬಳಿದಿತ್ತು.

ಇದೀಗ ಬೆಂಗಳೂರಿಂದಲೂ ಅಂತಹದ್ದೇ ಸುದ್ದಿ ಬಂದಿದೆ. ಬೆಂಗಳೂರಿನ ಕಲಾವಿದರ ಸಂಘಟನೆಯೊಂದು ಇದೇ ಕಾರಂತರ ಹೆಸರಿನಲ್ಲಿ ಸೌಹಾರ್ದ ಪ್ರಶಸ್ತಿಗಾಗಿ (ಒನ್ಸ್ ಅಗೈನ್, ಇಂತಹಕ್ಕೆಲ್ಲ ಉಗಿಯುವ ಕಾರಂತರು ಇಲ್ಲವೆಂದು ಖಚಿತಪಡಿಸಿಕೊಂಡ ಮೇಲೆ ಸ್ಥಾಪಿಸಲಾದ ಪ್ರಶಸ್ತಿ ಇದು) ನಾಡಿನ ಗ್ರೇಟ್ ಮಹಾನುಭಾವನೊಬ್ಬನನ್ನು ಆರಿಸಲಾಗಿದೆಯೆಂದು ಸುದ್ದಿ ಬಂದಿದೆ. ಆರಿಸಲಾದ ವ್ಯಕ್ತಿ ಚಂದ್ರಶೇಖರ ಸ್ವಾಮೀಜಿ ಅಲಿಯಾಸ್ ಚಂಭಟ್ಟನ ಹೆಸರೇನಾದರೂ ಮೇಲಿರುವ ಕಾರಂತರಿಗೆ ಗೊತ್ತಾದರೆ. ಅಲ್ಲಿಂದಲೇ ಪ್ರಶಸ್ತಿ ಕಮಿಟಿ ಮೇಲೆ ಅವರು ಚಪ್ಪಲಿ ಎಸೆದಾರು. ಸಂಘಟನೆ ಪ್ರಕಾರ ಈ ಮಹಾನ್ ವ್ಯಕ್ತಿ ವರ್ಲ್ಡ್ ಟ್ರೇಡ್ ಸೆಂಟರ್‌ಗೇ ವಾಸ್ತು ಹೇಳಿ ಬಂದವನಂತೆ (ಕಾರಂತರಿಗೂ ವಾಸ್ತುವಿಗೂ, ಸೌಹಾರ್ದಕ್ಕೂ ವಾಸ್ತುವಿಗೂ ಏನು ಸಂಬಂಧವೋ?), ಈತನಿಗೆ ಅಂತರರಾಷ್ಟ್ರೀಯ ಖ್ಯಾತಿ ಇದೆಯಂತೆ (ಚಾರ್ಲ್ಸ್ ಶೋಭ್‌ರಾಜ್ ಕೂಡ ಅಂತರರಾಷ್ಟ್ರೀಯ ಖ್ಯಾತನೇ. ಮುಂದಿನ ಬಾರಿ ಈತನಿಗೂ ಸೌಹಾರ್ದ ಪ್ರಶಸ್ತಿ ಇರಬಹುದೇನೋ?!! ಯಾರಿಗೆ ಗೊತ್ತು?)

ಮೂಲ್ಕಿ ಬಳಿಯ ಕಿಲ್ಪಾಡಿಯ ಗೋವಿಂದಭಟ್ಟನೆಂಬ ಮೂರನೇ ದರ್ಜೆ ಜ್ಯೋತಿಷಿಯ ಮಗನಾದ ಈತ ಉದ್ಯಮಿಗಳು, ಸಿನಿಮಾರಂಗದವರು, ದೊಡ್ಡ ದೊಡ್ಡ ರಾಜಕಾರಣಿಗಳನ್ನೆಲ್ಲ ಬುಟ್ಟಿಗೆ ಹಾಕಿಕೊಂಡು ಇದೀಗ ವರ್ಲ್ಡ್ ಟ್ರೇಡ್ ಸೆಂಟರ್, ದುಬೈ ಶೇಖ್‌ಗಳ ಹೆಸರೇಳಿಕೊಂಡು ದೊಡ್ಡ ದೊಡ್ಡ ವ್ಯವಹಾರಗಳಿಗೆಲ್ಲ ಕೈಹಾಕಿ ಕೂತಿದ್ದಾನೆ. ಜಿಲ್ಲೆಯಲ್ಲಿ ಖಾಸಗಿ ವಿಮಾನ ಹೊಂದಿರುವ ಏಕೈಕ ವ್ಯಕ್ತಿಯೆಂದರೆ ಈತನೇ. ಜನರ ಮೌಢ್ಯತೆಯನ್ನು ಬಂಡವಾಳವನ್ನಾಗಿಸಿಕೊಂಡು ಕೋಟ್ಯಾಂತರ ಹಣವನ್ನು ಗುಡ್ಡೆ ಹಾಕಿರುವ ಈತನ ವ್ಯವಹಾರವೆಲ್ಲ ದೊಡ್ಡ ದೊಡ್ಡವರೊಂದಿಗೆ ಮಾತ್ರ. ವಾಸ್ತುವೆಂಬ ಮೌಢ್ಯವನ್ನು ಜಗತ್ತಿನಾದ್ಯಂತ ಬಿತ್ತ ಹೊರಟ ಈತನಿಗೆ ಯಾವ ಆಧಾರದಲ್ಲಿ ಸೌಹಾರ್ದ ಪ್ರಶಸ್ತಿಯೋ..!!?

ಅದೂ ಉರಿಗಣ್ಣ ಶಿವರಾಮಕಾರಂತರ ಹೆಸರಿನಲ್ಲಿ ಅಕಟಕಟಾ?!!!


ಕಾರಂತರು ಹೇಗೇ ಇರಲಿ ಅವರಿಗೊಂದು ಧ್ಯೇಯ ಹಾಗು ಸಾಮಾಜಿಕ ಕಳಕಳಿಯಿತ್ತು, ಕಾಲು ಜಾರಿಬಿದ್ದು ಮಣಿಪಾಲ ಸೇರಿ ಕಾಲವಶವಾದ ಕಾರಂತರನ್ನು ಈ ದಂಡಪಿಂಡಗಳು ಸೇರಿ ಪುನಃ ಕೊಲ್ಲುತ್ತಿವೆಯಲ್ಲಾ? ಕಾರಂತರ ವ್ಯಕ್ತಿತ್ವವನ್ನು ಅರಿಯದವರೆಲ್ಲ ಸೇರಿಕೊಂಡು ಅಪಾತ್ರ ವ್ಯಕ್ತಿಗಳಿಗೆ ಸ್ವಲಾಭಕ್ಕಾಗಿ ಕಾರಂತರ ಹೆಸರಲ್ಲಿ ಅಭಿನಂದಿಸುತ್ತಿರುವುದು ಕಾರಂತರಿಗೆ ಮಾಡಲಾಗುತ್ತಿರುವ ಅವಮಾನವಲ್ಲದೇ ಬೇರೇನಲ್ಲ.

- ಶಶಿ ಪುತ್ತೂರು, ದ.ಕ.

ವೈದ್ಯರಿಗೆ ವೇತನ ಹೆಚ್ಚಳ, ಬಡಜನರಿಗೆ...?

ಮುಷ್ಕರ ಮಾಡುತ್ತಿದ್ದ ವೈದ್ಯರಿಗೆ ವೇತನ ಮತ್ತು ಭತ್ಯೆಗಳನ್ನು 60 % ರಿಂದ 98% ವರೆಗೂ ಹೆಚ್ಚಿಸಿ ಸರ್ಕಾರ ಅವರನ್ನು ಖುಷಿ ಪಡಿಸಿದೆ. ಇದು ಸರಿಯೇ? ಅಧಿಕಾರ ಇದೆಯೆಂದು ಯಾರಿಗೆ ಬೇಕಾದರೂ ಏನು ಬೇಕಾದರೂ ಕೊಡಬಹುದೇ?.... ಕೊಡಲಿ ಬಿಡಿ, ವೈದ್ಯರು ಖುಷಿಯಾಗಿರಲಿ ಅನ್ನಬಹುದು. ಆದರೆ, ಅದರ ಭಾರವನ್ನು ಹೊರುವವರಾರು?

ಸರ್ಕಾರ ಯಾವ ಖರ್ಚು ಮಾಡಿದರೂ ಅದರ ಭಾರವನ್ನು ಹೊರಬೇಕಾದವರು ಜನಸಾಮಾನ್ಯರು ಮತ್ತು ಬಡವರು. ಶ್ರೀಮಂತರು ಮತ್ತು ಅನುಕೂಲಸ್ಥರು ಆ ಭಾರವನ್ನು ಹೊರುವುದೇ ಇಲ್ಲ, ಅವರು ಒಂದು ಕೈಯಿಂದ ತೆರಿಗೆ ಕೊಟ್ಟರೆ ಮತ್ತೊಂದು ಕೈಯಿಂದ ಜನಸಾಮಾನ್ಯರು ಮತ್ತು ಬಡವರಿಂದ ವಸೂಲಿ ಮಾಡಿಕೊಳ್ಳುತ್ತಾರೆ. ಆದ್ದರಿಂದ ವೈದ್ಯರ ವೇತನವನ್ನು ಸರ್ಕಾರ ದುಪ್ಪಟ್ಟು ಮಾಡಿದ್ದರೆ ಅದನ್ನೆಲ್ಲಾ



ಬಡಜನತೆ ಬರಿಸಬೇಕಾಗುತ್ತದೆ. ಇದು ಪ್ರತಿಯೊಬ್ಬರೂ ಯೋಚಿಸಬೇಕಾದ ವಿಚಾರ.

ವೈದ್ಯರ ವೇತನವನ್ನು ದುಪ್ಪಟ್ಟು ಮಾಡಿರುವ ಸರ್ಕಾರ ಬಡಜನತೆಗೆ ಏನು ಮಾಡುತ್ತದೆ? ಅವರಿಗೆ ಔಷಧಿ ಕೊಳ್ಳಲು ಶಕ್ತಿ ಇಲ್ಲ... ಆರೋಗ್ಯ ಕಾಪಾಡಿಕೊಳ್ಳಲು ಪೌಷ್ಠಿಕ ಆಹಾರವಿಲ್ಲ.... ವಾಸಿಸಲು ಸರಿಯಾದ ಗೂಡಿಲ್ಲ... ಮಕ್ಕಳನ್ನು ಶಾಲೆಗೆ ಕಳಿಸುವ ಶಕ್ತಿ ಇಲ್ಲ... ಮೈತುಂಬ ಬಟ್ಟೆ ಇಲ್ಲ.... ಇವರ ಬಗ್ಗೆ ಇಲ್ಲದ ಕಾಳಜಿ ವೈದ್ಯರ ಮೇಲೆ ಏಕೆ?

ಸರ್ಕಾರ ಜನರ ಮೂಲಭೂತ ಅವಶ್ಯಕತೆಗಳನ್ನು ಮೊದಲು ಪೂರೈಸಬೇಕು. ನಂತರ ಬೇರೆಯವರ ಬಗ್ಗೆ ಅನುಕಂಪ ತೋರಲಿ. ಇದನ್ನು ಯಾರಿಗೆ ಹೇಳೋಣ? ಯಾರಿಗೆ ಹೇಳಿದರೂ ಪ್ರಯೋಜನವಿಲ್ಲ, ರಾಜ್ಯದ ಆಡಳಿತದ ಜವಾಬ್ದಾರಿಯನ್ನು ಹೊತ್ತ ಮುಖ್ಯಮಂತ್ರಿಯವರಿಗೆ ಮಾತ್ರ ನಾನು ಇದನ್ನು ಹೇಳಬಯಸುತ್ತೇನೆ. ಇದಕ್ಕೆ ಮಾನ್ಯ ಶ್ರೀ ಜಗದೀಶ್ ಶೆಟ್ಟರಲ್ಲಿ ಉತ್ತರ ಏನಾದರೂ ಇದೆಯೇ?... ಇದ್ದರೆ ತಿಳಿಸಲಿ...

- ವೀರಣ್ಣ ಮತ್ತು... ಬೆಂಗಳೂರು

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly

ಕನ್ನಡದ ನಾಯಕಿಯರು ಈಗ ಐಟಂ ನಟಿಯರು



ಪೂಜಾ

ರಾಗಿಣಿ

ದಿನಕ್ಕೊಬ್ಬಳು ಕನ್ನಡದ ನಟಿ ಐಟಂ ಸಾಂಗ್‌ಗಳಲ್ಲಿ ಬಟ್ಟೆಬಿಚ್ಚಿ ತನ್ನ ಮೈಸಿರಿಯನ್ನು ಪ್ರದರ್ಶಿಸುತ್ತಿರುವ ಸುದ್ದಿ ಗಾಂಧಿನಗರದಲ್ಲಿ ಅಚ್ಚರಿ ಮೂಡಿಸಿದೆ.

ಮೊದಲಿಗೆ 'ಜಾನಿ ಮೇರಾ ನಾಂ' ಚಿತ್ರದಲ್ಲಿ ರಮ್ಯ 'ಊರಿಗೊಬ್ಬಳು ಪದ್ಮಾವತಿ' ಎಂಬ ಹಾಡಿಗೆ ಸಖತ್ತಾಗಿ ಕುಣಿದು ಪಡ್ಡೆ ಹುಡುಗರ ದಿಲ್ ಖುಷ್ ಮಾಡಿದ್ದಳು. ಅದಾದ ನಂತರ 'ಕಳ್ಳ ಸುಳ್ಳ ಮಳ್ಳ' ಚಿತ್ರದಲ್ಲಿ ರಾಗಿಣಿ 'ತುಪ್ಪ ಬೇಕಾ ತುಪ್ಪ' ಎಂದು ಮಾದಕವಾಗಿ ಕುಣಿದು ತಾನು ರಮ್ಯಳಿಗಿಂತ ಕಡಿಮೆಯೇನಿಲ್ಲ ಎಂದು ಸಾಬೀತುಪಡಿಸಿದ್ದಳು. ಇವರಿಬ್ಬರ ಬೆನ್ನಿಗೇ ಪೂಜಾ ಗಾಂಧಿ ಕೂಡ 'ದಂಡುಪಾಳ್ಯ' ಚಿತ್ರದಲ್ಲಿ ಐಟಂ ಸಾಂಗ್ ಮಾದರಿಯಲ್ಲಿ ಕುಣಿದು ಕುಪ್ಪಳಿಸಿ ಒಂದು ರೀತಿಯ ಹವಾ ಎಬ್ಬಿಸಿದ್ದಳು. ಇವೆಲ್ಲ ನಮ್ಮ ಕನ್ನಡ ಚಿತ್ರರಂಗದ ನಾಯಕಿಯರ ಮೊದಲ ಸುತ್ತಿನ ಐಟಂ ಸಾಂಗ್‌ಗಳಾಗಿದ್ದವು.

ಈಗ ಮತ್ತೆ ಈ ಮೂವರು ನಟಿಯರು ಐಟಂ ಸಾಂಗ್‌ಗಳ ಮೂಲಕ ಪೈಪೋಟಿಗೆ ಬಿದ್ದಿರುವಂತಿದೆ. ಇವರ ಇಂತಹ ಉತ್ಸಾಹಕ್ಕೆ ಕಾರಣ ಐಟಂ ಸಾಂಗ್‌ಗಾಗಿ ನಿರ್ಮಾಪಕ ಕೊಡುವ ಭಾರೀ ಮೊತ್ತವೋ? ಅಥವಾ ಈ ಐಟಂ ಸಾಂಗ್‌ಗಳಿಂದ ತಮ್ಮ ಅಭಿಮಾನಿಗಳನ್ನು ಖುಷಿಪಡಿಸಬಹುದು ಎಂಬ ಕಾರಣವೋ ಗೊತ್ತಿಲ್ಲ, ಆದರೆ ಒಂದು ಮಾತಂತೂ ಸತ್ಯ. ಈ ಹಿಂದೆ ಐಟಂ ಸಾಂಗ್ ಎಂದರೆ ಹಿಂಜರಿಯುತ್ತಿದ್ದ ಈ ನಾಯಕಿಯರು ಈಗ ಮತ್ತೊಂದು ಸುತ್ತಿನ ಬಿಸಿ ಬಿಸಿ ನೃತ್ಯಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ವಿಶೇಷವೇ ಸರಿ.

'ಜಾನಿ ಮೇರಾ ನಾಮ್' ಚಿತ್ರದಲ್ಲಿ ರಮ್ಯ ನಾಯಕಿಯಾಗಿದ್ದರಿಂದ ಆ ಸಿನಿಮಾದಲ್ಲಿ ಆಕೆ ಮಾದಕವಾಗಿ ನರ್ತಿಸಿದ್ದರಲ್ಲಿ ಆಶ್ಚರ್ಯವಿರಲಿಲ್ಲ. ಅದೇರೀತಿ 'ಕಳ್ಳ ಮಳ್ಳ ಸುಳ್ಳ' ಚಿತ್ರದಲ್ಲಿ ರಾಗಿಣಿಯೂ, 'ದಂಡುಪಾಳ್ಯ' ಚಿತ್ರದಲ್ಲಿ ಪೂಜಾ ಗಾಂಧಿ ನಾಯಕಿಯಾಗಿದ್ದರು. ಆದರೆ ಆಶ್ಚರ್ಯದ ಸಂಗತಿಯೆಂದರೆ ದ್ವಿತೀಯ ಸುತ್ತಿನ ಪೈಪೋಟಿಯಲ್ಲಿ ಈ ಮೂವರೂ ತಾವು ನಾಯಕಿಯರಾಗಿ ನಟಿಸದಿರುವ ಚಿತ್ರಗಳಲ್ಲಿ ಒಂದೇ ಒಂದು ಹಾಡಿಗಾಗಿ ಬಂದುಹೋಗುತ್ತಿದ್ದಾರೆ. ಎಂದಿನಂತೆ ಇಂತಹ ಒಂದು ಸಂಪ್ರದಾಯಕ್ಕೆ ಮುನ್ನುಡಿ ಹಾಕಿದ ಕೀರ್ತಿ ರಮ್ಯಳಿಗೆ ಸಲ್ಲಬೇಕು. ಆಕೆ ಕವಿತಾ ಲಂಕೇಶ್ ನಿರ್ದೇಶನದ 'ಕ್ರೇಜಿಲೋಕ' ಚಿತ್ರದಲ್ಲಿ ನಾಯಕಿಯಲ್ಲದಿದ್ದರೂ ಒಂದು ಐಟಂ ಸಾಂಗ್‌ನಲ್ಲಿ ಭರ್ಜರಿಯಾಗಿ ಕುಣಿದು, ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿದಳು. ಅದನ್ನು ನೋಡಿದ ರಾಗಿಣಿ ಈಗ ರಮ್ಯ ಜೊತೆಗೆ ಸ್ಪರ್ಧೆಗೆ ಇಳಿದಂತೆ ಆಕೆಯೂ ತಾನು ನಾಯಕಿಯಲ್ಲದ ಚಿತ್ರದ ಒಂದು ಹಾಡಿನಲ್ಲಿ ತನ್ನ ಮೈಮಾಟವನ್ನು ಪ್ರದರ್ಶಿಸಿದ್ದಾಳೆ. ಅದು ಪ್ರೇಮ್ ನಾಯಕನಾಗಿ ನಟಿಸುತ್ತಿರುವ 'ಪ್ರೇಮ್ ಅಡ್ಡ' ಚಿತ್ರದಲ್ಲಿ, ಈ ಹಾಡಿಗೆ ವಾಸ್ತವವಾಗಿ ವಿದೇಶಿ ಐಟಂ ಗರ್ಲ್‌ನ್ನು ತರುವುದಾಗಿ ಪ್ರೇಮ್ ಹೇಳಿದ್ದರು. ಆದರೆ ಕೊನೆಗೆ ರಾಗಿಣಿಯಲ್ಲೇ ತೃಪ್ತಿ ಪಟ್ಟುಕೊಂಡಿದ್ದಾರೆ. ರಾಗಿಣಿ ವಿದೇಶಿ ಹುಡುಗಿಯರ ಲೆವೆಲ್‌ಗೆ ಮೈಮಾಟ ಪ್ರದರ್ಶಿಸಿದ್ದಾರೋ, ಇಲ್ಲವೋ ಇನ್ನೂ ಗೊತ್ತಾಗಿಲ್ಲ.

ಇವರಿಬ್ಬರೂ ಹೀಗೆ ಸ್ಪರ್ಧೆಗಿಳಿದವರಂತೆ ಐಟಂ ಸಾಂಗ್‌ಗಳಲ್ಲಿ ನರ್ತಿಸುತ್ತಿರುವಾಗ ತಾನೇಕೆ ಮೂಕಪ್ರೇಕ್ಷಕಳಾಗಬೇಕು ಎಂದು ಪೂಜಾ ಗಾಂಧಿಗೆ ಅನ್ನಿಸಿತೋ ಏನೊ? ಗುರುಪ್ರಸಾದ್ ನಿರ್ದೇಶನದ 'ಡೈರೆಕ್ಟರ್ಸ್ ಸ್ಪೆಷಲ್' ಚಿತ್ರದಲ್ಲಿ ಪೂಜಾ ಗಾಂಧಿ ಕೂಡ ನಿರ್ದೇಶಕರ ಸೂಚನೆಯಂತೆ ಭರ್ಜರಿಯಾಗಿ ಕಾಣಿಸಿಕೊಂಡಿದ್ದಾಳೆ.

ಹೀಗೆ ಕನ್ನಡದ ಮೂವರು ನಾಯಕಿಯರು ಸ್ಪರ್ಧೆಗೆ ಬಿದ್ದವರಂತೆ ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳುತ್ತಿರುವುದನ್ನು ನೋಡಿ ಅತ್ತ ಫುಲ್‌ಟೈಂ ನಾಯಕಿಯೂ ಅಲ್ಲದ, ಇತ್ತ ಪೋಷಕ ನಟಿಯೂ ಅಲ್ಲದ ನೀತು ಎಂಬ ಸುಂದರಿ ಕೂಡ ಕೊನೆಗೂ ಮನಸ್ಸು ಮಾಡಿ 'ಬೆಂಗಳೂರು ಮೆಟ್ರೊ' ಚಿತ್ರಕ್ಕಾಗಿ ಈಗ ಮೈಚಳಿ ಬಿಟ್ಟು ನರ್ತಿಸಿ ಸುದ್ದಿ ಮಾಡಿದ್ದಾಳೆ.

ಹಾಗೆ ನೋಡಿದರೆ, ಕನ್ನಡದಲ್ಲಿ ನಾಯಕಿಯಾಗಿ ಮೊಟ್ಟಮೊದಲ ಬಾರಿಗೆ ಬೋಲ್ಡ್ ಆಗಿ ಐಟಂ ಸಾಂಗ್‌ಗಳಲ್ಲಿ ಕಾಣಿಸಿದ ಕೀರ್ತಿ ಭಾವನಾಗೆ ಸಲ್ಲುತ್ತದೆ. ವಿಜಯ ರಾಘವೇಂದ್ರ ನಾಯಕನಾಗಿ ನಟಿಸಿ, ಮಹೇಂದರ್ ನಿರ್ದೇಶಿಸಿದ 'ನಿನಗಾಗಿ' ಎಂಬ ಚಿತ್ರದಲ್ಲಿ ಭಾವನಾ ಮೊದಲ ಬಾರಿಗೆ ತನ್ನ ಮೈಸಿರಿಯನ್ನು ಯಥೇಚ್ಛವಾಗಿ ಪ್ರದರ್ಶಿಸಿ ಗಾಂಧಿನಗರದ ಜನ ಬೆಚ್ಚಿಬೀಳುವಂತೆ ಮಾಡಿದ್ದಳು. ಈ ಬಗ್ಗೆ ಭಾವನಾರನ್ನು ಪ್ರಶ್ನಿಸಿದಾಗ ಆರಂಭದಲ್ಲಿ ಆಕೆ "ನನಗೆ ನನ್ನ ಪರ್ಸ್ ಬಹಳ ಮುಖ್ಯ" ಎಂದು ಅರ್ಥಗರ್ಭಿತವಾಗಿ ಹೇಳಿದ್ದರು. ಆನಂತರ ಆಕೆ ತನ್ನ ಡೈಲಾಗ್‌ನ್ನು ಬದಲಾಯಿಸುತ್ತ "ಅದು ಖಂಡಿತವಾಗಿಯೂ ಐಟಂ ಸಾಂಗ್ ಆಗಿರಲಿಲ್ಲ, ದಯವಿಟ್ಟು ಅದನ್ನು ಐಟಂ ಸಾಂಗ್ ಎಂದು ಕರೆಯಬೇಡಿ, ನಾನು ಮೂಲತಃ ಭರತನಾಟ್ಯ ನೃತ್ಯ ಪ್ರವೀಣೆ. ನನಗೆ ಯಾವುದೇ ರೀತಿಯ ನೃತ್ಯ ಮಾಡುವುದರಲ್ಲಿ ಹಿಂಜರಿಕೆಯಿಲ್ಲ" ಎಂದು ಸಮಜಾಯಿಸಿ ಹೇಳಿದ್ದರು. ಅದಾದನಂತರ ಭಾವನಾಳನ್ನು 'ಐಟಂ ಸಾಂಗ್ ಭಾವನಾ' ಎಂದು ಕರೆದಾಗ ಆಕೆ ಹುಸಿ ಕೋಪ ವ್ಯಕ್ತಪಡಿಸುತ್ತಿದ್ದಳು. ಅಂತಹ ಭಾವನಾ ಇತ್ತೀಚೆಗೆ ದರ್ಶನ್ ಜೊತೆಗೆ 'ಚಿಂಗಾರಿ' ಚಿತ್ರದ ಹಾಡೊಂದರಲ್ಲಿ ಕಾಣಿಸಿಕೊಂಡ ರೀತಿ ನೋಡಿದ್ದರೆ ಮುಂಬೈ ಬೆಡಗಿಯರೂ ಬೆಚ್ಚಿಬೀಳುತ್ತಿದ್ದರೋ ಏನೊ?

ಈ ಮಧ್ಯೆ ಸುಮನ್ ರಂಗನಾಥ್ ಆಗಾಗ ಬಾಂಬೆಯಿಂದ ಬೆಂಗಳೂರಿಗೆ ಬರುವುದೇ ಐಟಂ ಸಾಂಗ್‌ಗೆ ಹೆಜ್ಜೆ ಹಾಕಲು ಅನ್ನೋದು ಈಗಾಗಲೇ ಎಲ್ಲರಿಗೂ ಗೊತ್ತಿರೋ ವಿಷಯ.

ಖಂಡಿತವಾಗಿಯೂ ನಮ್ಮ ಕನ್ನಡದ ನಾಯಕಿಯರು ಹಿಂದಿಯ ನಾಯಕಿಯರನ್ನು ಅನುಸರಿಸುತ್ತಿರುವುದು ಸಂತೋಷದ ವಿಷಯ. ಹಿಂದಿಯಲ್ಲಿ ಕತ್ರಿನಾ ಕೈಫ್ ಮತ್ತು ಕರೀನಾ ಕಪೂರ್ ಯಾವಾಗ ಬೋಲ್ಡ್ ಆಗಿ ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಂಡರೋ ಅಲ್ಲಿಂದಾಚೆಗೆ ಭಾರತೀಯ ಚಿತ್ರರಂಗದ ಬಹುತೇಕ ಎಲ್ಲ ಭಾಷೆಯ ನಾಯಕಿಯರಿಗೆ ತಾವೂ ಕೂಡ ಮೈಮಾಟವನ್ನು ಪ್ರದರ್ಶಿಸುವ ಇಂತಹ ನೃತ್ಯಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳಬೇಕೆಂಬ ಅದಮ್ಯ ಆಸೆ ಹೆಚ್ಚುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಸಾಧಾರಣವಾಗಿ ನಾಯಕ ನಟನಿಗೆ ಸಿಗುವ ಸಂಭಾವನೆಗೆ ಹೋಲಿಸಿದರೆ ನಾಯಕ ನಟಿಯರಿಗೆ ಸಿಗುವ ಆದಾಯ ಬಹಳ ಕಡಿಮೆ. ಅಂತಹ ನಾಯಕಿಯರು ಕೇವಲ ಎರಡೇ ಎರಡು ದಿನಗಳ ಕಾಲ ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳಲು ದುಬಾರಿ ಸಂಭಾವನೆಯನ್ನು ಪಡೆಯುತ್ತಿದ್ದಾರೆಂಬುದು ಕೂಡ ನಿಜ. ಇದು ಕೂಡ ಇವರೆಲ್ಲ ಐಟಂ ಸಾಂಗ್‌ಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳಲು ಕಾರಣವಾಗಿದೆ ಎಂಬುದನ್ನು ಕೂಡ ಒಪ್ಪಲೇಬೇಕು.

ಇತ್ತೀಚೆಗೆ ದ್ವಾರಕೀಶ್ ತನ್ನ 70ನೇ ಹುಟ್ಟುಹಬ್ಬದ ಸಂಭ್ರಮದ ಸಂದರ್ಭದಲ್ಲಿ 'ಕುಳ್ಳ ಏಜೆಂಟ್ 000' ಚಿತ್ರದ ಒಂದೇ ಹಾಡಿನಲ್ಲಿ ಆಗಿನ ಸೆಕ್ಸ್ ಬಾಂಬ್‌ಗಳಾದ ಜಯಮಾಲಿನಿ, ಅನುರಾಧ ಮತ್ತು ಸಿಲ್ಕ್ ಸ್ಮಿತಾ - ಈ ಮೂವರನ್ನು ಅರೆನಗ್ನವಾಗಿ ತೋರಿಸಿದ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದರು. ಆ ಹಾಡಿನಲ್ಲಿ ನಟಿಸಿದ ಸುದರ್ಶನ್ ಕೂಡ ಮೊನ್ನೆ ಅದನ್ನು ನೆನೆಸಿಕೊಂಡು ರೋಮಾಂಚನಗೊಂಡಿದ್ದರು. ಹೀಗೆ ಐಟಂ ಸಾಂಗ್‌ಗಳಿಗೆ ತನ್ನದೇ ಆದ ಖ್ಯಾತಿ-ಕುಖ್ಯಾತಿ, ಕೀರ್ತಿ ಮತ್ತು ಜನಪ್ರಿಯತೆ ಇದ್ದೇ ಇರುತ್ತದೆ. ಈಗಂತೂ ನಾಯಕಿಯರೇ ಇಂತಹ ನೃತ್ಯಗಳಲ್ಲಿ ತಮ್ಮೆಲ್ಲ ಬಿಗುಮಾನ ಬಿಟ್ಟು ನರ್ತಿಸುವುದರಿಂದ ಸಹಜವಾಗಿ ಅವರ ಅಭಿಮಾನಿಗಳಿಗೆ ಥ್ರಿಲ್ ಆಗುತ್ತಿದೆ. ಆದರೆ ಹಿಂದಿಯ ಕತ್ರಿನಾ ಅಥವಾ ಕರೀನಾ ತರಹ ನಮ್ಮ ನಾಯಕಿಯರು ಇನ್ನೂ ಒಂದೇ ಒಂದು ಸೂಪರ್ ಹಿಟ್ ಐಟಂ ಸಾಂಗ್ ಕೊಟ್ಟಿಲ್ಲ ಎಂಬುದು ಮಾತ್ರ ವಿಷಾದನೀಯ.

● ಶೆಣೈ



ಅನುರಾಧ



ಜಯಮಾಲಿನಿ



ಸಿಲ್ಕ್ ಸ್ಮಿತಾ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, ...
Fax : 26604536, E-mail ...